# ಯುಗರಶ್ಮಿ

- ★ ಧರ್ಮ ಮತ್ತು ವಿಚಾರ ವಾದ
- ★ ಇಸ್ಲಾಂ ಧರ್ಮ ಮತ್ತು ಅಹಿಂಸೆ
- ★ ಇಸ್ಲಾಮೀ ರಾಷ್ಟ್ರಗಳಲ್ಲಿ ವಿಜ್ಞಾನ ಇಂದು
- ★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
- ★ ಬೇಗಂ ಮೌದೂದಿಯ ವಿಲಾಪ
- ★ ಪಾಪಕ್ಕೊಂದು ನೆಪ
- ★ ಗೋರ್ಬಚೋವ್ ಪ್ರಾರ್ಥನೆ
- ★ ಕ್ರಿಕೆಟ್ - ಪಾಕಿಸ್ತಾನ - ಭಾರತೀಯ ಮುಸ್ಲಿಮರು


ತ್ರೈಮಾಸಿಕ

ಫೆಬ್ರವರಿ **1988**

ಬೆಲೆ: ರೂ. **1-50**


(ಓ ಪ್ರವಾದಿ) ನನ್ನ ದಾಸರು ನಿನ್ನೊಡನೆ ನನ್ನ ಬಗ್ಗೆ ಕೇಳಿದಾಗ (ನೀನು ಹೇಳು)- ನಾನು (ಅವರ) ಸಮೀಪದಲ್ಲೇ ಇದ್ದೇನೆಂದು. ನನ್ನನ್ನು ಪ್ರಾರ್ಥಿಸುವವನ ಪ್ರಾರ್ಥನೆಯನ್ನು ನಾನು ಸ್ವೀಕರಿಸುತ್ತೇನೆ. ಆದುದರಿಂದ ಪ್ರಾರ್ಥನೆ ಮಾಡುವವರು ನನ್ನ ಆಜ್ಞೆಯನ್ನು ಪಾಲಿಸಲಿ ಮತ್ತು ನನ್ನನ್ನು ನಂಬಲಿ - ಅವರು ಮಾರ್ಗದರ್ಶನ ಪಡೆಯಲಿಕ್ಕಾಗಿ.

—ಪವಿತ್ರ ಖುರ್‌ಆನ್ (2 : 187)

# ಯುಗರಶ್ಮಿ ತ್ರೈಮಾಸಿಕ

**10–23–1008 ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001.**

ಬಿಡಿಪ್ರತಿ : ರೂ. **1.50**

ವಾರ್ಷಿಕ ಚಂದಾ : ರೂ. **6.00**

ಅಂಚೆ ಮೂಲಕ : ರೂ. **8-00**


**ವಿಷಯ ಸೂಚಿಕೆ :**


| | | ಪುಟ |
|---|---|---|
| * ಯುಗರಶ್ಮಿಗೆ ಹದಿಮೂರನೇ ಹರೆಯ | ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 2 |
| * ಕೃಪೆ ಹಾಗೂ ಸಹಾನುಭೂತಿ | ... | 2 |
| * ಧರ್ಮ ಮತ್ತು ವಿಚಾರವಾದ | ... | 3 |
| * ಇಸ್ಲಾಂ ಧರ್ಮ ಮತ್ತು ಅಹಿಂಸೆ | ... | 14 |
| * ಇಸ್ಲಾಮೀ ರಾಷ್ಟ್ರಗಳಲ್ಲಿ ವಿಜ್ಞಾನ ಇಂದು | ... | 23 |
| * ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ – 5 | ... | 26 |
| * ಬೇಗಂ ಮೌದೂದಿಯ ವಿಲಾಪ | ... | 35 |
| * ಪಾಪಕ್ಕೊಂದು ನೆಪ | ... | 41 |
| * ಗೋರ್ಬಚೋವ್ ಪ್ರಾರ್ಥನೆ | ... | 44 |
| * ಕ್ರಿಕೆಟ್ – ಪಾಕಿಸ್ತಾನ – ಭಾರತೀಯ ಮುಸ್ಲಿಮರು | ... | 45 |
| * ಜಿಬ್ರೀಲ್ (ಅ.) ನಿವೃತ್ತಿ | ... | 46 |
| * ಅಹ್ಮದಿಯಾ ವಾರ್ತೆಗಳು | ... | 47 |



## AHMADIYYA URDU LITERATURE

1. Aqaide Ahmadiyyath
2. Nuzoolul Masih
3. Kya Hazrath Masih Nasree Zinda Hein?
4. Masih Hindustan Mein
5. Hazrath Masih Mashriq Mein
6. Khatme Nubuwwath Ki Haqeeqath
7. Khathamunnabiyyeen Aur Buzurgane Ummath

*—: WILL BE SENT FREE :—*

Apply with 30 paise stamp for each book to :

**The Book Secretary,**

**Ahmadiyya Muslim Mission**

10–23–1008 Ansari Road, Bunder, Mangalore–575001

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


ಸಂಪಾದಕ : ಮುಹಮ್ಮದ್ ಯೂಸುಫ್

| | | |
|---|---|---|
| ಸಂಪುಟ: 13 | ನವಂಬರ್ 87 – ಫೆಬ್ರವರಿ 88 / ನುಬುವ್ವತ್ 1367 – ತಬ್ಲೀಗ್ 1368 | ಸಂಚಿಕೆ: 1–2 |


## ಯುಗರಶ್ಮಿಗೆ ಹದಿಮೂರನೇ ಹರೆಯ

ಈ ಸಂಚಿಕೆಯೊಂದಿಗೆ "ಯುಗರಶ್ಮಿ" ತನ್ನ ಹದಿಮೂರನೇ ಹರೆಯಕ್ಕೆ ಕಾಲಿಡುತ್ತಿದೆ. ಈ ಶುಭ ಸಂದರ್ಭದಲ್ಲಿ ನಾವು ಅಲ್ಲಾಹನಿಗೆ ಅನೇಕಾನೇಕ ನಮನಗಳನ್ನು ಸಲ್ಲಿಸುತ್ತೇವೆ ಹಾಗೂ ನಮ್ಮ ವಾಚಕರಿಗೂ ಹಿತೈಷಿಗಳಿಗೂ ಶುಭವನ್ನು ಹಾರೈಸುತ್ತೇವೆ.

ಯುಗರಶ್ಮಿ ಕಳೆದ ಹನ್ನೆರಡು ವರ್ಷಗಳಲ್ಲಿ ಒಮ್ಮೆಯೂ ಚಂದಾದರವನ್ನು ಏರಿಸಿಲ್ಲ. ಆದರೆ ಅನಿವಾರ್ಯ ಕಾರಣದಿಂದಾಗಿ ಈ ಸಂಚಿಕೆಯಿಂದ ಬಿಡಿಪ್ರತಿಗೆ ಒಂದು ರೂಪಾಯಿಯಿಂದ ಒಂದೂವರೆ ರೂಪಾಯಿಗೆ ಹೆಚ್ಚಿಸಲಾಗಿದೆ. ಓದುಗರೆಲ್ಲರೂ ಸಹಕರಿಸಬೇಕಾಗಿ ಕೋರಿಕೆ.

—ಸಂಪಾದಕ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಓರ್ವ ಹೆಣ್ಣಿನ ಪ್ರಾಥಮಿಕ ಕರ್ತವ್ಯ ಪತಿಯೊಂದಿಗೆ; ಒಬ್ಬ ಗಂಡಿನ ಪ್ರಾಥಮಿಕ ಕರ್ತವ್ಯ ತಾಯಿಯೊಂದಿಗೆ.

2. ತಲೆಗೆ ನೋವಾದರೆ ಶರೀರವಿಡೀ ನೋವಾಗುವಂತೆ ವಿಷಮತೆಗಳಲ್ಲಿ ಅನ್ಯೋನ್ಯ ಭಾಗಿಗಳಾಗಬೇಕಾಗುವುದು ಸತ್ಯವಿಶ್ವಾಸಿಗಳ ಲಕ್ಷಣವಾಗಿದೆ.

3. ಯಾರೊಡನೆಯಾದರೂ ನಿಮಗೆ ಗೆಳೆತನವಾದರೆ ಆತನ ಹೆಸರು, ಆತನ ತಂದೆಯ ಹೆಸರು ಮತ್ತು ಆತನ ಊರಿನ ಹೆಸರು ಕೇಳಿ ತಿಳಿದುಕೊಳ್ಳಿರಿ. ಇವೆಲ್ಲ ಪರಸ್ಪರ ಸ್ನೇಹವನ್ನು ಬಲಪಡಿಸುವುವು.

4. ನೀವು ಯಾರನ್ನಾದರೂ ಗೆಳೆಯನನ್ನಾಗಿ ಮಾಡಿದರೆ ಆತನನ್ನು ನೀವು ಎಂದಿಗೂ ಸಂಶಯಿಸಬಾರದು. ಆತನ ಕುರಿತು ನೀವು ಬೇರೆಯವರೊಡನೆ ಕೇಳಲೂ ಬಾರದು. ಆತನ ಬಗ್ಗೆ ಆಳವಾಗಿ ತಿಳಿಯಲು ನೀವು ಹೋಗಬೇಡಿರಿ. ಆತನ ವಿರೋಧಿಗಳು ಅಸತ್ಯವಾದುದನ್ನು ನಿಮ್ಮೊಡನೆ ಹೇಳಿಯಾರು. ನಿಮ್ಮ ಪರಸ್ಪರ ಸ್ನೇಹ ಮುರಿಯಲು ಅದು ಹೇತುವಾದೀತು.

5. ಒಬ್ಬ ನೆರೆಕರೆಯವನಿಗೆ ಕೆಲವು ಹಕ್ಕುಗಳಿವೆ.

6. ನಿಮ್ಮ ನೆರೆಕರೆಯವರು ನಿಮ್ಮನ್ನು ಹೊಗಳಿದರೆ ನೀವು ಉತ್ತಮರು; ನಿಮ್ಮ ನೆರೆಕರೆಯವರು ನಿಮ್ಮನ್ನು ತೆಗಳಿದರೆ ನೀವು ಕೆಟ್ಟವರು.

7. ನೆರೆಕರೆಯವನೊಡನೆ ದೋಷಕರವಾಗಿ ವರ್ತಿಸುವವನು ಸತ್ಯವಿಶ್ವಾಸಿಯಲ್ಲ; ಸತ್ಯವಿಶ್ವಾಸಿಯಾಗಲಿಕ್ಕೆ ಅಸಾಧ್ಯ.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ Wisdom of the Holy Prophetನಿಂದ ಉದ್ಧೃತ)

---

# ಕೃಪೆ ಹಾಗೂ ಸಹಾನುಭೂತಿ

"ನನ್ನನ್ನು ವಾಗ್ದತ್ತ ಮಸೀಹ್ ಎಂದು ನಂಬಿದ ನನ್ನ ಅನುಚರ ಸಂಘಕ್ಕೆ ನಾನು ಪ್ರತ್ಯೇಕವಾಗಿ ಉಪದೇಶಿಸಿಕೊಳ್ಳಲಿ: ನೀವು ಎಲ್ಲಾ ಕೆಡುಕುಗಳಿಂದಲೂ ದೂರವಿದ್ದುಕೊಳ್ಳಿರಿ. ಮನುಷ್ಯ ಸಮುದಾಯದೊಡನೆ ಸಹಾನುಭೂತಿಯಿಂದ ವರ್ತಿಸಿರಿ. ನಿಮ್ಮ ಹೃದಯಗಳನ್ನು ಹಗೆಯಿಂದಲೂ ವಿದ್ವೇಷದಿಂದಲೂ ಪರಿಶುದ್ಧವಾಗಿಡಿರಿ. ಈ ಪ್ರಕಾರ ವರ್ತಿಸಿದರೆ ನೀವು ದೇವದೂತ (ಮಲಕ್)ರಂತೆ ಆಗಿಬಿಡುವಿರಿ. ಮನುಷ್ಯರೊಡನೆ ಕೃಪೆ ಮತ್ತು ಸಹಾನುಭೂತಿಯನ್ನು ಉಪದೇಶಿಸದ ಧರ್ಮ ಎಷ್ಟು ಮಲಿನವೂ ಅಶುದ್ಧವೂ ಆದ ಧರ್ಮವಾಗಿದೆ! ವ್ಯಕ್ತಿಪರವಾದ ಹಗೆಯ ಮುಳ್ಳುಗಳಿಂದ ತುಂಬಿದ ದಾರಿ ಎಷ್ಟು ದುರ್ಗಮವಾದ ಮಾರ್ಗವಾಗಿದೆ! ನನ್ನೊಂದಿಗೆ ಸೇರಿರುವ ನೀವು ಹಾಗೆ ಆಗಬಾರದು. ಧರ್ಮದ ಉದ್ದೇಶ ಲಕ್ಷ್ಯವೇನೆಂದು ನೀವು ಯೋಚಿಸಿರಿ. ಮನುಷ್ಯರಿಗೆ ಉಪದ್ರವ ಮಾಡುವುದೋ ನಿಮ್ಮ ಕೆಲಸ? ದೇವರೊಡನೆ ಲೀನವಾದ ಒಂದು ಜೀವಿತವನ್ನು ಗಳಿಸುವುದಕ್ಕಾಗಿದೆ ಧರ್ಮವಿರುವುದು. ದೇವಗುಣಗಳು ಮನುಷ್ಯನ ಜೀವಿತದಲ್ಲಿ ಪ್ರವೇಶಿಸುವ ವರೆಗೆ ಯಾರಿಗೂ ಅದನ್ನು ಪಡೆಯಲು ಸಾಧ್ಯವಾಗಿಲ್ಲ; ಇನ್ನು ಮುಂದೆ ಯಾರಿಗೂ ಸಾಧ್ಯವೂ ಅಲ್ಲ. ಆದುದರಿಂದ, ದೇವಹಿತಕ್ಕಾಗಿ ನೀವು ಎಲ್ಲರೊಡನೆ ಕೃಪೆಯುಳ್ಳವರಾಗಿರಿ. ಆಗ, ಸ್ವರ್ಗದಿಂದ ನಿಮ್ಮ ಮೇಲೆ ಕೃಪೆ ವರ್ಷಿಸಲ್ಪಡುವುದು." (ಜಿಹಾದ್, ಪುಟ 13)

**ಹಝ್ರತ್ ಅಹ್ಮದ್**
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಧರ್ಮ ಮತ್ತು ವಿಚಾರ ವಾದ

★ ಎನ್. ಅಬ್ದುರ್ರಹೀಂ

ಧರ್ಮಕ್ಕೆ ಬಹಳ ಬೆಲೆ ಕಡಿಮೆಯಾದ ಕಾಲ ವಾಗಿದೆ ಇದು. ಧರ್ಮದ ಹೆಸರು ಕೇಳುವಾಗ ಇಂದು ಹಲವರಿಗೆ ಜಿಗುಪ್ಸೆಯೂ ದ್ವೇಷವೂ ಉಂಟಾಗುತ್ತದೆ. ವಿಜ್ಞಾನ, ಕಲೆ, ರಾಜಕೀಯ ಮೊದಲಾದ ವಿಷಯಗಳಿಗೆ ಇಂದು ಎಲ್ಲೆಡೆಯೂ ಗೌರವ ಮತ್ತು ಪ್ರಚಾರ. ಧರ್ಮ ಇಂದು ಯಾರಿಗೂ ಬೇಡವಾಗಿದೆ. ಅದನ್ನು ನಾಶಪಡಿಸುವ ಪರಿಶ್ರಮಗಳನ್ನು ನಾವು ಎಲ್ಲೆಲ್ಲೂ ಕಾಣುತ್ತೇವೆ. ಧರ್ಮವನ್ನು ನಶೀಕರಿಸುವ ಪ್ರವರ್ತನೆಗಳು ಇಂದೋ ನಿನ್ನೆಯೋ ಆರಂಭಿಸಿದ್ದವಲ್ಲವಾದರೂ ಪೂರ್ವಕಾಲಕ್ಕಿಂತ ಸಂಪೂರ್ಣ ವ್ಯತ್ಯಸ್ತವಾದ ರೀತಿಗಳಲ್ಲಿ ಅದು ಇಂದು ನಡೆಯುತ್ತಿದೆ. ಆದರೆ ಧರ್ಮವನ್ನು ನಿರ್ಮೂಲ ಗೊಳಿಸುವ ಯಾವ ಪ್ರಯತ್ನವಾಗಲಿ, ಇಂದಿನ ತನಕ ಪರಾಜಿತಗೊಳ್ಳುತ್ತಲೇ ಇದೆಯೆಂಬುದು ವಾಸ್ತವಾಂಶ ಮಾತ್ರವಾಗಿದೆ. ಆದರೂ ಅದನ್ನು ನಾಶಪಡಿಸಿಯೇ ತೀರುವೆವು ಎಂಬ ದೃಢ ನಿಶ್ಚಯದೊಂದಿಗೆ ಅದಕ್ಕೆದುರಾಗಿ ನಿರಂತರವಾದ ಆಕ್ರಮಣಗಳನ್ನು ನಡೆಸಲು ಟೊಂಕಕಟ್ಟಿ ಸಿದ್ಧರಾದ ಒಂದು ವರ್ಗದ ಜನರು ಅಲ್ಲಲ್ಲಿ ಕಂಡುಬರುತ್ತಾರೆ. ಯಾವುದೇ ಧರ್ಮಕ್ಕೆ ಏನೇ ರಿಯಾಯತಿಯನ್ನು ತೋರಿಸದೆಯೂ ಯಾವುದೇ ವ್ಯತ್ಯಾಸವಿಲ್ಲದೆಯೂ ಎದುರಿಸುತ್ತಾ ಧರ್ಮವಾದಿಗಳಿಗೆ ವಿರುದ್ಧವಾಗಿ ಏನನ್ನೂ ಹೇಳಲು ಧೃಷ್ಟರಾಗಿರುವವರಾಗಿದ್ದಾರೆ ವಿಚಾರವಾದಿಗಳೆಂದು ಸ್ವಯಂ ಕರೆಯುವ ಹಾಗೂ ಆ ಹೆಸರಿನಲ್ಲಿ ಅಭಿಮಾನಪಡುವ ಒಂದು ಗುಂಪು ಜನರು. ಅವರು ತಮ್ಮ ವೀಕ್ಷಣೆಗಳಿಗೂ ಅಭಿಪ್ರಾಯಗಳಿಗೂ ವಿಚಾರವಾದ ಎಂದು ಹೆಸರಿಟ್ಟಿದ್ದಾರೆ. ಆದ್ದರಿಂದ ಅವರನ್ನು ವಿಚಾರವಾದಿಗಳೆಂದೇ ನಾವು ಸಹ ಕರೆಯೋಣ!

## ಧರ್ಮ ವಿಶ್ವಾಸಗಳು

ಧರ್ಮ ಮತ್ತು ವಿಚಾರವಾದದ ಮಧ್ಯೆ ಇರುವ ವೈರುದ್ಧ್ಯಗಳ ಕುರಿತಾಗಲಿ ಸಹಮತಗಳ ಕುರಿತಾಗಲಿ ಏನನ್ನಾದರೂ ಹೇಳುವುದಕ್ಕೆ ಮುಂಚೆ ಧರ್ಮ ಎಂದರೇನೆಂದೂ ಅದು ಏನನ್ನು ಕಲಿಸುತ್ತದೆಂದೂ ನಾವು ಆಲೋಚಿಸಬೇಕಾಗಿದೆ. ಈ ಪ್ರಪಂಚವನ್ನು ಸೃಷ್ಟಿಸಿ ಪಾಲಿಸುತ್ತಿರುವ ಒಂದು ಅತೀತ ಶಕ್ತಿ ಇದೆಯೆಂದೂ ಆ ಸೃಷ್ಟಿಕರ್ತನನ್ನು ಗಳಿಸುವುದು ಮನುಷ್ಯ ಜೀವಿತದ ಪರಮಲಕ್ಷ್ಯವೆಂದೂ ಆ ಗುರಿಸಾಧನೆಗಾಗಿ ಒಂದು ವಿಶಿಷ್ಟ ಜೀವಿತಸರಣಿಯನ್ನು ಮನುಷ್ಯನು ಸ್ವೀಕರಿಸಬೇಕಾಗಿದೆಯೆಂದೂ ಆ ಸರಣಿಯಲ್ಲಿ ತಪ್ಪದೆ ಚಲಿಸುವಂತಾಗಬೇಕಾದರೆ ಅವನಿಗೆ ಪ್ರಚೋದನೆಯನ್ನು ನೀಡುತ್ತಿರುವ ಕೆಲವು ವಿಶ್ವಾಸಪ್ರಮಾಣಗಳು ಇರಬೇಕಾದುದು ಅವಶ್ಯವೆಂದೂ ಧರ್ಮವು ಕಲಿಸುತ್ತದೆ. ಸಂಕ್ಷಿಪ್ತವಾಗಿ, ಮನುಷ್ಯನ ಯಥಾರ್ಥವಾದ ಜೀವಿತ ಲಕ್ಷ್ಯವನ್ನು ಸಾಧಿಸಲಿಕ್ಕಿರುವ ನಿರ್ದೇಶನಗಳಿಗೂ ವಿಶ್ವಾಸಗಳಿಗೂ ಎಲ್ಲಕ್ಕೂ ಇರುವ ಹೆಸರಾಗಿದೆ ಧರ್ಮವೆಂಬುದು.

ಧರ್ಮವು ಪ್ರಬೋಧಿಸುವ ವಿಶ್ವಾಸಗಳು ಯಾವುವೆಂದು ನೋಡೋಣ. ಪ್ರಪಂಚದ ಸೃಷ್ಟಿಕರ್ತನೂ ರಕ್ಷಕನೂ ಆದ ಒಬ್ಬ ದೇವನಿದ್ದಾನೆಂಬುದು ಎಲ್ಲಾ ಧರ್ಮಗಳ ಪ್ರಥಮ ವಿಶ್ವಾಸ ಸಿದ್ಧಾಂತ. ದೇವವಿಶ್ವಾಸವು ಧರ್ಮಕ್ಕೆ ಸಂಬಂಧಿಸಿದ ಮಟ್ಟಿಗೆ ಒಂದು ಚಿಕ್ಕ ಅಂಶವೆಂದು ಹೇಳುತ್ತಾ ಆ ವಿಶ್ವಾಸವನ್ನು ಪ್ರತ್ಯೇಕಿಸಲು ವಿಚಾರವಾದಿಗಳು ಸಾಮಾನ್ಯವಾಗಿ ಶ್ರಮಿಸುತ್ತಿರುವರಾದರೂ ದೇವವಿಶ್ವಾಸವು ಧರ್ಮದ ಅಡಿಪಾಯವೆಂದೂ ಆ ವಿಶ್ವಾಸ ಮಿಥ್ಯೆ ಅಥವಾ ಆಧಾರರಹಿತವೆಂದಾದರೆ ಮತ್ತೆ ಧರ್ಮದಿಂದ ಯಾವುದೇ ಪ್ರಯೋಜನವೂ ಧರ್ಮಕ್ಕೆ ಏನೇ ಬೆಲೆಯೂ ಇರುವುದಿಲ್ಲವೆಂಬುದು ಸ್ಪಷ್ಟವಾದ ಒಂದು ನಿಜಾಂಶ ಮಾತ್ರವಾಗಿದೆ.

ಎರಡನೆಯದಾಗಿ, ಧರ್ಮವು ನಮ್ಮೊಡನೆ, ಪ್ರವಾದಿಗಳಲ್ಲಿ ವಿಶ್ವಾಸವಿಡಬೇಕೆಂದು ಅಗತ್ಯಪಡಿಸುತ್ತದೆ. ಈ ಲೋಕದ ಧಾರ್ಮಿಕ ಪುನರುದ್ಧಾರಕ್ಕಾಗಿ ಪ್ರತಿಯೊಂದು ಕಾಲಘಟ್ಟದಲ್ಲಿ ದೇವರು ಪ್ರವಾದಿಗಳನ್ನು ನಿಯೋಜಿಸುತ್ತಾನೆ. ದೇವರು ಅವರೊಡನೆ ಮಾತಾಡುತ್ತಾನೆಂದೂ

ಅವರಿಗೆ ದಿವ್ಯದರ್ಶನಗಳನ್ನು ನೀಡುತ್ತಾನೆಂದೂ ಧರ್ಮವು ಕಲಿಸುತ್ತದೆ. ದೇವರಿಂದ ಲಭಿಸಿದುದಾಗಿ ಹೇಳುತ್ತಾ ಅವರು ಕೆಲವು ವಚನಗಳನ್ನು ಲೋಕದ ಮುಂದೆ ಇಟ್ಟಿದ್ದಾರೆ. ವೇದಗಳು, ಝೆಂದ್ ಅವಸ್ತಾ, ಬೈಬಲ್, ಖುರ್‌ಆನ್ ಎಂಬೀ ದಿವ್ಯಗ್ರಂಥಗಳು ಇಂತಹ ವಚನಗಳ ಸಂಗ್ರಹಣ. ಕಾಲಾಂತರದಲ್ಲಿ ಕೆಲವು ಗ್ರಂಥಗಳು ಮನುಷ್ಯನ ಹಸ್ತಕ್ಷೇಪಕ್ಕೆ ಗುರಿಯಾಗಿವೆಯಾಗಿದ್ದರೂ ದೇವರು ಅವನ ವರಿಷ್ಠರಾದ ಪ್ರವಾದಿಗಳೊಡನೆ ಮಾತನಾಡುತ್ತಾನೆ ಹಾಗೂ ಅವರಿಗೆ ದಿವ್ಯ ಪ್ರಕಟನೆಗಳ ಮೂಲಕ ಮುಂಬರುವ ಸಂಗತಿಗಳನ್ನು ತಿಳಿಸಿಕೊಡುತ್ತಾನೆ ಎಂಬುದಾಗಿದೆ ಪ್ರವಾದಿಗಳ ಕುರಿತುಳ್ಳ ವಿಶ್ವಾಸದ ಸಾರಾಂಶ.

ಮೂರನೆಯದಾಗಿ, ಪರಲೋಕ ಎಂಬೊಂದು ಇದೆಯೆಂದೂ ಮನುಷ್ಯನು ಈ ಲೋಕದಲ್ಲಿ ನಡೆಸುವ ಜೀವನದ ಗುಣದೋಷಗಳಿಗನುಸಾರವಾಗಿ, ಅಥವಾ ಒಳಿತು ಕೆಡುಕುಗಳಿಗನುಗುಣವಾಗಿ ಪರಲೋಕದಲ್ಲಿ ಅವನಿಗೆ ಶಿಕ್ಷಾರಕ್ಷೆಗಳು ಲಭಿಸುತ್ತವೆಂದೂ ಧರ್ಮವು ಕಲಿಸುತ್ತದೆ. ಪರಲೋಕದ ಕುರಿತು ವಿವಿಧ ಧರ್ಮಗಳೆಡೆಯಲ್ಲಿ ಕಾಲಾಂತರದಲ್ಲಿ ತಾತ್ವಿಕವಾಗಿಯೂ ವಿಶ್ವಾಸಪರವಾಗಿಯೂ ಕೆಲವು ವ್ಯತ್ಯಾಸಗಳಿದ್ದರೂ ಮೌಲಿಕವಾದ ಈ ವಿಶ್ವಾಸವು ಎಲ್ಲಾ ಧರ್ಮಗಳಲ್ಲೂ ನಮಗೆ ಕಾಣಲು ಸಾಧ್ಯ.

ನಾಲ್ಕನೆಯದಾಗಿ, ಮನುಷ್ಯನು ಈ ಲೋಕದಲ್ಲಿ ಸಮಾಧಾನ ಮತ್ತು ಸಂತುಷ್ಟವಾದ ಜೀವನವನ್ನು ನಡೆಸಬೇಕಾದರೆ ಧಾರ್ಮಿಕ ಮೌಲ್ಯಗಳಲ್ಲಿ ನಂಬಿಕೆ ಇಡಬೇಕೆಂದು ಧರ್ಮವು ಕಲಿಸುತ್ತದೆ. ಮಾನವ ಜೀವಿತದ ಯಥಾರ್ಥ ಲಕ್ಷ್ಯವಾದ ಪರಲೋಕ ಕ್ಷೇಮಕ್ಕೆಂಬಂತೆ ಇಹಲೋಕದ ಸುಖಕ್ಕೂ ಶಾಂತಿಗೂ ಈ ವಿಶ್ವಾಸ ಅನುಪೇಕ್ಷಣೀಯವೆಂದು ಧರ್ಮವು ಸಿದ್ಧಾಂತಿಸುತ್ತದೆ.

ಲೋಕದಲ್ಲಿ ಇಂದು ಕಾಣುವ ಯಾವುದೇ ಧರ್ಮದ ಮೌಲಿಕವಾದ ಪಾಠಗಳನ್ನು ಪರಿಶೋಧಿಸಿ ನೋಡಿದರೆ ನಮಗೆ ಈ ನಾಲ್ಕು ಸಂಗತಿಗಳು ಅಥವಾ ವಿಶ್ವಾಸ ಸಿದ್ಧಾಂತಗಳನ್ನು ಅರಿಯಲು ಸಾಧ್ಯ. ಈ ನಾಲ್ಕು ವಿಚಾರಗಳ ಕುರಿತು ಪ್ರಬೋಧಿಸದ ಯಾವುದೇ ಧರ್ಮವೂ ಭೂಲೋಕದಲ್ಲಿಲ್ಲ. ಅಥವಾ ಇದೆಯೆಂದು ಯಾರಾದರೂ ಹೇಳುವರಾದರೆ ಅದು ಧರ್ಮವೆಂಬ ಹೆಸರಿಗೆ ಅರ್ಹತೆಯುಳ್ಳದ್ದಾಗಿರುವುದಿಲ್ಲ.

ಧರ್ಮದ ಈ ನಾಲ್ಕು ಮೌಲಿಕ ವಿಶ್ವಾಸಗಳನ್ನು ಮಾತ್ರವಲ್ಲ, ಧಾರ್ಮಿಕವಾದ ಇತರ ಎಲ್ಲಾ ವಿಶ್ವಾಸಗಳನ್ನು ಕೂಡ ಶಕ್ತಿಯುತವಾಗಿ ವಿರೋಧಿಸುತ್ತಾ ವಿಮರ್ಶಿಸುತ್ತಿರುವವರಾಗಿದ್ದಾರೆ ವಿಚಾರವಾದಿಗಳು. "ವಿಶ್ವಾಸವು ಒಳಗೆ ಪ್ರವೇಶಿಸುವಾಗ ವಿಚಾರ ಹೊರಗೆ ನಿರ್ಗಮಿಸುತ್ತದೆ" ಎಂಬುದಾಗಿದೆ ಅವರ ಘೋಷಣೆ. ವಿಚಾರದ ವಜ್ರಾಯುಧದಿಂದ ಧರ್ಮವಿಶ್ವಾಸಗಳನ್ನು ಸೀಳಿಹಾಕಲು ಅವರು ಸನ್ನದ್ಧರಾಗುತ್ತಾರೆ. ಎಷ್ಟು ಬೆಲೆ ತೆತ್ತಾದರೂ ಧರ್ಮವನ್ನು ನಾಶಪಡಿಸಲು ಅವರು ಸೊಂಟಕಟ್ಟಿ ಹೊರಡುತ್ತಾರೆ. ಧರ್ಮವೆಂಬ ಹೆಸರನ್ನೇ ಕೇಳಲು ಅಸಾಧ್ಯವಾದ ರೀತಿಯಲ್ಲಿ ಅವರಿಗೆ ಧರ್ಮದೊಡನೆ ಅಷ್ಟು ಕಟುವಾದ ದ್ವೇಷವು ಉಂಟಾಗಿರುತ್ತದೆ. ಕಾರ್ಯಕಾರಣ ಸಂಬಂಧವನ್ನು ಆಧಾರವಾಗಿರಿಸಿ ವೈಚಾರಿಕವಾಗಿ ಚಿಂತನೆ ಮಾಡುವವರು ತಾವೆಂದು ಅವರು ಘೋಷಿಸುತ್ತಿರುವರಾದರೂ ಮೌಲಿಕವಾದ ಧರ್ಮವಿಶ್ವಾಸಗಳ ಬಗ್ಗೆ ಅವರ ಚಿಂತನೆಗಳು ಎಂದಿಗೂ ವಿಚಾರಯುತವಾಗಿರುವುದಿಲ್ಲವೆಂಬುದು ನಿಜ. ತಮಗೆ ಯಾವುದೇ ಅಂಗೀಕೃತ ನಂಬಿಕೆ ಇಲ್ಲವೆಂದು ಅವರು ಸಾರುತ್ತಿರುವರಾದರೂ ಅವರೆಂದಿಗೂ ತಮ್ಮ ವಿಶ್ವಾಸ ಬಂಧನಗಳಿಂದ ಹೊರಗೆ ದಾಟುವುದಿಲ್ಲವೆಂಬುದು ವಾಸ್ತವ. ಯಾವುದರಲ್ಲೂ ಒಂದು ಪ್ರತ್ಯೇಕ ಅಭಿಪ್ರಾಯವನ್ನು ಸ್ಥಾಪಿಸಬೇಕೆಂದು ವಿಚಾರವಾದಿಗಳಿಗೆ ಹಠವಿಲ್ಲವೆಂದೂ ತಪ್ಪೆಂದು ಮನಗಂಡ ನಿಮಿಷ ಅಭಿಪ್ರಾಯವನ್ನು ಬದಲಾಯಿಸಲು ಸಿದ್ಧರೆಂದೂ ಅವರು ಹೆಮ್ಮೆಕೊಚ್ಚುವರಾದರೂ ತಮ್ಮ ಅಭಿಪ್ರಾಯಗಳನ್ನು ಎಂದಿಗೂ ಕೈಬಿಡಲು ಅವರು ತಯಾರಿಲ್ಲವೆಂಬುದು ಸತ್ಯ. ಎಲ್ಲವನ್ನೂ ಸಂಶಯಿಸುವುದು ಮತ್ತು ಚಿಂತನೆ ಮಾಡುವುದು ವಿಚಾರವಾದಿಗಳ ಲಕ್ಷಣವೆಂದು ಅವರು ಉಚ್ಚಸ್ವರದಲ್ಲಿ ಹೇಳುವರಾದರೂ ಧಾರ್ಮಿಕ ಸಿದ್ಧಾಂತಗಳಿಗೆ ಸಂಬಂಧಿಸಿದ ತಮ್ಮ ದೃಢವಾದ ನಕಾರಾತ್ಮಕ ವಿಶ್ವಾಸಗಳ ಅಸಂಬದ್ಧತೆಯ ಕುರಿತು ಅವರು ಒಮ್ಮೆಯಾದರೂ ಸಂಶಯ ಪಡದವರೂ ಗಾಢವಾಗಿ ಚಿಂತಿಸದವರೂ ಆಗಿದ್ದಾರೆ. ಅನೇಕಾನೇಕ ಯುಗಗಳಿಂದ ಮನುಷ್ಯನು

ಸತ್ಯವೆಂದು ನಂಬಿಕೊಂಡು ಬರುತ್ತಿರುವ ಹಾಗೂ ತಪ್ಪೆಂದು ಖಂಡಿತವಾಗಿ ಯಾರಿಗೂ ಎಂದಿಗೂ ಸಾಬೀತು ಪಡಿಸಲು ಅಸಾಧ್ಯವಾದ, ಯುಗ ಯುಗಗಳಲ್ಲಿ ಪ್ರವಾದಿಗಳು ಪ್ರತ್ಯಕ್ಷರಾಗಿ ಸತ್ಯವೆಂದು ಸ್ಥಾಪಿಸಿರುವ, ವಿಜಯಗೊಳಿಸಿ ತೋರಿಸಿದ ಧರ್ಮ ವಿಶ್ವಾಸಗಳನ್ನು ಹೊಂದುವ ಧರ್ಮವಾದಿಗಳನ್ನು ವಿಚಾರಶೂನ್ಯರೆಂದೂ ಬುದ್ಧಿಹೀನರೆಂದೂ ಭ್ರಾಂತರೆಂದೂ ಅವರು ಆಕ್ಷೇಪಿಸುತ್ತಾರೆ.

## ಧಾರ್ಮಿಕ ವಿಶ್ವಾಸಗಳ ವೈಚಾರಿಕತೆ

ದೇವ ವಿಶ್ವಾಸವಾಗಲಿ, ಪ್ರವಾದಿಗಳ ಮೇಲಿನ ವಿಶ್ವಾಸವಾಗಲಿ, ಪರಲೋಕದ ಕುರಿತುಳ್ಳ ವಿಶ್ವಾಸವಾಗಲಿ ನೈತಿಕ ಮೌಲ್ಯಗಳ ಮೇಲಿನ ವಿಶ್ವಾಸವಾಗಲಿ ವಿಚಾರ ಹೀನವೆಂದು ಯಾರಿಗೂ ಎಂದಿಗೂ ಸಾಬೀತು ಪಡಿಸಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ ಅತ್ಯಂತ ವಿಚಾರಯುತವೂ ಮನುಷ್ಯನ ಸಕಲ ಪ್ರಜ್ಞೇಂದ್ರಿಯಗಳು ಪರಿಪೂರ್ಣವಾಗಿ ಅಂಗೀಕರಿಸುವಂತಹದೂ ಆದ ವಿಶ್ವಾಸಗಳಾಗಿವೆ ಅವೆಲ್ಲಾ. ಆಸ್ತಿಕವಾದದ ಸರ್ವವ್ಯಾಪಕತೆ, ಪ್ರಪಂಚದ ಸೋದ್ದೇಶವಾದ ಸೃಷ್ಟಿ ವಿಶೇಷಗಳು, ಕಾರ್ಯಕಾರಣ ನಿಯಮ, ಮನುಷ್ಯವರ್ಗದ ಸಹಜ ವಿಕಾಸ, ಮನುಷ್ಯನ ಸ್ಪಷ್ಟವಾದ ಗುಣ ಇವೆಲ್ಲಕ್ಕೂ ಹೊರತಾಗಿ ಪ್ರವಾದಿಗಳ ಜೀವಿತ ವಿಜಯಗಳೂ ಅವರ ಆಧ್ಯಾತ್ಮಿಕಾನುಭವಗಳೂ ದೇವನಿದ್ದಾನೆಂಬ ನಂಬಿಕೆ ಸತ್ಯವೂ ವಿಚಾರಯುತವೂ ಆಗಿದೆಯೆಂದು ನಮಗೆ ನಿಸ್ಸಂದೇಹವಾಗಿ ರುಜುಪಡಿಸುವಾಗ ಆ ನಂಬಿಕೆ ವಿಚಾರ ವಿರುದ್ಧವೆಂದು ಹೇಳುವುದಲ್ಲವೇ ವಿಚಾರ ಶೂನ್ಯತೆ? ದೇವವಿಶ್ವಾಸ ವಿಚಾರಯುತವಲ್ಲವೆಂದೂ ನಾಸ್ತಿಕವಾದವು ವಿಚಾರಯುತವೆಂದೂ ಇವರಿಗೆ ಹೇಗೆ ಹೇಳಲು ಸಾಧ್ಯವಾಗುವುದೆಂದು ತಿಳಿಯುವುದಿಲ್ಲ. ನಾಸ್ತಿಕತೆಯು ವಿಚಾರಶೂನ್ಯವಲ್ಲವೆಂದಾದರೆ ಮತ್ತೆ ವಿಚಾರಶೂನ್ಯತೆ ಎಂದು ಹೇಳುವುದು ಬೇರೆ ಯಾವುದನ್ನು? ಇಂದು ವಿಚಾರವಾದವು ನಾಸ್ತಿಕತೆಯ ಪರ್ಯಾಯವಾಗಿ ಮಾರ್ಪಟ್ಟಿದೆ ಎಂದು ವಿಚಾರವಾದಿಗಳು ಭಾವಿಸುತ್ತಾರೆ. ಆದರೆ ವಿಚಾರವಾದವು ಆರಂಭವಾದುದೇ ಆಸ್ತಿಕವಾದದಿಂದ ಎಂಬುದೇ ಸತ್ಯ. ಮನುಷ್ಯರು ಹೆಚ್ಚು ಹೆಚ್ಚು ಚಿಂತನೆ ಮಾಡಿದುದರ ಫಲವಾಗಿ ಏಕದೇವ ತತ್ವದಲ್ಲಿ ಕೊನೆಗೆ ತಲಪಿದ್ದೆಂದು ಸಿದ್ಧಾಂತಿಸುವವರಿಗೆ ನಂಬಿಕೆಯು ಮನುಷ್ಯನನ್ನು ಚಿಂತನಾಶೂನ್ಯನನ್ನಾಗಿ ಮಾಡುತ್ತದೆಂದು ಹೇಳಲು ಹೇಗೆ ಸಾಧ್ಯವಾಗುವುದೆಂದು ತಿಳಿಯುವುದಿಲ್ಲ. ಯುರೋಪಿನಲ್ಲಿ ವಿಚಾರವಾದ ಸಂಘಟನೆಯು ಜನ್ಮತಾಳಿದ್ದು ಧರ್ಮವಿಶ್ವಾಸಿಗಳಿಂದಾಗಿದೆ; ನಾಸ್ತಿಕರಿಂದಲ್ಲ. ಯುರೋಪಿನಲ್ಲಿ ವಿಚಾರವಾದದ ಪಿತನೆಂದು ಕರೆಯಲ್ಪಡುವ ಡಿಕಾರ್ಟೆ (Descartes) ಒಬ್ಬ ದೇವವಿಶ್ವಾಸಿಯಾಗಿದ್ದ. ಮಾತ್ರವಲ್ಲ, ವಿಚಾರವಾದಿಗಳಲ್ಲಿ ಅಗ್ರಗಣ್ಯರಾದ ಬೇಕನ್, ಲೋಬ್ಸ್, ಲಿಬ್ನೀಸ್, ಸ್ಪಿನೋಸ ಮೊದಲಾದ ಮಹಾರಥರೆಲ್ಲಾ ದೇವವಿಶ್ವಾಸದ ವೈಚಾರಿಕತೆಯನ್ನು ರುಜುಪಡಿಸಿದವರಾಗಿದ್ದಾರೆ. ಹೆಚ್ಚೇಕೆ, ಆಧುನಿಕ ವಿಚಾರವಾದದ ನಾಯಕರೆಂದು ಗಣಿಸಲ್ಪಡುವ ತೋಮಸ್ ಪೈನ್, ವಿನ್‌ವುಡ್‌ರೀಡ್ ಮೊದಲಾದವರು ಸಹ ದೇವವಿಶ್ವಾಸಿಗಳಾಗಿದ್ದುಕೊಂಡೇ ಇವರೆಲ್ಲಾ ವಿಚಾರವಾದದ ನೇತಾರರಾದದ್ದು. ಡಾ। ಪೈನ್ ತನ್ನ ಸುಪ್ರಸಿದ್ಧ "ಏಜ್ ಓಫ್ ರೀಸನ್" (Age of Reason) ಎಂಬ ಪುಸ್ತಕವನ್ನು ಆರಂಭಿಸುವುದೇ I believe in one God and no more and I hope happiness beyond this life. "ನಾನು ಏಕದೇವನಲ್ಲಿ ಮಾತ್ರ ವಿಶ್ವಾಸವಿಟ್ಟಿದ್ದೇನೆ. ಈ ಲೋಕದಾಚೆ ನಾನು ಸುಖವನ್ನು ಆಶಿಸುತ್ತೇನೆ" ಎಂದು ಹೇಳಿಕೊಂಡಾಗಿದೆ.* ಹಾಗೆಯೇ ವಿನ್‌ವುಡ್ ರೀಡ್ ಹೇಳಿದ್ದು We teach that there is a God. God is so great that he cannot be defined by us – "ಒಬ್ಬ ದೇವನಿದ್ದಾನೆಂದು (ವಿಚಾರವಾದಿಗಳಾದ ನಾವು) ಸಿದ್ಧಾಂತಿಸುತ್ತೇವೆ. ನಮಗೆ ವ್ಯಾಖ್ಯೆ ಮಾಡಲು ಅಸಾಧ್ಯವಾದ ವಿಧದಲ್ಲಿ ಮಹಾಮಹಿಮನಾಗಿದ್ದಾನೆ ದೇವರು"★ ಎಂದಾಗಿದೆ. ವಿಚಾರವಾದದ ಪ್ರಶ್ನಾತೀತ ನೇತಾರರಾದ ಇವರೆಲ್ಲಾ ದೇವವಿಶ್ವಾಸಿಗಳಾಗಿರುವಾಗ "ವಿಶ್ವಾಸವು ಒಳಗೆ ಪ್ರವೇಶಿಸುವಾಗ ವಿಚಾರ ಹೊರಗೆ ನಿರ್ಗಮಿಸುತ್ತದೆ" ಎಂಬ ಘೋಷಣೆ ಹೇಗೆ ಸರಿಯೆನಿಸುವುದು? ವಿಶ್ವಾಸಿಗಳಾಗಿದ್ದು ಸಹ ಇವರೆಲ್ಲಾ ವಿಚಾರವಾದಿಗಳಾಗಬಹುದಾದರೆ, ಧರ್ಮದಲ್ಲಿ ವಿಶ್ವಾಸವಿಡುವ ಕೋಟಿಗಟ್ಟಲೆ ಜನರು, ಅವರು

---

* Age of Reason – Thomas Paine P-1

★ Martyrdom of man–Winwood Reed P-44

ದೇವವಿಶ್ವಾಸಿಗಳೆಂಬ ಕಾರಣದಿಂದ ಮಾತ್ರ ವಿಚಾರ ಶೂನ್ಯರೂ ಬುದ್ಧಿವಿಹೀನರೂ ಭ್ರಾಂತರೂ ಆಗುವುದು ಹೇಗೆ?

ಇದೇ ಪ್ರಕಾರವಾಗಿದೆ ಪ್ರವಾದಿಗಳ ಮೇಲಿರುವ ವಿಶ್ವಾಸ ಕೂಡ. ತಮಗೆ ದಿವ್ಯಪ್ರಕಟನೆಗಳು ಉಂಟಾಗುತ್ತಿರುವುದಾಗಿಯೂ ದೇವರು ತಮ್ಮೊಡನೆ ಮಾತನಾಡುತ್ತಿರುವನೆಂದೂ ಅವರು ಹೇಳುವಾಗ ಅವರನ್ನು ಜನರು ಸುಳ್ಳುವಾದಿಗಳೆಂದು ತಿರಸ್ಕರಿಸಿದರು. ಪ್ರವಾದಿಗಳ ವಾದಗಳು ವಿಚಾರಹೀನವೆಂದಾದರೆ ಅವರನ್ನು ಕಪಟಿಗಳ ಮತ್ತು ವಂಚಕರ ಒಟ್ಟಿಗೆ ಸೇರಿಸಬೇಕಾದೀತು. ಸತ್ಯವೆಂದರೇನೆಂದು ಲೋಕಕ್ಕೆ ಕಲಿಸಿಕೊಟ್ಟ ಈ ಪ್ರವಾದಿಗಳೆಲ್ಲಾ ಕಪಟಿಗಳೂ ವಂಚಕರೂ ಆಗಿದ್ದರೆಂಬುದೋ ವಿಚಾರಯುತವಾದ ವಿಶ್ವಾಸ ಎಂದು ನಾನು ಬಹಳ ವಿನಯದಿಂದ ಕೇಳಲೇ? ಅವರು ತಮ್ಮೆಡೆಗೆ ಜನರನ್ನು ಆಕರ್ಷಿಸಲಿಕ್ಕಾಗಿ ಉದ್ದೇಶಪೂರ್ವಕ ಹೆಣೆದು ಮಾಡಿದ ವಚನಗಳಾಗಿದ್ದವೇ ಅವೆಲ್ಲಾ? ಇವರೆಲ್ಲರೂ ಹಾಗೆ ಸುಳ್ಳು ಹೇಳುವವರಾಗಿದ್ದರೆ ಮತ್ತೆ ವಿಶ್ವಾಸಕ್ಕೆ ಅರ್ಹರಾದವರು ಲೋಕದಲ್ಲಿ ಬೇರೆ ಯಾರಿದ್ದಾರೆ? ಅವರು ನಂಬಿಕೆಗೆ ಅರ್ಹರೆಂದಾದರೆ, ಖಂಡಿತವಾಗಿಯೂ ಅವರು ದೇವನಿಯೋಜಿತರೆಂಬುದೇ ಅತ್ಯಂತ ವಿಚಾರಪೂರ್ಣವಾದ ನಂಬಿಕೆ. ಮತ್ತೆ ಈ ಪ್ರವಾದಿಗಳು ತಮಗುಂಟಾಗಿರುವುದಾಗಿ ಹೇಳುವ ದಿವ್ಯಾನುಭವಗಳು ಮತಿಭ್ರಮೆ (Hallucination) ಅಥವಾ ಕೆಲವು ಮಾನಸಿಕ ರೋಗಗಳ ಕಾರಣವಾಗಿರುವ ಆತ್ಮಗತ ಭಾಷಣ (Soliloquize) ಎಂದು ಆಧುನಿಕರಾದ ಕೆಲವು ಮನಶಾಸ್ತ್ರ ವಿಶಾರದರುಗಳ (Psycho - Analysts) ಅಭಿಪ್ರಾಯ. ಲೋಕದ ಗುರುಗಳಾಗಿಯೂ ಕೋಟಿಗಟ್ಟಲೆ ಜನರ ಆಚಾರ್ಯ ಪುರುಷರಾಗಿಯೂ ಅಂಗೀಕರಿಸಲ್ಪಟ್ಟಿರುವ ಈ ಪ್ರವಾದಿಗಳು ಭ್ರಾಂತರೂ ಮನೋರೋಗಿಗಳೂ ಆಗಿದ್ದರೆಂಬ ಅಭಿಪ್ರಾಯ ಮತ್ತು ವಿಶ್ವಾಸವೋ ವಿಚಾರಪೂರ್ಣವಾದುದು? ಎಂದು ನಾನು ಮತ್ತೊಮ್ಮೆ ಕೇಳುತ್ತೇನೆ. ಅಲ್ಲವಾದರೆ – ಖಂಡಿತವಾಗಿಯೂ ಅದು ವಿಚಾರಯುತವಾದ ಒಂದು ಅಭಿಪ್ರಾಯವಲ್ಲ – ಪ್ರವಾದಿಗಳ ಮೇಲಿರುವ ವಿಶ್ವಾಸ ಎಂದಿಗೂ ಬುದ್ಧಿಗಾಗಲಿ ವಿಚಾರವಾದಕ್ಕಾಗಲಿ ಸರಿಹೊಂದದ್ದು ಅಲ್ಲ. ಪ್ರವಾದಿಗಳು ತಮ್ಮ ಸತ್ಯತೆಯನ್ನು ಸಮರ್ಥಿಸಲಿಕ್ಕಾಗಿ ಅತ್ಯಂತ ವಿಚಾರಪೂರ್ಣವಾದ ಪ್ರಶ್ನೆಗಳನ್ನು ನಿಷೇಧಿಗಳೊಡನೆ ಕೇಳಿದ್ದರೆಂದು ಕಾಣಲು ಸಾಧ್ಯ. ಮುಹಮ್ಮದ್ ಪೈಗಂಬರರು ಮಕ್ಕಾ ನಿವಾಸಿಗಳೊಡನೆ ಕೇಳಿದ್ದು – "ಇದಕ್ಕೆ ಮೊದಲು ನಿಮ್ಮೆಡೆಯಲ್ಲಿ ಒಂದು ದೀರ್ಘಕಾಲ ನಾನು ಜೀವಿಸುತ್ತಿರಲಿಲ್ಲವೇ? ನೀವು ಏಕೆ ವಿಚಾರಯುತವಾಗಿ ಚಿಂತನೆ ಮಾಡುವುದಿಲ್ಲ?" (ಖುರ್‌ಆನ್) ಎಂದಾಗಿತ್ತು. ಸುದೀರ್ಘವಾದ ನಲ್ವತ್ತು ವರ್ಷಕಾಲ ಯಾವುದೇ ಕಳಂಕವಿಲ್ಲದ ರೀತಿಯಲ್ಲಿ ಪರಿಶುದ್ಧವೂ ಪಾವನವೂ ಆದ ಬದುಕನ್ನು ಸಾಗಿಸಿದ ವ್ಯಕ್ತಿ ಅವರಾಗಿರುವಾಗ, ಅವರು ಥಟ್ಟನೆ ದೇವರ ಹೆಸರಿನಲ್ಲಿ ಸುಳ್ಳು ಹೇಳುವ ವ್ಯಕ್ತಿಯಾಗಿ ಮಾರ್ಪಟ್ಟರೆಂದು ಭಾವಿಸುವುದು ವಿಚಾರಪೂರ್ಣವೇ? ಎಂದು ಖುರ್‌ಆನ್ ಕೇಳುತ್ತದೆ. ಈ ವಿಚಾರಪೂರ್ಣವಾದ ಪ್ರಶ್ನೆಗೆ ಅರಬಿಯರು ಕೊಟ್ಟ ಉತ್ತರ ಅವರು ಆ ಮಹಾಪುರುಷರ ಸತ್ಯವಾದವನ್ನು ಅಂಗೀಕರಿಸಿಕೊಂಡಾಗಿತ್ತು.

ಪರಲೋಕದ ನಂಬಿಕೆ ಮತ್ತು ಧಾರ್ಮಿಕ ಮೌಲ್ಯಗಳ ಮೇಲಿನ ನಂಬಿಕೆ ಬುದ್ಧಿಗೂ ವಿಚಾರಕ್ಕೂ ಸರಿಹೊಂದುವಂತಹದೇ ಆಗಿದೆ. ಆ ವಿಶ್ವಾಸಗಳು ವಿಚಾರವಿರುದ್ಧವೆಂದು ಸಾಬೀತುಪಡಿಸಲು ಯಾರಿಗೂ ಶಕ್ಯವಾಗಿಲ್ಲ. ಪರಲೋಕದ ವಿಶ್ವಾಸ ಅಥವಾ ಮರಣೋತ್ತರ ಅವಸ್ಥೆಗಳನ್ನು ವಿಚಾರದಿಂದ ಸಾಬೀತುಪಡಿಸುವುದಾಗಲಿ ಬುದ್ಧಿಶಕ್ತಿಗೆ ಪೂರ್ಣವಾಗಿ ಗ್ರಹಿಸಲಿಕ್ಕಾಗಲಿ ಅಸಾಧ್ಯವಾದುದರಿಂದ ಅದು ವಿಚಾರಶೂನ್ಯವೆಂದಾಗುವುದಿಲ್ಲ. ಮರಣದ ನಂತರ ಮನುಷ್ಯ ಜೀವಿತಕ್ಕೆ ಏನು ಸಂಭವಿಸುತ್ತದೆಂಬ ಪ್ರಶ್ನೆಗೆ ವಿಚಾರಪೂರ್ಣವಾದ ಉತ್ತರ ಇದಾಗಿದೆ. ಈ ಪ್ರಶ್ನೆಗೆ ಯಾವುದೇ ಉತ್ತರ ಕೊಡಲಿಕ್ಕೆ ಶ್ರಮಿಸದವರೇ ಪರಲೋಕ ವಿಶ್ವಾಸವನ್ನು ವಿರೋಧಿಸುವ ವಿಚಾರವಾದಿಗಳೆಂಬುದು ಆಶ್ಚರ್ಯಕರವಾಗಿದೆ. ಧಾರ್ಮಿಕ ಮೌಲ್ಯಗಳ ಮೇಲಿನ ವಿಶ್ವಾಸದ ಆವಶ್ಯಕತೆಯನ್ನು ಧರ್ಮವಿರೋಧಿಗಳಾದ ಜನರೇ ಬೇರೆ ರೂಪದಲ್ಲಿ ಒಪ್ಪುವುದರಿಂದ ಆ ಬಗ್ಗೆ ನಾನೇನೂ ಹೇಳಬೇಕಾಗಿಲ್ಲ.

ಧಾರ್ಮಿಕವಾದ ಈ ವಿಶ್ವಾಸಗಳು ವಿಚಾರಯುತವೆಂದಾದರೆ, ಧರ್ಮವು ವಿಚಾರ ವಿರುದ್ಧವಲ್ಲವೆಂದಾದರೆ, ಧರ್ಮ ಮತ್ತು ವಿಚಾರವಾದದ ಮಧ್ಯೆ ವೈರುದ್ಧ್ಯ

ಉಂಟಾದುದು ಹೇಗೆಂಬ ಪ್ರಶ್ನೆಗೆ ಇಲ್ಲಿ ಅವಕಾಶವಿದೆ. ಈ ವಿರೋಧಕ್ಕೆ ಇರುವ ಹಲವು ಕಾರಣಗಳಲ್ಲಿ ಒಂದು, ಧರ್ಮವಾದಿಗಳ ಕೆಲವು ವಿಶ್ವಾಸಗಳೂ ವೀಕ್ಷಣೆಗಳೂ ಆಗಿವೆಯೆಂದು ಹೇಳುವುದರಲ್ಲಿ ನನಗೇನೂ ಸಂಕೋಚವಿಲ್ಲ. ಧರ್ಮದಲ್ಲಿ ಬುದ್ಧಿಗೆ ಏನೂ ಸ್ಥಾನವಿಲ್ಲವೆಂದೂ ಧರ್ಮಪರವಾದ ವಿಶ್ವಾಸ ಪ್ರಶ್ನೆಗಳಿಗೆ ವಿಚಾರ ಬದ್ಧವಾದ ಉತ್ತರವನ್ನು ನೀಡಲು ಸಾಧ್ಯವಿಲ್ಲವೆಂದೂ ಇಂದು ಸಾಮಾನ್ಯವಾಗಿ ಭಾವಿಸಲ್ಪಡುತ್ತದೆ. ಧರ್ಮದ ಅಡಿಪಾಯ, ಮೇಲ್ಛಾವಣಿ ಎಲ್ಲವೂ ವಿಶ್ವಾಸಗಳು ಮಾತ್ರವಾದುದರಿಂದ ಎಷ್ಟೇ ವಿಚಾರಹೀನವಾದರೂ ಅವುಗಳನ್ನೆಲ್ಲಾ ನಂಬಬೇಕಂತೆ. ಒಟ್ಟಾರೆ, ಧರ್ಮದ ಮೂಲ ಸಿದ್ಧಾಂತಗಳ ಕುರಿತೇ ಚಿಂತನೆಮಾಡಬೇಕಾದ ಅಗತ್ಯವಿಲ್ಲವೆಂದಾಗಿದೆ ಎಲ್ಲಾ ಧರ್ಮದವರು ಹೇಳುತ್ತಿರುವುದು ಮತ್ತು ವರ್ತನೆ ಮೂಲಕ ತೋರಿಸುವುದು. ಧರ್ಮದ ಎಲ್ಲಾ ತತ್ವಗಳನ್ನು ಬುದ್ಧಿಯಿಂದಲೂ ವಿಚಾರದಿಂದಲೂ ಸ್ಪಷ್ಟಪಡಿಸಲು ಸಾಧ್ಯವೆಂದಾಗಲಿ ಎಲ್ಲರಿಗೂ ಅದನ್ನು ಮನವರಿಯಲು ಶಕ್ಯವೆಂದಾಗಲಿ ನಾನು ಹೇಳುವುದಿಲ್ಲ. ಸಾಮಾನ್ಯ ಬುದ್ಧಿಗೂ ವಿಚಾರಕ್ಕೂ ಅತೀತವಾಗಿರುವ ಹಲವು ಸಂಗತಿಗಳು ಈ ಲೋಕದಲ್ಲಿವೆ. ಹಲವು ವೈಜ್ಞಾನಿಕ ಸಿದ್ಧಾಂತಗಳನ್ನು ಸಹ ಇಂದು ಸಾಮಾನ್ಯ ಬುದ್ಧಿಯಿಂದ ಮನವರಿಯಲು ಅಸಾಧ್ಯ. ಶಾಸ್ತ್ರಜ್ಞರು ಪರೀಕ್ಷಣೆಗಳ ಆಧಾರದಿಂದ ಘೋಷಿಸಿದರೆಂಬ ಕಾರಣದಿಂದ ಮಾತ್ರ ಹಲವು ವೈಜ್ಞಾನಿಕ ಸಿದ್ಧಾಂತಗಳು ಸರಿಯೆಂದು ನಾವು ನಂಬುತ್ತೇವೆ. ಒಟ್ಟಿನಲ್ಲಿ, ಸಾಮಾನ್ಯ ಬುದ್ಧಿಯಿಂದ ಚಿಂತನೆ ಮಾಡಿ ಮನಗಾಣಲು ಅಸಾಧ್ಯವಾದ ವಿಷಯಗಳೆಲ್ಲಾ ಅವೈಚಾರಿಕವೆಂದಾಗಲಿ ಅಯಥಾರ್ಥವೆಂದಾಗಲಿ ತಳ್ಳಿಹಾಕಲು ನಮಗೆಂದಿಗೂ ಸಾಧ್ಯವಿಲ್ಲ. ಆದರೆ, ಸಾಮಾನ್ಯವಾಗಿ ಬುದ್ಧಿಗೆ ಸರಿಹೊಂದದ ಯಾವುದೇ ಆಗಲಿ ಒಂದು ಸತ್ಯಧರ್ಮದಲ್ಲಿ ಇರಬಾರದಾಗಿದೆ. ಸಾಮಾನ್ಯ ಬುದ್ಧಿ ತಿರಸ್ಕರಿಸಿ ತಳ್ಳಿಹಾಕುವ ಪ್ರತ್ಯಕ್ಷವಾದ ಕೆಲವು ಅಸಂಬದ್ಧತೆಗಳನ್ನು ಧರ್ಮದ ಹೆಸರಿನಲ್ಲಿ ಮನುಷ್ಯನು ನಂಬಲು ನಿರ್ಬಂಧಿತನಾಗುವುದಾಗಿ ನಮಗೆ ಇಂದು ಕಾಣಲು ಸಾಧ್ಯ. ಯಥಾರ್ಥವಾದ ಸತ್ಯಧರ್ಮ ಸಿದ್ಧಾಂತಗಳಿಂದ ವಿಮುಖವಾಗುವಾಗ ಎಲ್ಲಾ ವಿಧ ಅಸಂಬದ್ಧತೆಗಳನ್ನು ನಂಬಲು ಮನುಷ್ಯನು ನಿರ್ಬಂಧಿತನಾಗುತ್ತಾನೆಂದು ಕಾಣಬಹುದು.

ಯುರೋಪಿನಲ್ಲಿ ವಿಚಾರ ವಾದ ಸಂಘಟನೆಯ ಆರಂಭ ಹಾಗೂ ಧರ್ಮ ಮತ್ತು ವಿಜ್ಞಾನದ ಮಧ್ಯೆ ಇರುವ ವೈರುದ್ಧ್ಯತೆಯ ಚರಿತ್ರೆಯನ್ನು ಕುರಿತು ಚಿಂತನೆ ಮಾಡುವಾಗ ನಮಗೆ ಈ ವಾಸ್ತವಾಂಶವನ್ನು ಮನಗಾಣಲು ಪ್ರಯಾಸವಾಗಲಾರದು.

## ಕ್ರೈಸ್ತಧರ್ಮ ಮತ್ತು ವಿಜ್ಞಾನ

ಕ್ರೈಸ್ತ ಧರ್ಮಕ್ಕೆ ರಾಜಕೀಯ ಪ್ರಾಬಲ್ಯ ದೊರೆತ ಬಳಿಕ ಧರ್ಮ ಮತ್ತು ವಿಜ್ಞಾನದ ಮಧ್ಯೆ ಭಿನ್ನತೆಗೆ ಎಡೆಯಾಯಿತೆಂದು ಡ್ರೇಪರ್ ತನ್ನ History of the conflict between Science and Religion ಎಂಬ ಇತಿಹಾಸ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ರೋಮನ್ ಸಾಮ್ರಾಜ್ಯದ ನಾಯಕನಾಗಿದ್ದ ಕೋನ್‌ಸ್ಟಂಟೈನ್ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದಾಗ ರಾಜಕೀಯ ಆವಶ್ಯಕತೆಗಳನ್ನು ಮುಂದಿರಿಸಿ ರೋಮನರ ಬಹುದೈವ ವಿಶ್ವಾಸವನ್ನು ಮತ್ತು ಕ್ರೈಸ್ತಧರ್ಮ ಸಿದ್ಧಾಂತಗಳನ್ನು ಒಂದುಗೂಡಿಸುವ ಪರಿಶ್ರಮಗಳು ನಡೆದುವೆಂದು ಧರ್ಮ ಚರಿತ್ರೆಯಲ್ಲಿ ನಾವು ಓದುತ್ತೇವೆ. ಹಾಗೆ ಕ್ರೈಸ್ತ ಧರ್ಮದಲ್ಲಿ ತ್ರಿತ್ವ, ಪಾಪಪರಿಹಾರ ಸಿದ್ಧಾಂತ, ಯೇಸುಕ್ರಿಸ್ತರ ಶಿಲುಬೆಯ ಮೇಲಣ ಮರಣ, ಸ್ವರ್ಗಾರೋಹಣ ಮೊದಲಾದ ಸಿದ್ಧಾಂತಗಳು ರೂಪತಾಳಿದುವು. ಈ ನಂಬಿಕೆಗಳು ಯೇಸುಕ್ರಿಸ್ತರು ನೀಡಿದ ಅಧ್ಯಾಪನೆಗಳಿಗೆ ಕಟು ವಿರೋಧವಾಗಿತ್ತೆಂದೂ ಆಧ್ಯಾತ್ಮಿಕ ಸತ್ಯಗಳಿಗೆದುರೆಂದೂ ಆ ಕಾಲದಲ್ಲೇ ನೈಜ ಕ್ರೈಸ್ತರು ವಾದಿಸಿದ್ದರೂ ರಾಜಕೀಯ ಬಲವನ್ನು ಉಪಯೋಗಿಸಿಕೊಂಡು ರಾಜಾಧಿಕಾರವು ಅವರನ್ನು ಸದೆಬಡಿಯಿತು. ಹಾಗೆ ಯೇಸುಕ್ರಿಸ್ತರ ಅನುಯಾಯಿಗಳು ಏಕದೇವ ತತ್ವದಿಂದಲೂ ಆಧ್ಯಾತ್ಮಿಕ ಸತ್ಯಗಳಿಂದಲೂ ವಿಮುಖರಾದಾಗ ಅವರಿಗೆ ವಿಚಾರರಹಿತವಾದ ನಂಬಿಕೆಗಳನ್ನು ಸ್ವೀಕರಿಸಬೇಕಾಗಿ ಬಂತು. ಆ ನಂಬಿಕೆಗಳು ರಾಜ್ಯಾಧಿಕಾರದಿಂದ ಸಾಧೂಕರಿಸಲ್ಪಡುತ್ತಲೂ ಪ್ರಚುರಗೊಳಿಸಲ್ಪಡುತ್ತಲೂ ಇದ್ದುವು. ಆ ನಂಬಿಕೆಗೆ ವಿರುದ್ಧವಾದ ಯಾವುದೇ ಸಂಶೋಧನೆಗಳನ್ನಾಗಲಿ ವೀಕ್ಷಣೆಗಳನ್ನಾಗಲಿ ನಿರ್ಮೂಲಗೊಳಿಸಲು ಅವರು ನಿರ್ದಾಕ್ಷಿಣ್ಯವಾಗಿ ಶ್ರಮಿಸಿದರು. ಈ ಕಾರಣದಿಂದ ವಿಜ್ಞಾಸ ಮತ್ತು ಧರ್ಮದ ಮಧ್ಯೆ ಅಗಲಿಕೆಯುಂಟಾಯಿತು. ಡ್ರೇಪರ್

ಹೇಳುತ್ತಾರೆ: **The antagonism thus we witness between Religion and Science is the continuation of tone struggle that commenced when Christianity began to attain Political Power.** ಎಂದರೆ "ಧರ್ಮ ಮತ್ತು ವಿಜ್ಞಾನದ ಮಧ್ಯೆ ಕಾಣಲ್ಪಡುವ ಈ ವೈರುದ್ಧ್ಯವು ಕ್ರೈಸ್ತ ಧರ್ಮಕ್ಕೆ ರಾಜಕೀಯ ಅಧಿಕಾರ ದೊರೆತಲಾಗಾಯ್ತು ಆರಂಭಿಸಿದ ಸೆಣಸಾಟದ ಪ್ರಾರಂಭವಾಗಿದೆ"* ಶಕ್ತಿಯ ಪ್ರಾಬಲ್ಯ ಬಂದಾಗ ಭಕ್ತಿಯೊಂದಿಗೆ ವಿಚಾರ ಬುದ್ಧಿ ನಷ್ಟವಾಯಿತೆಂದು ನಮಗೆ ಇದರಿಂದ ಮನವರಿಕೆಯಾಗುತ್ತದೆ.

ಕ್ರೈಸ್ತ ಧರ್ಮವು ಈ ಪ್ರಕಾರ ಶಕ್ತಿ ಮೂಲಕ ನಂಬಿಕೆಯನ್ನು ಪ್ರಚಾರಪಡಿಸಲಿಕ್ಕೂ ಪ್ರಬಲಗೊಳಿಸಲಿಕ್ಕೂ ಪರಿಶ್ರಮಿಸಿದಾಗ ಅವೈಚಾರಿಕವಾಗಿ ಅನೇಕ ತತ್ವಗಳು ಧರ್ಮದ ಮೂಲಸಿದ್ಧಾಂತಗಳಾಗಿ ಮಾರ್ಪಟ್ಟವು. ಬುದ್ಧಿಶಕ್ತಿಗಾಗಲಿ ವೈಚಾರಿಕತೆಗಾಗಲಿ ಏನೂ ಬೆಲೆಯಿಲ್ಲದಾಗಿ ಪುರೋಹಿತರುಗಳ ಅಭಿಪ್ರಾಯಗಳೂ ಇಚ್ಛೆಗಳೂ ಧರ್ಮದ ತತ್ವಗಳಾಗಿ ಬದಲಾವಣೆ ಹೊಂದಿದುವು. ಸಂತ ಆಗಸ್ತನ ಅಭಿಪ್ರಾಯಗಳು ಸತ್ಯಾಸತ್ಯ ನಿರ್ಣಯ ಮಾಡುವರೆ ಅಳತೆಗೋಲಾಗಿ ಅಂಗೀಕರಿಸಲ್ಪಟ್ಟಿದ್ದುವು. ಭೂಮಿ ಗೋಳಾಕೃತಿಯಾಗಿತ್ತೆಂದು ಸಿದ್ಧಾಂತಿಸಲ್ಪಟ್ಟಾಗ ಅದಕ್ಕೆದುರಾಗಿ ಕ್ರೈಸ್ತ ಪುರೋಹಿತರು ಎತ್ತಿದ ಅತಿ ಶಕ್ತಿಯುತ ವಾದವೇನೆಂದರೆ, ಹಾಗೆ ಆದರೆ ಕರ್ತನು ಆಕಾಶದಿಂದ ಇಳಿದು ಬರುವಾಗ ಭೂಮಿಯ ಒಂದು ಭಾಗದಲ್ಲಿರುವ ಜನರಿಗೆ ಮಾತ್ರವೇ ಆತನನ್ನು ಕಾಣಲು ಸಾಧ್ಯವಲ್ಲವೇ ಎಂದಾಗಿತ್ತು!

ನಾನು ಕ್ರೈಸ್ತ ಧರ್ಮವನ್ನಾಗಲಿ ಕ್ರೈಸ್ತರನ್ನಾಗಲಿ ದೂಷಿಸಲಿಕ್ಕಾಗಲಿ ವಿಮರ್ಶಿಸಲಿಕ್ಕಾಗಲಿ ಇಚ್ಛಿಸುವುದಿಲ್ಲ. ಯೇಸುಕ್ರಿಸ್ತರು ಕಲಿಸಿದ ಸಿದ್ಧಾಂತಗಳು ಎಂದಿಗೂ ವೈಚಾರಿಕತೆಗಾಗಲಿ ಬುದ್ಧಿಗಾಗಲಿ ವಿರುದ್ಧವಾಗಿರಲಿಲ್ಲವೆಂಬುದು ನಿಜ. ಆ ಮಹಾಪುರುಷರ ಸತ್ಯತತ್ವಗಳಿಂದ ಕ್ರೈಸ್ತರು ಯಾವಾಗ ವಿಮುಖರಾದರೋ ಆಗ ಅವರ ಧರ್ಮವು ವಿಚಾರ ವಿರುದ್ಧವಾಗಿ ಶಕ್ತಿಪ್ರಯೋಗಿಸಲು ತೊಡಗಿತು. ಇದೇ ಪ್ರಕಾರ ಎಲ್ಲಾ ಧರ್ಮಗಳಲ್ಲೂ ನಮಗೆ ಕಾಣಲು ಸಾಧ್ಯ. ಇಂದು ಮುಸ್ಲಿಮರೆಡೆಯಲ್ಲೂ ಅವರು ಖುರ್‌ಆನಿನ ತತ್ವಗಳಿಂದ ಪರಾಙ್ಮುಖರಾದ ಕಾರಣ ಅನೇಕ ಮೂಢನಂಬಿಕೆಗಳು ಹುಟ್ಟಿಕೊಂಡುದಾಗಿ ನಾವು ಕಾಣುತ್ತೇವೆ. ಯಥಾರ್ಥದಲ್ಲಿ, ಇದರಿಂದಾಗಿ ಖುರ್‌ಆನನ್ನಾಗಲಿ ಇಸ್ಲಾಂ ಧರ್ಮವನ್ನಾಗಲಿ ದೂಷಿಸಲಿಕ್ಕೆ ಅಸಾಧ್ಯ. ಏಕೆಂದರೆ ಬುದ್ಧಿಯಿಂದ ವಿಷಯಗಳನ್ನು ಚಿಂತನೆಮಾಡಿ ಅರಿತುಕೊಳ್ಳಬೇಕೆಂದು ಖುರ್‌ಆನ್ ಪದೇ ಪದೇ ಉಪದೇಶಿಸಿರುವುದಾಗಿ ಕಾಣಲು ಪ್ರಯಾಸವಿಲ್ಲ.

* The History of Conflict between Science & Religion, by William Draper - Preface.

## ಇಸ್ಲಾಂ ಮತ್ತು ವಿಚಾರವಿಚಿಂತನೆ

ನಾನು ಇಸ್ಲಾಂ ಧರ್ಮದಲ್ಲಿ ವಿಶ್ವಾಸವುಳ್ಳವನಾಗಿದ್ದೇನೆ. ಆದ್ದರಿಂದ, ಸತ್ಯಧರ್ಮವೆಂದು ನಾನು ಹೇಳುವಾಗ ಇಸ್ಲಾಂ ಧರ್ಮವನ್ನೇ ನಾನು ಉದ್ದೇಶಿಸುವುದೆಂದು ತಿಳಿಯಬೇಕಾಗಿದೆ. ಇಸ್ಲಾಂ ಧರ್ಮವು ಧಾರ್ಮಿಕ ವಿಷಯಗಳಲ್ಲಿ ವೈಚಾರಿಕತೆಯನ್ನೂ ಬುದ್ಧಿಯನ್ನೂ ಉಪಯೋಗಿಸುವ ಕುರಿತು ಏನನ್ನು ಕಲಿಸುತ್ತದೆಂದು ನಾವು ನೋಡಬೇಕಾಗಿದೆ. ಇಸ್ಲಾಂ ಧರ್ಮವೆಂದು ನಾನು ಹೇಳುವಾಗ ಶ್ರೀಕೃಷ್ಣ, ಶ್ರೀಬುದ್ಧ, ಝೊರಾಸ್ಟರ್, ಕನ್‌ಫ್ಯೂಶಿಯಸ್, ಮೋಶೆ, ಯೇಸು ಮೊದಲಾದ, ಲೋಕದಲ್ಲಿ ಅವತರಿಸಿರುವ ಎಲ್ಲಾ ಪ್ರವಾದಿಗಳ ಪವಿತ್ರವೂ ನಿರ್ಮಲವೂ ಆದ ಎಲ್ಲಾ ಸಿದ್ಧಾಂತಗಳನ್ನೂ ಉಪದೇಶಗಳನ್ನೂ ನಾನು ಅದರ ಮೂಲಕ ಅರ್ಥೈಸುತ್ತೇನೆಂದು ಸ್ಪಷ್ಟಪಡಿಸಬೇಕಾಗಿದೆ. ಆ ಸ್ವಚ್ಛವಾದ ಉಪದೇಶಗಳು ಇಂದು ಪವಿತ್ರ ಖುರ್‌ಆನಿನಲ್ಲಿ ಮಾತ್ರವೇ ಕಂಡುಬರುತ್ತವೆ. ಆ ಮಹಾತ್ಮರುಗಳ ಅನುಯಾಯಿಗಳು ಇಂದು ನಾನಾ ರೀತಿಯ ಅಂಧಶ್ರದ್ಧೆಗಳಲ್ಲೂ ಅನಾಚಾರಗಳಲ್ಲೂ ಧರ್ಮಾಭಾಸಗಳಲ್ಲೂ ಮುಳುಗಿರುವವರಾದರೂ ಆ ಮಹಾಪುರುಷರುಗಳು ಬೋಧಿಸಿದ ಪರಿಶುದ್ಧವಾದ ಪಾಠಗಳು ಇಂದು ಖುರ್‌ಆನಿನಲ್ಲಿ ಕಾಣಲು ಸಾಧ್ಯ.

ಮುಹಮ್ಮದ್ ಪೈಗಂಬರ್ (ಸ) ರವರ ಒಂದು ಪವಿತ್ರ ವಚನದಿಂದ ಮಾತ್ರ ಧರ್ಮಕ್ಕೆ ವಿರುದ್ಧವಾದ ವಿಚಾರವಾದಿಗಳ ಸಕಲ ಆಕ್ಷೇಪಣೆಗಳೂ ಸಮೂಲ

ಕುಸಿದು ಬೀಳುತ್ತವೆ. ಆ ಮಹಾ ಪುರುಷರು ಹೀಗೆ ನುಡಿದರು: "ಧರ್ಮವು ಸಂಪೂರ್ಣವಾಗಿಯೂ ವೈಚಾರಿಕವಾಗಿದೆ ಅಥವಾ ವಿವೇಕಯುತವಾಗಿದೆ."

ಮುಹಮ್ಮದ್ ಪೈಗಂಬರರು ಮತ್ತೂ ಹೇಳಿದ್ದಾರೆ: "ಪ್ರತಿಯೊಂದು ವಸ್ತುವಿಗೂ ಒಂದೊಂದು ಸ್ತಂಭವಿದೆ. ಧರ್ಮದ ಸ್ತಂಭ ಬುದ್ಧಿಯಾಗಿದೆ." "ಬುದ್ಧಿಯಿಂದ ಒಬ್ಬನು ಶ್ರೇಷ್ಠನಾಗುತ್ತಾನೆ." "ಸತ್ಯ ವಿಶ್ವಾಸಿಯ ಆಯುಧ ಬುದ್ಧಿಯಾಗಿದೆ." ಹೀಗೆ ಬುದ್ಧಿಶಕ್ತಿಗೂ ವಿಚಾರ ವಿಚಿಂತನಕ್ಕೂ ಪ್ರಾಧಾನ್ಯ ನೀಡಿ ಆ ದಿವ್ಯಾತ್ಮರು ನುಡಿದುದಾಗಿ ಕಾಣಬಹುದು. ಈ ಹೇಳಿಕೆಗಳನ್ನು ದೇವನಿಂದಿರುವ ಉಪದೇಶಗಳಾಗಿಯೂ ತಮ್ಮ ಜೀವಿತಕ್ಕಿರುವ ಮಾರ್ಗದರ್ಶಕಗಳಾಗಿಯೂ ಭಾವಿಸುವ ಓರ್ವ ನೈಜ ಮುಸ್ಲಿಮನಿಗೆ ಎಂದಿಗೂ ಬುದ್ಧಿಗೆ ವಿರೋಧವಾಗಿರುವ ಸಂಗತಿಗಳಲ್ಲಿ ನಂಬಿಕೆಯಿರಿಸಲಿಕ್ಕಾಗಲಿ ವಿಚಾರ ವಿಚಿಂತನೆಯನ್ನು ಅಪಹಾಸ್ಯ ಮಾಡಲಿಕ್ಕಾಗಲಿ ಸಾಧ್ಯವಿಲ್ಲ.' ಮುಹಮ್ಮದ್ ಪೈಗಂಬರರು ಅರಬಿಯರನ್ನು ಮಾತ್ರವಲ್ಲ ಭೂಲೋಕವಾಸಿಗಳನ್ನೆಲ್ಲ ಬುದ್ಧಿಯ ಕಡೆಗೆ ಆಮಂತ್ರಿಸಿದ್ದಾರೆ. ಅರಬಿಯರಿಗೆ ಸಂಬಂಧಿಸಿದ ಮಟ್ಟಿಗೆ ಇಸ್ಲಾಂ ಕತ್ತಲೆಯಿಂದ ಬೆಳಕಿನೆಡೆಗಿರುವ ಪ್ರವೇಶನವಾಗಿತ್ತೆಂದು ವಿಚಾರವಾದಿಗಳು ತಮ್ಮ ಆದರ್ಶ ಪುರುಷನೆಂದು ಅಭಿಮಾನದಿಂದ ಹೇಳುವ ಪಂಡಿತ್ ಜವಾಹರ್‌ಲಾಲ್ ನೆಹರೂ ಪ್ರಸ್ತಾಪಿಸಿದ್ದರು.

ಮನುಷ್ಯನು ವಿವೇಕವನ್ನೂ ಬುದ್ಧಿಶಕ್ತಿಯನ್ನೂ ಉಪಯೋಗಿಸದೆ ಕಣ್ಣುಮುಚ್ಚಿ ನಂಬುವುದನ್ನು ಅಥವಾ ಅಲ್ಲಗಳೆಯುವುದನ್ನು ಕುರಿತು ಪವಿತ್ರ ಖುರ್‌ಆನ್ ಶಕ್ತಿಯುತವಾದ ಭಾಷೆಯಲ್ಲಿ ಆಕ್ಷೇಪಿಸಿದೆ. ಅಂತಹವರ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ: "ಅವರು ಕಿವುಡರು, ಮೂಕರು, ಕುರುಡರು. ಅವರು ಚಿಂತನೆ ಮಾಡುವುದಿಲ್ಲ." "ಅವರಿಗೆ ಹೃದಯಗಳಿವೆ; ಅದರ ಮೂಲಕ ಅವರು ಚಿಂತನೆ ಮಾಡುವುದಿಲ್ಲ. ಅವರಿಗೆ ಕಣ್ಣುಗಳಿವೆ; ಅದರ ಮೂಲಕ ಅವರು ಕಾಣುವುದಿಲ್ಲ. ಅವರಿಗೆ ಕಿವಿಗಳಿವೆ; ಅದರ ಮೂಲಕ ಅವರು ಆಲಿಸುವುದಿಲ್ಲ. ಅವರು ಜಾನುವಾರುಗಳಂತೆ. ಅವರು ಚಿಂತನಾಶೂನ್ಯರಾಗಿದ್ದಾರೆ". ಹಾಗಿರುವಾಗ ಚೆನ್ನಾಗಿ ಚಿಂತನೆ ಮಾಡದೆ, ಕಾಣದೆ, ಕೇಳದೆ ಒಂದು ಸಂಗತಿಯನ್ನು ಅಲ್ಲಗಳೆಯುವುದಾಗಲಿ ಅಸತ್ಯಕ್ಕೆ ಅಂಟಿಕೊಂಡಿರುವುದಾಗಲಿ ಮಾಡುವವರನ್ನು ಪವಿತ್ರ ಖುರ್‌ಆನ್ ಜಾನುವಾರುಗಳಿಗೆ ಹೋಲಿಸಿದೆಯೆಂದೂ ಅವರನ್ನು ಮನುಷ್ಯರ ಸಾಲಿಗೆ ಸೇರಿಸುವುದಿಲ್ಲವೆಂದೂ ಸಾಬೀತಾಗುತ್ತದೆ. ಇಂತಹವರ ಅಂತ್ಯವು ನರಕವಾಗಿರಬಹುದೆಂದು ಸಹ ಖುರ್‌ಆನ್ ಹೇಳುತ್ತದೆ. "ನಾವು ಶ್ರದ್ಧೆವಹಿಸಿ ಸಾಕಷ್ಟು ಚಿಂತನೆ ಮಾಡಿರುತ್ತಿದ್ದರೆ ನಾವು ನರಕ ಶಿಕ್ಷೆಗೆ ಗುರಿಯಾಗುತ್ತಿರಲಿಲ್ಲವಲ್ಲಾ!" ಎಂದು ಅವಿಶ್ವಾಸಿಗಳು ಕೊನೆಗೆ ವಿಲಾಪಿಸುವರೆಂದು ಕೂಡ ಖುರ್‌ಆನ್ ಇನ್ನೊಂದೆಡೆ ಹೇಳುತ್ತದೆ. ಒಂದು ವಿಷಯದ ಕುರಿತು ವಿವೇಚನ ಬುದ್ಧಿಯಿಂದ ಚಿಂತನೆ ಮಾಡದವರನ್ನು "ಅತ್ಯಂತ ನಿಕೃಷ್ಟ ಜೀವಿಗಳು" ಎಂದು ಖುರ್‌ಆನ್ ಕರೆದಿದೆ. ಹೀಗೆ ಬುದ್ಧಿಶಕ್ತಿಗೂ ವಿಚಾರ ವಿಚಿಂತನಕ್ಕೂ ಖುರ್‌ಆನ್ ಅತ್ಯಂತ ಪ್ರಧಾನವಾದ ಸ್ಥಾನವನ್ನೂ ಬೆಲೆಯನ್ನೂ ನೀಡುತ್ತಾ ಚಿಂತನೆಮಾಡಿ ವಿಷಯವನ್ನು ಮನವರಿಯದವರನ್ನು ಮೃಗಗಳು ಮತ್ತು ನಿಕೃಷ್ಟ ಜೀವಿಗಳೊಡನೆ ಹೋಲಿಸಿರುವಾಗ, ಧರ್ಮವು ವೈಚಾರಿಕತೆಗೂ ಬುದ್ಧಿಯ ಪ್ರಯೋಗಕ್ಕೂ ವಿರುದ್ಧವೆಂದು ಹೇಳುವುದು ಎಷ್ಟು ಮಾತ್ರ ಬೆಲೆಯಿಲ್ಲದ ವಾದವೆಂದು ಮನಗಾಣುವರೆ ಪ್ರಯಾಸವಿಲ್ಲ.

## ವಿಚಾರವಾದ ಮತ್ತು ನಂಬಿಕೆ

ವಿಚಾರವಾದಿಗಳು ನಂಬಿಕೆಯನ್ನು ದ್ವೇಷಿಸುವವರಾಗಿದ್ದಾರೆ. ನಂಬಿಕೆಯು ಮನುಷ್ಯನ ಚಿಂತನೆಯನ್ನು ಮರಗಟ್ಟಿಸುವುದಂತೆ! ಮಾರ್ಪಾಟು ಈ ಲೋಕದ ನಿಯಮವೆಂದೂ ಎಲ್ಲವೂ ಬದಲಾವಣೆ ಹೊಂದುತ್ತಿರುವ ಈ ಪ್ರಪಂಚದಲ್ಲಿ ನಿತ್ಯವೂ ಸನಾತನವೂ ಆಗಿಯಾವ ಸತ್ಯವೂ ಇಲ್ಲವೆಂದೂ ಆದ್ದರಿಂದ ಯಾವುದಲ್ಲಾದರೂ ನಂಬಿಕೆಯಿರಿಸುವುದು ಸತ್ಯಾನ್ವೇಷಣೆಗೆ ತಡೆವಾಗುವುದೆಂದೂ ಅವರು ವಾದಿಸುತ್ತಾರೆ. ಸಂಶಯಿಸುವುದು, ಪ್ರಶ್ನಿಸುವುದು, ಅನ್ವೇಷಿಸುವುದು, ಪರೀಕ್ಷಿಸುವುದು ಇವೆಲ್ಲಾ ವಿಚಾರವಾದದ ಪ್ರಧಾನ ಚಟುವಟಿಕೆಗಳಾಗಿವೆ. ಸುನಿಶ್ಚಿತವಾದ ಕೆಲವು ಸತ್ಯಗಳನ್ನಾಗಲಿ ತತ್ವಗಳನ್ನಾಗಲಿ ನಂಬುವುದು ಹಾಗೂ ಅವು ತಪ್ಪೆಂದು ಒಮ್ಮೆಯೂ ಸಂಶಯಿಸದೆ ಇರುವುದು

ಮಾನಂಷ್ಯ ವಂಶದ ಚಿಂತನಾಪರವಾದ ಬೆಳವಣಿಗೆಯನ್ನು ಮುರುಟಿ ಹಾಕುವುದೆಂದು ಅವರು ಭಯಪಡುತ್ತಾರೆ. ದೇವನಿದ್ದಾನೆಂದೂ ಪರಲೋಕವಿದೆಯೆಂದೂ ಸ್ವರ್ಗ ನರಕಗಳಿವೆಯೆಂದೂ ಇತ್ಯಾದಿಯಾಗಿ ನಾವು ದೃಢವಾಗಿ ನಂಬಿಬಿಟ್ಟರೆ ನಮಗೆ ಪ್ರಪಂಚದ ರಹಸ್ಯಗಳನ್ನೂ ಸತ್ಯಗಳನ್ನೂ ಮಣಗಾಣಲು ಸಾಧ್ಯವಿಲ್ಲವೆಂದು ಅವರು ವ್ಯಥೆಪಡುತ್ತಾರೆ! ಆದರೆ ಈ ವಾದವು ಮೂಲಭೂತವಾಗಿಯೇ ಅಸಂಬದ್ಧವಾದುದು. ಏಕೆಂದರೆ ವಿಶ್ವಾಸ ವಿನಾ ಮನುಷ್ಯನಿಗೆ ಈ ಲೋಕದಲ್ಲಿ ಜೀವಿಸಲಿಕ್ಕೆ ಸಾಧ್ಯವಾಗಲಾರದು. ಎರಡು ಮತ್ತು ಎರಡು ನಾಲ್ಕೆಂಬ ವಿಚಾರದಲ್ಲಿ ನಾವು ದೃಢವಾಗಿ ನಂಬದಿದ್ದರೆ ಅಥವಾ ಆ ಕುರಿತು ಯಾವಾಗಲೂ ಸಂಶಯಿಸುತ್ತಿದ್ದರೆ ಅದರ ಫಲವೇನಾದೀತು? ಈ ಭೂಮಿ ಒಂದು ಗೋಳವೆಂದು ಮನುಷ್ಯನು ನಂಬುವುದರಿಂದ ಭೂಶಾಸ್ತ್ರದ ಬಗ್ಗೆ ನಮಗೆ ಹೆಚ್ಚೇನನ್ನೂ ಅರಿಯಲು ಸಾಧ್ಯವಿಲ್ಲವೆಂದಾಗುತ್ತದೆಯೇ? ಮನುಷ್ಯರೆಲ್ಲಾ ಸಾಯುವರೆಂಬ ಅನುಭವದಿಂದ ಎಲ್ಲರಿಗೂ ದೃಢವಿಶ್ವಾಸವಿದ್ದು ಸಹ ಹಾಗೆ ನಂಬುವುದಾದರೆ ವೈದ್ಯಶಾಸ್ತ್ರದ ಬೆಳವಣಿಗೆ ಕುಂಟಿತವಾಗುತ್ತದೆಯೇ? ಈ ನಂಬಿಕೆಗಳು ಮನುಷ್ಯನ ಬುದ್ಧಿಶಕ್ತಿಯನ್ನು ಮೊಟಕುಗೊಳಿಸುವುದಿಲ್ಲವಾದರೆ ದೇವರು, ಸ್ವರ್ಗ – ನರಕ, ಒಳಿತು – ಕೆಡುಕು ಇತ್ಯಾದಿಗಳ ಬಗ್ಗೆ ನಂಬಿಕೆಯಿರಿಸಿಕೊಳ್ಳುವುದರಿಂದ ಧರ್ಮವಿಶ್ವಾಸಿಗಳು ಚಿಂತನೆ ಮಾಡಲು ಅಶಕ್ತರಾಗುವುದು ಹೇಗೆ? ಮಾರ್ಪಾಟು ಈ ಲೋಕದ ನಿಯಮವೆಂದೂ ಆದ್ದರಿಂದ ಸನಾತನ ಸತ್ಯವಾಗಿ ಏನೂ ಇಲ್ಲವೆಂದೂ ಘೋಷಿಸುವ ಈ ವಿಚಾರವಾದಿಗಳು ಮಾರ್ಪಾಟೆಂಬ ನಿಯಮಕ್ಕೆ ಮಾರ್ಪಾಟಿಲ್ಲವೆಂದು ನಂಬುವುದಿಲ್ಲವೇ ಎಂದೂ ಅವರಿಗೆ ಹಾಗೆ ನಂಬಲು ಹೇಗೆ ಸಾಧ್ಯವಾಗುವುದೆಂದೂ ವಿನಯಪೂರ್ವಕವಾಗಿ ನಾನು ಕೇಳಲೇ?

ಪವಿತ್ರ ಖುರ್‌ಆನ್ ದೇವನಲ್ಲೂ ಖುರ್‌ಆನಿನಲ್ಲೂ ಪರಲೋಕದಲ್ಲೂ ದೃಢವಾಗಿ ನಂಬಲಿಕ್ಕೆ ನಮ್ಮೊಡನೆ ಆವಶ್ಯಪಡುತ್ತದೆ. ಮಾತ್ರವಲ್ಲ, ಈ ವಿಷಯಗಳಲ್ಲಿ ದೃಢವಾದ ವಿಶ್ವಾಸವು ಮನುಷ್ಯನಿಗೆ ರಕ್ಷೆ ನೀಡುತ್ತದೆಂದೂ ಸದಾ ಸಂಶಯಿಸುತ್ತಿರುವುದು ದೋಷಕರವೆಂದೂ ಅಜ್ಞೇಯತಾವಾದ (Agnosticism) ಸರಿಯಲ್ಲವೆಂದೂ ಖುರ್‌ಆನ್ ಕಲಿಸುತ್ತದೆ. ಆದ್ದರಿಂದ "ಇದೇ ಯಥಾರ್ಥವಾದ ದಿವ್ಯಗ್ರಂಥ. ಇದರಲ್ಲಿ ಯಾವುದೇ ಸಂಶಯಕ್ಕೆ ಎಡೆಯಿಲ್ಲ. ಸೂಕ್ಷ್ಮಮತಿಗಳಿಗೆ ಇದು ಮಾರ್ಗದರ್ಶಕವಾಗಿದೆ." (2:2) ಎಂಬಿತ್ಯಾದಿಯಾಗಿ ಖುರ್‌ಆನ್ ಆರಂಭದಲ್ಲೇ ಘೋಷಿಸಿದೆ.

## ನಂಬಿಕೆ ಪುರಾವೆಗಳ ಮೂಲಕ

ನಮ್ಮ ಎಲ್ಲಾ ಅಭಿಪ್ರಾಯಗಳೂ ಹೇಳಿಕೆಗಳೂ ಪುರಾವೆಗಳ ಆಧಾರದಿಂದಾಗಿರಬೇಕೆಂದೂ ಅನ್ವೇಷಣೆಯಿಂದ ಸ್ಪಷ್ಟವಾಗುವ ಪುರಾವೆಗಳನ್ನು ಅಲ್ಲಗಳೆಯಬಾರದೆಂದೂ ವಿಚಾರವಾದಿಗಳು ಹೇಳುತ್ತಾರೆ. The assertion that outstrips the evidence is not only a blunder but also a crime. "ಪುರಾವೆಗೆ ಮೀರಿದ ದೃಢ ಹೇಳಿಕೆ ತಪ್ಪು ಮಾತ್ರವಲ್ಲ ಅಪರಾಧ ಕೂಡ ಆಗಿದೆ" ಎಂಬುದು ವಿಚಾರವಾದಿಗಳ ಮತ್ತೊಂದು ಘೋಷಣೆಯಾಗಿದೆ. ಈ ಘೋಷಣೆಯೊಂದಿಗೆ ಸಂಪೂರ್ಣವಾಗಿ ನಮಗೆ ಸಹಮತರಾಗಲು ಸಾಧ್ಯವಿದೆ. ಪುರಾವೆಗೆ ಮೀರಿದ ದೃಢ ಪ್ರಸ್ತಾಪನೆ ಅಪರಾಧವೆಂದಾದರೆ, ವಿಚಾರವಾದಿಗಳೆಂದು ಅಭಿಮಾನಪಟ್ಟುಕೊಂಡು ದೇವಾಸ್ತಿತ್ವವನ್ನು ಅಲ್ಲಗಳೆದು ಪ್ರವಾದಿಗಳನ್ನು ಮೋಸಗಾರರು ಮತ್ತು ಭ್ರಾಂತರೆಂದು ಚಿತ್ರೀಕರಿಸುವ "ವಿಚಾರವಾದಿ"ಗಳೆಲ್ಲರೂ ಕಟಕಟೆಯನ್ನು ಹತ್ತಬೇಕಾಗುತ್ತದೆ. ಏಕೆಂದರೆ, ಪವಿತ್ರ ಖುರ್‌ಆನ್ ಲೋಕದ ಮುಂದೆ ಇರಿಸಿದ ಹಾಗೂ ಇಂದು ಸಹ ಪಂಥಾಹ್ವಾನವೊಡ್ಡುವ ಒಂದು ತತ್ವವಾಗಿದೆ ಇದು. "ಹೇಳಿರಿ, ನೀವು ಸತ್ಯವಂತರೆಂದಾದರೆ ಪುರಾವೆಗಳನ್ನು ತೋರಿಸಿರಿ" ಎಂಬುದಾಗಿದೆ ಖುರ್‌ಆನಿನ ಪಂಥಾಹ್ವಾನ. 1400 ವರ್ಷಗಳಿಗೂ ಮಿಕ್ಕಿ ನಾಸ್ತಿಕವಾದಿಗಳು, ಧರ್ಮವಿರೋಧಿಗಳು ಮತ್ತು ಅವಿಶ್ವಾಸಿಗಳೊಡನೆ ಖುರ್‌ಆನ್ ಈ ಸವಾಲನ್ನು ಮುಂದೊಡ್ಡುತ್ತಿದೆ. ಈ ಆಹ್ವಾನ ಮೂಲಕ, ಪುರಾವೆಗೆ ಮೀರಿದ ದೃಢ ಪ್ರಸ್ತಾಪನೆ ತಪ್ಪು ಮಾತ್ರವಲ್ಲ, ಅಪರಾಧ ಸಹ ಆಗಿದೆ ಎಂದು ಖುರ್‌ಆನ್ ಸಿದ್ಧಾಂತಿಸುತ್ತದೆ. ನಕಾರಾತ್ಮಕವಾದ ಒಂದು ಪ್ರಸ್ತಾಪನೆಗೆ ಎಂದಿಗೂ ಪುರಾವೆಗಳನ್ನು ನೀಡಲು ಅಸಾಧ್ಯ. ನಾಸ್ತಿಕತೆಯು ನಕಾರಾತ್ಮಕವಾಗಿರುವಾಗ ಯಾವ ಪುರಾವೆಯನ್ನು ತೋರಿಸಲು ಅದಕ್ಕೆ ಸಾಧ್ಯ? ಧರ್ಮಲೋಕದಲ್ಲಿರುವ ಎಲ್ಲಾ ವಿಶ್ವಾಸಿಗಳಿಗೂ

ಪುರಾವೆಗಳ ಆಧಾರವಿದೆ. ಪ್ರವಾದಿಗಳ ವಿಜಯಗಳ ಮೂಲಕ ಲೋಕದಲ್ಲಿ ಪುನಃ ಪುನಃ ರುಜುಗೊಳಿಸಲ್ಪಟ್ಟದ್ದಾಗಿದೆ ಧರ್ಮದ ಮಹಿಮೆ. ಆದುದರಿಂದ ಆ ಪುರಾವೆಗಳನ್ನು ಅಲ್ಲಗಳೆಯುವ ವಿಚಾರವಾದಿಗಳು ಅಪರಾಧಿಗಳೇ ಸರಿ.

## ಸ್ವತಂತ್ರ ಚಿಂತನೆ

ವಿಚಾರವಾದಿಗಳು ಒತ್ತಿ ಹೇಳುವ ಇನ್ನೊಂದು ಸಂಗತಿ ಸ್ವತಂತ್ರ ಚಿಂತನೆಯಾಗಿದೆ. ಧರ್ಮವಿಶ್ವಾಸಿಗಳಿಗೆ ಸ್ವತಂತ್ರವಾಗಿ ಚಿಂತನೆಮಾಡಲು ಸಾಧ್ಯವಿಲ್ಲವೆಂದೂ ಕೆಲವು ನಂಬಿಕೆಗಳ ಬಂಧನದಲ್ಲಿ ಸಿಲುಕಿರುವ ಅವರಿಗೆ ಆ ನಂಬಿಕೆಗಳನ್ನು ಬದಿಗಿರಿಸಿ ಚಿಂತನೆಮಾಡಲು ಸಾಧ್ಯವಲ್ಲವೆಂದೂ ಅವರು ಹೇಳುತ್ತಾರೆ. ಧರ್ಮ ವಿಶ್ವಾಸಿಗಳಿಗೆ ಧರ್ಮ ತತ್ವಗಳ ಪೊಳ್ಳುತನವನ್ನು ಮನಗಾಣುವ ಶಕ್ತಿಯಿಲ್ಲದಾಗುವುದು ಆ ಕಾರಣದಿಂದಾಗಿದೆಯೆಂದೂ ಮನುಷ್ಯಮನಸ್ಸಿನ ಈ ದೌರ್ಬಲ್ಯ ಕಾರಣದಿಂದಾಗಿ ಲೋಕದಲ್ಲಿರುವ ಬಹುಪಕ್ಷ ಜನರು ವಿಚಾರವಿಚಿಂತನಕ್ಕೆ ಸಿದ್ಧರಾಗದೆ ವಿಶ್ವಾಸಿಗಳಾಗಿದ್ದಾರೆಂದೂ ಅವರು ವಾದಿಸುತ್ತಾರೆ. ಸರ್ ಜೇಮ್ಸ್ ಜೀನ್ಸ್ ಅವರಂತಹ ಪ್ರಸಿದ್ಧ ಶಾಸ್ತ್ರಜ್ಞರು ಕೂಡ ದೇವವಿಶ್ವಾಸಿಯಾಗಿರುವ ಕಾರಣ ಇದೇ ಆಗಿದೆಯೆಂದೂ ಪರಂಪರಾಗತ ನಂಬಿಕೆಯ ಬಂಧನದಿಂದ ವಿಮುಕ್ತರಾಗಲು ಅವರಿಗೆ ಸಾಧ್ಯವಾಗಿಲ್ಲವೆಂದೂ ವಿಚಾರವಾದಿಗಳು ಸಿದ್ಧಾಂತಿಸುತ್ತಾರೆ.

ಧರ್ಮವಿಶ್ವಾಸಿಗಳ ಕುರಿತು ವಿಚಾರವಾದಿಗಳ ಈ ಆರೋಪಣೆ ಮತ್ತು ವಾದ ಸ್ವೀಕಾರಾರ್ಹವೆಂದಾದರೆ ಇದೇ ಆಕ್ಷೇಪ ಮತ್ತು ಆರೋಪಕ್ಕೆ ವಿಚಾರವಾದಿಗಳು ಸಹ ಈಡಾಗುತ್ತಾರೆಂದು ಮನಗಾಣಲು ಅವರಿಗೆ ಸಾಧ್ಯವಾಗದಿರುವುದು ಚಿಂತನೆಯ ಕೊರತೆಯಿಂದಾಗಲಿಕ್ಕೇ ನಿರ್ವಾಹವಿದೆ. ಧರ್ಮ, ದೇವರು ಮೊದಲಾದ ವಿಷಯಗಳ ಬಗ್ಗೆ ತಮಗಿರುವ ಸ್ಪಷ್ಟವಾದ ಅಭಿಪ್ರಾಯಗಳನ್ನೂ ಪೂರ್ವಾಗ್ರಹಗಳನ್ನೂ ಬದಿಗಿರಿಸಿಕೊಂಡೋ ವಿಚಾರವಾದಿಗಳು ಧರ್ಮದ ಕುರಿತು ವಿವಾದ, ಚರ್ಚೆ ಮತ್ತು ಅಭಿಮತ ಪ್ರಕಟನೆ ಮಾಡುತ್ತಿರುವುದು? ಖಂಡಿತವಾಗಿಯೂ ಅಲ್ಲ! ಹಾಗಿರುವಾಗ ತಾವು "ಸ್ವತಂತ್ರ ಚಿಂತಕರು" ಎಂಬ ನಟನೆಯಿಂದ ಧರ್ಮವಾದಿಗಳೊಡನೆ ಆ ಪ್ರಕಾರ ಅವಶ್ಯಪಡುವುದರಲ್ಲಿ ಏನು ನೀತಿಯಿದೆ? ಇದು ಸ್ವತಂತ್ರ ಚಿಂತನೆ ಎಂದಾದರೆ ಸ್ವತಂತ್ರ ಚಿಂತನೆ ಎಂದು ಹೇಳುವುದೇ ಅರ್ಥಶೂನ್ಯವಾದ ಒಂದು ಪದಪ್ರಯೋಗವಾಗುವುದು. ಸಂಪೂರ್ಣ ಸ್ವತಂತ್ರವಾಗಿ ಯಾರಿಗೂ ಏನನ್ನೂ ಚಿಂತನೆ ಮಾಡಲು ಅಸಾಧ್ಯ. ಪ್ರತಿಯೊಬ್ಬನ ಮನಸ್ಸಿನಲ್ಲಿ ಹಲವು ವಿಧದಲ್ಲಿ ರೂಢಮೂಲವಾಗಿರುವ ನಂಬಿಕೆ ಮತ್ತು ಅಭಿಪ್ರಾಯಗಳ ಸ್ವಾಧೀನ ಮತ್ತು ಪ್ರತಿ ಸ್ವಾಧೀನಗಳ ಅನುಸಾರವಾಗಿರಬಹುದು ಒಬ್ಬನ ಮಸ್ತಿಷ್ಕದಲ್ಲಿ ಒಂದು ಸಂಗತಿಯ ಕುರಿತು ಒಂದು ಅಭಿಪ್ರಾಯ ರೂಪಗೊಳ್ಳುವುದು ಹಾಗೂ ಚಿಂತನೆಗಳು ಹುಟ್ಟುವುದು. ಆದ್ದರಿಂದ ಧರ್ಮವಿಶ್ವಾಸಿಗೆ ಸ್ವತಂತ್ರವಾಗಿ ಚಿಂತನೆ ಮಾಡಲು ಸಾಧ್ಯವಿಲ್ಲವೆಂದು ಆಕ್ಷೇಪಿಸುತ್ತಾ ತಪ್ಪಿಸಿಕೊಳ್ಳಲು ವಿಚಾರವಾದಿಗಳಿಗೆ ಎಂದಿಗೂ ಸಾಧ್ಯವಿಲ್ಲ. ನಾವು ಸಾಮಾನ್ಯಬುದ್ಧಿಯ (Commonsense) ಆಧಾರದಿಂದ ವಿಷಯಗಳನ್ನು ಕಾಣಬೇಕಾಗಿದೆ, ಸಾಮಾನ್ಯ ಬುದ್ಧಿಯ ಆಧಾರದಿಂದ ಮಾತ್ರವೇ ಎಲ್ಲ ವಿಷಯಗಳಲ್ಲೂ ತೀರ್ಪು ನೀಡಲು ಅಸಾಧ್ಯವಾದರೂ ಕೂಡ. ವಿಶ್ವಾಸಿಗೆ ವಿಚಾರಪ್ರಜ್ಞೆ ಮತ್ತು ಸ್ವತಂತ್ರ ಚಿಂತನೆ ಇರಲಾರದೆಂದಾದರೆ, ಲೋಕದಲ್ಲಿ ವಿಚಾರವಾದಿಗಳೇ ಇರುತ್ತಿರಲಿಲ್ಲ. ಪೌರೋಹಿತ್ಯ ಅಧ್ಯಯನಕ್ಕಾಗಿ ಹೊರಟ ಜೋಸೆಫ್ ವಿಸಾರಿಯೋನೋವಿಚ್ ಸ್ಟಾಲಿನ್, ಒಂದೇ ಉಸಿರಿಗೆ ನಾಲ್ಕು ಸುವಾರ್ತೆಗಳನ್ನು ಬಾಯಿಪಾಠ ಹೇಳಿ ಬಹುಮಾನ ಗಳಿಸಿದ ನಿಕಿತಾ ಸರ್ಗಿವಿಚ್ ಕ್ರುಶ್ಚೇವ್, ಯಾಕೋಬಾ ಕ್ರೈಸ್ತ ಕುಟುಂಬದಲ್ಲಿ ಜನಿಸಿ ಕ್ರೈಸ್ತ ಸ್ವಾಧೀನದಲ್ಲಿ ಬೆಳೆದ ಶ್ರೀ ಎಂ. ಸಿ. ಜೋಸೆಫ್ ಮೊದಲಾದವರು ಧರ್ಮವಿರೋಧಿಗಳಾಗಿ ಮಾರ್ಪಡಲು ಅವಕಾಶವಿರುತ್ತಿರಲಿಲ್ಲ.

## ಇಸ್ಲಾಂ ಮತ್ತು ವೈಜ್ಞಾನಿಕ ಚಿಂತನೆ

ಇಷ್ಟು ಹೇಳಿದ ಬಳಿಕ, ಬೌದ್ಧಿಕ ಪ್ರವರ್ತನೆಗೆ ಇಸ್ಲಾಂ ನೀಡಿದ ಸ್ಥಾನವೇನೆಂದು ಪರೀಕ್ಷಿಸೋಣ. ವಿಜ್ಞಾನಕ್ಕೆ ಮುಸ್ಲಿಮರು ನೀಡಿರುವ ಕೊಡುಗೆಗಳನ್ನು ನಾನಿಲ್ಲಿ ವಿವರಿಸುವುದಿಲ್ಲ. ಅತ್ಯಂತ ಕಡಿಮೆ ಕಾಲದೊಳಗೆ ಇಸ್ಲಾಂ ಲೋಕದಲ್ಲಿ ಬೃಹತ್ತಾದ ಪರಿವರ್ತನೆ ಉಂಟು ಮಾಡಿತು. ಅದರ ಅದ್ಭುತಕರವಾದ ಪ್ರಚಾರವೇಗದ ಬಗ್ಗೆ ಡ್ರೇಪರ್ ಹೀಗೆ ಹೇಳುತ್ತಾರೆ:

Never in the history of the world had there been so rapid and extensive a propagation of any religion as Mohammedanism. "ಇಸ್ಲಾಂ ಧರ್ಮದಂತೆ ಅಷ್ಟು ಶೀಘ್ರಗತಿಯ ಹಾಗೂ ವಿಪುಲವಾದ ಪ್ರಚಾರ ಲೋಕಚರಿತ್ರೆಯಲ್ಲಿ ಬೇರಾವ ಧರ್ಮಕ್ಕೂ ದೊರೆಯಲಿಲ್ಲ."*1 ಈ ಪ್ರಚಾರ ಇಸ್ಲಾಮಿಗೆ ಸಿದ್ಧಿಸಿದ್ದು ಬುದ್ಧಿಯ ಪ್ರವರ್ತನೆಗೆ ಅದು ಸ್ಥಾನ ನೀಡಿದುದರಿಂದಲೇ ಆಗಿದೆ. ಇಸ್ಲಾಂ ಜಗತ್ತಿನಲ್ಲಿ ಉಂಟುಮಾಡಿದ ವೈಜ್ಞಾನಿಕ ಪರಿವರ್ತನೆಯ ಬಗ್ಗೆ ಡ್ರೇಪರ್‌ರವರೇ ಹೇಳುತ್ತಾರೆ:

It is remarkable how quickly the ferocious fanaticism of the Saracens was transformed into a passion for intellectual pursuits. "ಅರಬಿಯರ ತೀವ್ರವಾದ ಧರ್ಮಭ್ರಾಂತಿ ಎಷ್ಟು ಶೀಘ್ರವಾಗಿ ಚಿಂತನಾಪರವಾದ ಪರಿಶ್ರಮಕ್ಕಾಗಿ ಬಲವಾದ ಉತ್ಸಾಹವಾಗಿ ಪರಿಣಮಿಸಿದ್ದೆಂಬುದು ಅತ್ಯಂತ ಗಮನಾರ್ಹವಾಗಿದೆ.*2

ಪಂಡಿತ್ ನೆಹರೂ ಹೇಳುತ್ತಾರೆ: The story of the Arabs, and how they spread rapidly over Asia, Europe and Africa, and of the high culture and civilization which they developed is one of the wonders of history. "ಅರಬಿಯರ ಚರಿತ್ರೆ, ಅವರು ಏಷ್ಯಾದಲ್ಲೂ ಯುರೋಪಿನಲ್ಲೂ ಆಫ್ರಿಕದಲ್ಲೂ ಶೀಘ್ರಗತಿಯಲ್ಲಿ ಹರಡಿದ್ದು ಹೇಗೆ ಎಂಬುದು ಹಾಗೂ ಅವರು ಬೆಳೆಸಿಕೊಂಡು ಬಂದ ಉನ್ನತವಾದ ಸಂಸ್ಕೃತಿ ಮತ್ತು ನಾಗರಿಕತೆ ಇತಿಹಾಸದ ಅದ್ಭುತಗಳಲ್ಲಿ ಒಂದಾಗಿದೆ."*3 ಅರಬಿಯರಲ್ಲಿ ಈ ಮಹತ್ತಾದ ಪರಿವರ್ತನೆ ಉಂಟುಮಾಡಿದ್ದು ಇಸ್ಲಾಂ ಧರ್ಮವೇ ಆಗಿದೆಯೆಂದು ಸಹ ನೆಹರೂ ಹೇಳಿದ್ದಾರೆ.*4

*1 History of the conflict between Science and Religion – Draper P. 96

*2 Ibid – P. 110

*3,4 Glimpses of World History – Nehru, P. 224

ಯುರೋಪಿನಲ್ಲಿ ಬುದ್ಧಿಪರವಾದ ಪ್ರವರ್ತನೆಗಳ ಪ್ರಾಜ್ಞರು ಮುಸ್ಲಿಮರಾಗಿದ್ದರೆಂದು ಅಥವಾ ಧರ್ಮವಿಶ್ವಾಸಿಗಳಾಗಿದ್ದರೆಂದು ಇತಿಹಾಸಗಾರರೆಲ್ಲರೂ ಒಪ್ಪಿಕೊಂಡಿರುತ್ತಾರೆ. ಡ್ರೇಪರ್ ಹೇಳುತ್ತಾರೆ: It will be found that their presence in Sicily and the south of Italy exerted a marked influence on the intellectual development of Europe. "ಸಿಸಿಲಿ ಮತ್ತು ದಕ್ಷಿಣ ಇಟೆಲಿಯಲ್ಲಿ ಅವರ (ಮುಸ್ಲಿಮರ) ಸಾನ್ನಿಧ್ಯವು ಯುರೋಪಿನಲ್ಲಿ ಬೌದ್ಧಿಕ ಬೆಳವಣಿಗೆಯಲ್ಲಿ ಬಹಳ ಪ್ರಭಾವ ಬೀರಿದೆಯೆಂದು ಕಾಣಬಹುದು." ಈ ಬೌದ್ಧಿಕ ಚಟುವಟಿಕೆಗಳೂ ವೈಜ್ಞಾನಿಕ ಪರಿಶ್ರಮಗಳೂ ಇಸ್ಲಾಮಿನ ಆವಿರ್ಭಾವದೊಂದಿಗೆಯೇ ಆರಂಭಿಸಿರುತ್ತದೆ. ಕ್ರಿ. ಶ. 638ರಲ್ಲಿ ಅಲೆಗ್ಸಾಂಡ್ರಿಯವನ್ನು ಸ್ವಾಧೀನ ಪಡಿಸಿದಂದಿನಿಂದಲೇ, ಎಂದರೆ ಮುಹಮ್ಮದ್ ಪೈಗಂಬರರು ನಿಧನಹೊಂದಿ 6 ವರ್ಷ ಕಳೆದಾಗಲೇ ಮುಸ್ಲಿಮರ ವೈಜ್ಞಾನಿಕ ಚಟುವಟಿಕೆಗಳು ಆರಂಭಿಸಿದವೆಂದು ಡ್ರೇಪರ್ ಬೊಟ್ಟು ಮಾಡಿ ತೋರಿಸಿದ್ದಾರೆ. ವಿಶ್ವಾಸಿಗಳಾದ ಮುಸ್ಲಿಮರ ವೈಜ್ಞಾನಿಕ ಅನ್ವೇಷಣಗಳ ಬಗ್ಗೆ ಡ್ರೇಪರ್ ಹೀಗೆ ಹೇಳುತ್ತಾರೆ:

Sometimes not without surprise, we meet with ideas which we flatter ourselves have originated in our own times. Thus our modern doctrine of evolution and development were taught in their Schools. "ನಮ್ಮ ಕಾಲದಲ್ಲಿ ನಾವೇ ರೂಪುಗೊಳಿಸಿದ್ದೆಂದು ಕೆಲವೊಮ್ಮೆ ಸ್ವಯಂ ಪ್ರಶಂಸೆಮಾಡುವ ಕೆಲವು ವಿಚಾರಗಳನ್ನು ಕೆಲವೊಮ್ಮೆ ಆಶ್ಚರ್ಯದಿಂದ ನಾವು ಅವರೆಡೆಯಲ್ಲಿ ಕಾಣುತ್ತೇವೆ. ಅವರ ವಿದ್ಯಾಲಯಗಳಲ್ಲಿ ವಿಕಾಸವಾದ, ಬೆಳವಣಿಗೆ ಮುಂತಾದ ನಮ್ಮ ಅಧುನಿಕ ಸಿದ್ಧಾಂತಗಳು ಕಲಿಸಲ್ಪಡುತ್ತಿದ್ದವು."*5

ಈ ಮಹತ್ತಾದ ವೈಜ್ಞಾನಿಕ ಅನ್ವೇಷಣೆಗಳ ಮುಖಂಡರು ಧರ್ಮವಿಶ್ವಾಸಿಗಳಾದ ಮುಸ್ಲಿಮರಾಗಿದ್ದರು. ಪೈಗಂಬರರು ಕಲಿಸಿದ ಎಲ್ಲ ತರ ನಂಬಿಕೆಗಳನ್ನು

*5 The History of the conflict between Science and Religion – William Draper – P. 118

ಇರಿಸಿಕೊಂಡಿರುವಾಗಲೇ ಅವರು ಈ ವೈಜ್ಞಾನಿಕ ಅನ್ವೇಷಣೆಯಲ್ಲೂ ಪ್ರವೃತ್ತಿಯಲ್ಲೂ ನಿರತರಾಗಿದ್ದರೆಂದು ತಿಳಿಯುವಾಗ ವಿಚಾರವಾದಿಗಳು ಧರ್ಮದ ಬಗ್ಗೆ ಎತ್ತುವ ಆಕ್ಷೇಪಗಳಿಗೆ ಏನು ಬೆಲೆಯಿದೆ ? ಯುರೋಪಿನ ಮೊತ್ತಮೊದಲ ಮೆಡಿಕಲ್ ಕಾಲೇಜನ್ನು ಇಟೆಲಿಯ ಸಾಲರ್‌ನೋದಲ್ಲಿ ಮತ್ತು ಮೊತ್ತಮೊದಲ ಖಗೋಳ ವೀಕ್ಷಣಾಲಯವನ್ನು ಸ್ಪೈನಿನ ಸೆವಿಲ್ಲದಲ್ಲಿ ಸ್ಥಾಪಿಸಿದ್ದು ಮುಸ್ಲಿಮರೇ ಆಗಿದ್ದರು. ಇಸ್ಲಾಂ ಭಾರತದಲ್ಲಿ ಬೀರಿದ ಮಹತ್ತಾದ ಪ್ರಭಾವದ ಬಗ್ಗೆ ಜವಾಹರಲಾಲ್ ನೆಹರೂ ಹೇಳಿದ್ದು, ಅದು ಭಾರತಕ್ಕೆ ಒಂದು "ಟಾನಿಕ್" ಎಂಬಂತಾಗಿತ್ತು ಎಂದಾಗಿದೆ. ಮುಸ್ಲಿಮರಾದ ಅರಬಿಯರು ಬಹಳ ಸಹಿಷ್ಣುತೆಯುಳ್ಳವರೂ ವಿಚಾರವಾದಿಗಳೂ ಆಗಿದ್ದರೆಂದೂ ಖಲೀಫ ಅಲ್‌ಮಾಮೂರವರ ಆಳ್ವಿಕೆಯ ಕಾಲದಲ್ಲಿ ಎಲ್ಲಾ ಧರ್ಮೀಯರು ಮತ್ತು ಧರ್ಮದಲ್ಲಿ ನಂಬಿಕೆಯಿಲ್ಲದವರು ಸಹ ಒಟ್ಟಾಗಿ ಸಮ್ಮೇಳಿಸಿ ಹಲವು ಸಮಸ್ಯೆಗಳ ಬಗ್ಗೆ ವಿಚಾರವಾದದ ಆಧಾರದಲ್ಲಿ ಮಾತ್ರ ಚರ್ಚೆಗಳನ್ನು ನಡೆಸಲಿಕ್ಕೆ ಒಂದು ಪ್ರತ್ಯೇಕ ಕ್ಲಬ್ಬನ್ನೇ ಬಗ್ದಾದಿನಲ್ಲಿ ಸ್ಥಾಪಿಸಲಾಗಿತ್ತೆಂದೂ ನೆಹರೂ ತನ್ನ "Glimpses of World History" ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇಸ್ಲಾಂ ಧರ್ಮ ಜಗತ್ತಿನಲ್ಲಿ ಉಂಟು ಮಾಡಿದ ಮಹತ್ತಾದ ಪರಿವರ್ತನೆಯಾಗಿದೆ ಇದು. ಈ ರೀತಿಯ ಪರಿವರ್ತನೆಯನ್ನು ಲೋಕದಲ್ಲಿ ಎಂದಿಗೂ ಎಲ್ಲಿಯೂ ವಿಚಾರವಾದದಿಂದ ಉಂಟುಮಾಡಲು ಸಾಧ್ಯವಾಗಿಲ್ಲ. ಹಾಗಿದ್ದರೂ ವಿಚಾರವಾದಿಗಳು ಹೇಳುವುದು ಧರ್ಮವು ಮನುಷ್ಯರನ್ನು ಬುದ್ಧಿಹೀನರನ್ನಾಗಿ ಮಾಡುತ್ತದೆ ಎಂದಾಗಿದೆ. ವಿಚಾರವಾದದ ಬಗ್ಗೆ ಶ್ರೀ ಜವಾಹರಲಾಲ್ ನೆಹರೂ ಪ್ರಕಟಿಸಿದ ಒಂದು ಅಭಿಪ್ರಾಯವನ್ನು ಮಾತ್ರವೇ ಈ ಸಂದರ್ಭದಲ್ಲಿ ನಿಮ್ಮ ಮುಂದಿಡಲು ಬಯಸುತ್ತೇನೆ. ಅವರು ಹೇಳಿದರು: Rationalism on the other hand with all it's virtues somehow appears to deal with the surface of things without uncovering the inner core. "ಇನ್ನೊಂದು ಕಡೆಯಲ್ಲಿ, ವಿಚಾರವಾದವು ಅದಕ್ಕೆ ಏನೆಲ್ಲಾ ಗುಣಗಳಿದ್ದರೂ ವಿಷಯದ ಒಳತಿರುಳನ್ನು ತೆರೆದು ತೋರಿಸದೆ ಮೇಲ್ಮೈಯ ಬಗ್ಗೆ ಮಾತ್ರ ವಿಚಾರ ಮಾಡುತ್ತದೆ."*

---

* Bhavan's Journal Nov. 1958.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು : 48 ಬೆಲೆ : ಒಂದು ರೂಪಾಯಿ ಅಂಚೆ ವೆಚ್ಚ : ಉಚಿತ

ಬರೆಯಿರಿ : Secretary, Ahmadiyya Muslim Mission,
10-23-1008, Ansari Road, Bunder, Mangalore–575 001.

# ಇಸ್ಲಾಂ ಧರ್ಮ ಮತ್ತು ಅಹಿಂಸೆ

—ಎಂ. ಪಿ. ಇಬ್ರಾಹಿಂ

ಇಸ್ಲಾಂ ಧರ್ಮವು ಅಹಿಂಸೆಯನ್ನು ಪ್ರಬೋಧಿಸುತ್ತದೆ ಎಂದು ಕೇಳಿದರೆ ಕೆಲವರಿಗೆ ಆಶ್ಚರ್ಯವಾಗಬಹುದು. ಅಹಿಂಸೆಗೆ ಇಸ್ಲಾಂನಲ್ಲಿ ಜಾಗವಿಲ್ಲವೆಂದೂ ಆ ಧರ್ಮದಲ್ಲಿ ಹಿಂಸೆಯೇ ತುಂಬಿಹೋಗಿದೆ ಎಂದೂ ತಿಳಿದುಕೊಂಡಿರುವವರು ಇಂದು ದೌರ್ಭಾಗ್ಯವಶಾತ್ ತುಂಬಾ ಜನ ಇದ್ದಾರೆ. ಆದರೆ, ಅದು ಶುದ್ಧ ತಪ್ಪು ಅಭಿಪ್ರಾಯವೆಂದು ಹೇಳದೆ ನಿರ್ವಾಹವಿಲ್ಲ. ಇಸ್ಲಾಂ ಧರ್ಮ ತತ್ವಗಳ ಬಗ್ಗೆ ಸರಿಯಾದ ಅರಿವಿಲ್ಲದ ಕಾರಣ ಅಂಥವರಲ್ಲಿ ಈ ತಪ್ಪಭಿಪ್ರಾಯ ಉದ್ಭವಿಸಿರಬಹುದು. ಅತ್ಯಂತ ದೌರ್ಭಾಗ್ಯದ ಸಂಗತಿಯೆಂದರೆ, ಇಂದಿನ ಜಗತ್ತಿನಲ್ಲಿರುವ ಮುಸ್ಲಿಂ ರಾಷ್ಟ್ರಗಳೆಂದು ಹೇಳಿಕೊಳ್ಳುವ ಕೆಲವು ದೇಶಗಳಲ್ಲಿ ನಡೆಯುತ್ತಿರುವ ಆಗುಹೋಗುಗಳು ಈ ರೀತಿಯ ಒಂದು ಭಾವನೆಯನ್ನು ಇತರ ಧರ್ಮೀಯರಲ್ಲಿ ಉಂಟುಮಾಡಲು ಎಡೆಮಾಡಿದೆ ಎಂಬುದು. ಆದರೆ, ಜನರು ಸಾಮಾನ್ಯವಾಗಿ ತಿಳಿಯುವಂತೆ ಪಾಕಿಸ್ತಾನ ಅಥವಾ ಇರಾನ್ ಅಥವಾ ಸೌದಿ ಅರೇಬಿಯಾ ಅಥವಾ ಇನ್ನಾವುದೇ ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಹಿಂಸಾಚಾರಗಳನ್ನು ಕಾರಣವಾಗಿರಿಸಿಕೊಂಡು ಅಥವಾ ಇದನ್ನು ಮಾತ್ರ ನೋಡಿ, ಇಸ್ಲಾಂ ಧರ್ಮವೇ ಹಿಂಸಾತ್ಮಕ ಧರ್ಮ ಎಂದು ತೀರ್ಮಾನಿಸುವುದು ತಪ್ಪಾಗಬಹುದು. ಕಾರಣವೇನೆಂದರೆ, ಇಸ್ಲಾಂ ಧರ್ಮವೆಂಬುದು ಪವಿತ್ರ ಖುರ್‌ಆನ್ ಪ್ರಬೋಧಿಸುವ ತತ್ವಾದರ್ಶಗಳ ಹೆಸರಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರು ನಡೆದು ತೋರಿಸಿದ ಜೀವನ ಕ್ರಮದ ಹೆಸರೇ ಇಸ್ಲಾಂ ಎಂದು. ಆದುದರಿಂದ ಪವಿತ್ರ ಖುರ್‌ಆನ್ ಬೋಧಿಸುವ ಅಧ್ಯಾಪನೆಗಳಿಗೂ ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಚರ್ಯೆಗಳಿಗೂ ವಿರುದ್ಧವಾಗಿ ಯಾರಾದರೂ, ಜಿಯಾವುಲ್ ಹಕ್ ಅಥವಾ ಖೊಮೇನಿಯಂಥವರು ತಮ್ಮ ರಕ್ತದಾಹದ ಶಮನಕ್ಕಾಗಿ ಏನಾದರೂ ಪೈಶಾಚಿಕ ಕೃತ್ಯಗಳನ್ನೆಸಗಿದ್ದರೆ, ಅದು ಅಂತಹ ವ್ಯಕ್ತಿಗಳ ಮಾತ್ರ ತಪ್ಪು ಎಂದು ಪರಿಗಣಿಸಬೇಕಾಗಿದೆ ಹೊರತು ಕೆಲವು ವ್ಯಕ್ತಿಗಳ ನಡತೆಯನ್ನು ಮಾನದಂಡವಾಗಿರಿಸಿಕೊಂಡು ಒಂದು ಧರ್ಮದ ಬಗ್ಗೆ ಅಭಿಪ್ರಾಯ ಹೊಂದುವುದು ಯಾವತ್ತೂ ಸರಿಯಾಗಲಾರದು.

ಇಸ್ಲಾಂ ಧರ್ಮದ ಆಧಾರವು ಪವಿತ್ರ ಖುರ್‌ಆನ್ ಆಗಿದೆ. ಅಂತೆಯೇ ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಕ್ರಮವೂ ಇಸ್ಲಾಂ ಧರ್ಮದ ಆಧಾರ ಸ್ತಂಭವಾಗಿದೆ; ಯಾಕೆಂದರೆ, ಪೈಗಂಬರರು ಪವಿತ್ರ ಖುರ್‌ಆನ್ ನಿರ್ದೇಶಿಸುವ ತತ್ವಗಳಿಗನುಸಾರವಾಗಿ, ಸಂಪೂರ್ಣ ಮುಸ್ಲಿಮನಾಗಿ, ಬದುಕಿ ತೋರಿಸಿದವರಾಗಿದ್ದಾರೆ. ಆದುದರಿಂದ ಇಸ್ಲಾಂ ಧರ್ಮದ ಎರಡು ಮೂಲಭೂತ ಆಧಾರಗಳಾಗಿರುವ ಒಂದನೇದಾಗಿ ಪವಿತ್ರ ಖುರ್‌ಆನ್ ಮತ್ತು ಎರಡನೇದಾಗಿ ಪೈಗಂಬರರ ಜೀವನಕ್ರಮ ಇವುಗಳಲ್ಲಿ ಹಿಂಸೆ–ಅಹಿಂಸೆಯ ಕುರಿತು ಏನು ಹೇಳಲಾಗಿದೆ ಎಂಬುದನ್ನು ನೋಡಬೇಕಾದುದು ಈ ವಿಷಯದಲ್ಲಿ ಅಧ್ಯಯನ ನಡೆಸುವವರ ಮತ್ತು ಅಭಿಪ್ರಾಯ ಹೇಳುವವರ ಕರ್ತವ್ಯವಾಗಿರುತ್ತದೆ. ಅಲ್ಲದೆ, ಯಾರಾದರೂ ವ್ಯಕ್ತಿಗಳು ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಒಂದು ಧರ್ಮದ ಬಗ್ಗೆ ಅಭಿಪ್ರಾಯ ಹೊಂದುವುದು ಯಾವತ್ತೂ ಸರಿಯಲ್ಲ. ಈ ಸಾಮಾನ್ಯ ತತ್ವವು ಎಲ್ಲಾ ಧರ್ಮಗಳಿಗೂ ಅನ್ವಯವಾಗುತ್ತದೆ.

ಹಿಂಸೆ–ಅಹಿಂಸೆಯ ಕುರಿತು ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ಪ್ರಬೋಧನೆಗಳಲ್ಲಿ ಯಾವ ರೀತಿ ವಿವರಿಸಲಾಗಿದೆ ಎಂಬುದನ್ನು ಚುಟುಕಾಗಿ ಈ ಲೇಖನದಲ್ಲಿ ನಾನು ಪ್ರತಿಪಾದಿಸಬಯಸುತ್ತೇನೆ. ಅದಕ್ಕೂ ಮೊದಲಾಗಿ ಒಂದು ಪ್ರಧಾನ ವಿಷಯವನ್ನು ಹೇಳಬೇಕಾಗಿದೆ. ಅದೇನೆಂದರೆ ಇಸ್ಲಾಂ ಧರ್ಮವು ಜಗತ್ತಿನ ಎಲ್ಲಾ ಮಾನವರಿಗೂ ಅನುಸರಿಸಲು ಸಾಧ್ಯವೂ ಯೋಗ್ಯವೂ ಆದ ನಿರ್ದೇಶಗಳನ್ನು ಮಾತ್ರ ನೀಡುತ್ತಿದೆ

ಎಂಬುದು. ಇದು ಇಸ್ಲಾಂ ಧರ್ಮದ ಒಂದು ವಿಶೇಷತೆ. ಮನುಷ್ಯರ ಎಲ್ಲಾ ಆವಶ್ಯಕತೆಗಳನ್ನೂ ಧಾರ್ಮಿಕ ಚೌಕಟ್ಟಿನೊಳಗೆ ಪೂರೈಸಿಕೊಳ್ಳಲು ಇಸ್ಲಾಂ ಅವಕಾಶವನ್ನು ಕಲ್ಪಿಸಿಕೊಡುತ್ತದೆ ಹಾಗೂ ಅವರಿಗೆ ಅನುಷ್ಠಿಸಲು ಸಾಧ್ಯವಿರುವಂತಹ ಕರ್ತವ್ಯಗಳನ್ನು ಮಾತ್ರವೇ ಅವರ ಮೇಲೆ ಇಸ್ಲಾಂ ಹೊರಿಸುತ್ತದೆ. ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಮಾನವರೆಲ್ಲರೂ ಸಮಾನರು. ಇಸ್ಲಾಂ ಧರ್ಮದ ತತ್ವ – ಉಪದೇಶ – ನಿರ್ದೇಶಗಳು ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂತಹದ್ದಾಗಿದೆ. ಮನುಷ್ಯರನ್ನು ಹಲವು ವಿಂಗಡಗಳಾಗಿ ಮಾಡಿ ಬೇರೆ ಬೇರೆ ವಿಭಾಗದವರಿಗೆ ಬೇರೆ ಬೇರೆ ರೀತಿಯ ಧಾರ್ಮಿಕ ವಿಧಿಗಳನ್ನು ನಿರ್ದೇಶಿಸುವ ತತ್ವ ಇಸ್ಲಾಂ ಧರ್ಮದಲ್ಲಿಲ್ಲ. ಆ ಕಾರಣದಿಂದಲೇ ಇಸ್ಲಾಂ ಧರ್ಮವು ಸೂಚಿಸುವ ಎಲ್ಲಾ ನಿರ್ದೇಶಗಳೂ ಜಗತ್ತಿನ ಯಾವ ಮೂಲೆಯಲ್ಲಿರುವ ಮನುಷ್ಯರಿಗೂ ಅನುಸರಿಸಲು ಸಾಧ್ಯವಾಗುವಂತಹ ಪ್ರಯೋಗಾತ್ಮಕ ವಿಧಿಗಳಾಗಿವೆ. ಆದುದರಿಂದಲೇ ಇಸ್ಲಾಂ ಧರ್ಮವು ಪ್ರಯೋಗಾತ್ಮಕ ಧರ್ಮವೆಂದೂ ಸಾರ್ವಲೌಕಿಕ ಧರ್ಮವೆಂದೂ ಸಂಪೂರ್ಣ ಧರ್ಮ ಸಂಹಿತೆಯೆಂದೂ ಮನುಷ್ಯ ಪ್ರಕೃತಿಯೊಂದಿಗೆ ಅನುಯೋಜ್ಯವಾಗುವಂತಹ ಧರ್ಮವಾಗಿದೆ ಎಂದೂ ಪವಿತ್ರ ಖುರ್‌ಆನ್ ಹೇಳಿರುವುದು. ಈಗ, ಹಿಂಸೆ ಅಹಿಂಸೆಯ ಬಗ್ಗೆ ಇಸ್ಲಾಂ ಏನು ಹೇಳುತ್ತಿದೆ ಎಂದು ನೋಡುವ.

ಪವಿತ್ರ ಖುರ್‌ಆನಿನ ಪ್ರಬೋಧನೆಗಳನ್ನು ಪರ್ಯಾಲೋಚಿಸಿದರೆ, ಹಾಗೂ ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಚರ್ಯೆಗಳನ್ನು ಅವಲೋಕಿಸಿದರೆ, ಇಸ್ಲಾಂ ಧರ್ಮದ ಬುನಾದಿಯೇ ಅಹಿಂಸೆ ಎಂಬುದು ಗೋಚರವಾಗುತ್ತದೆ. ಈ ಲೋಕದಿಂದ ಅನ್ಯಾಯ, ಅಕ್ರಮ, ಹಿಂಸೆ ಮೊದಲಾದ ದುಷ್ಕೃತ್ಯಗಳನ್ನು ಹೋಗಲಾಡಿಸಿ, ನ್ಯಾಯ, ಧರ್ಮ, ಅಹಿಂಸೆ ಇತ್ಯಾದಿ ಸದ್ಗುಣಗಳನ್ನು ಜನರಿಗೆ ಬೋಧಿಸುವುದೇ ಇಸ್ಲಾಂ ಧರ್ಮದ ಸ್ಥಾಪನೆಯ ಉದ್ದೇಶವೆಂದು ಪವಿತ್ರ ಖುರ್‌ಆನಿನಿಂದ ಮತ್ತು ಪೈಗಂಬರರ ನಡವಳಿಕೆಗಳಿಂದ ತಿಳಿದುಬರುತ್ತದೆ.

ಇಸ್ಲಾಂ ಧರ್ಮವು ಸಂಪೂರ್ಣವಾಗಿ ಆಧ್ಯಾತ್ಮಿಕ ಮೌಲ್ಯಗಳನ್ನು ಪುರಸ್ಕರಿಸುವ ಒಂದು ಧರ್ಮವಾಗಿದೆ. ಆಧ್ಯಾತ್ಮಿಕತೆಯಿಲ್ಲದೆ ಇಸ್ಲಾಂ ಧರ್ಮವೇ ಇಲ್ಲ. ಹಾಗಿರುವಾಗ ಈ ಅಖಿಲ ಬ್ರಹ್ಮಾಂಡದ ಸೃಷ್ಟಿಕರ್ತನೂ ಪಾಲಕನೂ ರಕ್ಷಕನೂ ಆಗಿರುವ ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆದ ದೇವರೆಂಬ ಆ ಪರಾಶಕ್ತಿಯಲ್ಲಿರುವ ನಂಬಿಕೆಯು ಇಸ್ಲಾಂ ಧರ್ಮದ ಕೇಂದ್ರ ಬಿಂದುವಾಗುತ್ತದೆ. ಪರಮಾತ್ಮನ ಇಚ್ಛೆಯಂತೆ ಈ ಲೋಕದಲ್ಲಿ ಜೀವಿಸಬೇಕಾದುದು ಹಾಗೂ ಪರಮಾತ್ಮನ ಪ್ರೀತಿಗೆ ಪಾತ್ರನಾಗಬೇಕಾದುದು ಇಸ್ಲಾಂ ಧರ್ಮದ ಪ್ರಕಾರ ಮನುಷ್ಯನ ಬದುಕಿನ ಉದ್ದೇಶವಾಗುತ್ತದೆ. ದೇವರ ಸಂತೃಪ್ತಿಯನ್ನು ಗಳಿಸುವುದೇ ಮನುಷ್ಯ ಜೀವನದ ಮುಖ್ಯ ಗುರಿ ಎಂಬುದಾಗಿ ಕಲಿಸುತ್ತಿರುವ ಪವಿತ್ರ ಖುರ್‌ಆನ್, ಅತ್ಯಂತ ಗಂಭೀರವಾಗಿ ಮನುಷ್ಯರನ್ನು ಈ ರೀತಿ ಎಚ್ಚರಿಸುತ್ತದೆ.

الا لعنت الله على الظالمين

ಅನ್ಯಾಯ, ಅಕ್ರಮ, ಹಿಂಸೆ ಮಾಡುವವನ ಮೇಲೆ
ಅಲ್ಲಾಹನ ಶಾಪ ಬೀಳುವುದು (11 : 19)

ಯಾರು ಹಿಂಸೆಯ ಮಾರ್ಗವನ್ನು ಹಿಡಿಯುವರೋ ಅವರ ಮೇಲೆ ಅಲ್ಲಾಹನ ಕ್ರೋಧವಿದೆ ಎಂದೂ ಅಂತಹವರನ್ನು ಅಲ್ಲಾಹನು ಪ್ರೀತಿಸಲಾರ ಎಂದೂ ಇದರ ಅರ್ಥವಾಗಿದೆ. ಇಸ್ಲಾಮಿನ ದೃಷ್ಟಿಕೋನದಲ್ಲಿ ಅಂತಹವರ ಬದುಕೇ ನಿಷ್ಫಲವಾಗುವುದು. ಹಿಂಸೆ ಎಂಬುದನ್ನು ಇಸ್ಲಾಂ ಧರ್ಮವು ಅಷ್ಟೊಂದು ತೀವ್ರವಾಗಿ ಪರಿಗಣಿಸುತ್ತದೆ.

ಪವಿತ್ರ ಖುರ್‌ಆನಿನ ಈ ವಚನಕ್ಕೆ ವಿವರಣೆ ನೀಡುವ ರೀತಿಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರು ಈ ರೀತಿ ಹೇಳಿದರು, ಅಥವಾ ಅವರು ಇಸ್ಲಾಂ ಧರ್ಮದ ಉದ್ದೇಶವನ್ನು ಸಾರುತ್ತಿದ್ದರು ಎನ್ನಬಹುದಾಗಿದೆ. ಅಥವಾ ಮುಸ್ಲಿಂ ಎಂದರೆ ಯಾರು ಎಂಬುದನ್ನು ಆ ದಿವ್ಯಾತ್ಮರು ವಿವರಿಸುತ್ತಿದ್ದರು. ಅವರು ಘೋಷಿಸಿದರು – "ಯಾರ ನಾಲಗೆ ಮತ್ತು ಇತರ ಅವಯವಗಳಿಗೆ ಇತರರು ಭಯಪಡಬೇಕಾಗಿಲ್ಲವೋ ಅವರೇ ನಿಜವಾದ ಮುಸ್ಲಿಂ." ಇದು ಅತ್ಯಂತ ಗಂಭೀರವಾದೊಂದು ಘೋಷಣೆಯೆಂದು ನನಗೆ ತೋರುತ್ತದೆ.

ಮುಸ್ಲಿಂ ಎಂದರೆ ಯಾರೆಂಬುದನ್ನು ಇಸ್ಲಾಂ ಧರ್ಮದ ಸ್ಥಾಪಕರು ವಿವರಿಸಿದ ರೀತಿಯಿದು. ನಾಲಗೆಯಿಂದಾಗಲಿ ಕೈಗಳಿಂದಾಗಲಿ ಇತರರನ್ನು ಹಿಂಸಿಸಬಾರದು. ಮಾನಸಿಕ ಹಿಂಸೆಯನ್ನು ನೀಡಬಾರದು; ಶಾರೀರಿಕ ಹಿಂಸೆಯನ್ನೂ ನೀಡಬಾರದು ಎಂಬುದು ಇದರ ಅರ್ಥವಾಗಿದೆ.

ಮತ್ತೊಂದು ಸಂದರ್ಭದಲ್ಲಿ ಮುಹಮ್ಮದ್ ಪೈಗಂಬರರು ಈ ರೀತಿ ಹೇಳಿದರು – "ನೀವು ನಿಜವಾಗಿಯೂ ದೇವರನ್ನು ಪ್ರೀತಿಸುವಿರಾದರೆ ಅವನ ಸೃಷ್ಟಿಜಾಲವನ್ನು ಮೊದಲು ಪ್ರೀತಿಸಿರಿ." ಇಸ್ಲಾಂ ಧರ್ಮದ ಮೂಲಭೂತ ಅಧ್ಯಾಪನೆಯೇ ದೇವರ ಸಂಪ್ರೀತಿ ಗಳಿಸುವುದೂ ದೇವರನ್ನು ಪ್ರೀತಿಸುವುದೂ ಆಗಿದೆ. ಹಾಗಿರುವಾಗ ಪೈಗಂಬರರು ಹೇಳುತ್ತಾರೆ – ದೇವರನ್ನು ನೀವು ನಿಜವಾಗಿಯೂ ಪ್ರೀತಿಸುತ್ತೀರಾ, ಹಾಗಾದರೆ ಮೊದಲು ನೀವು ದೇವರ ಸೃಷ್ಟಿಜಾಲವನ್ನು ಪ್ರೀತಿಸಿರಿ. ದೇವರ ಎಲ್ಲಾ ಸೃಷ್ಟಿಗಳೊಂದಿಗೆ ಅಹಿಂಸೆಯಿಂದಲೂ ಕರುಣೆಯಿಂದಲೂ ವರ್ತಿಸಿರಿ. ಯಾರಿಗೂ ಅನ್ಯಾಯ ಮಾಡಬೇಡಿರಿ. ಯಾವ ಜೀವಿಗೂ ಹಿಂಸೆ ನೀಡಬೇಡಿರಿ. ಎಲ್ಲಾ ಜೀವಿಗಳನ್ನೂ ಪ್ರೀತಿಸಿರಿ. ಆ ರೀತಿ ಮಾಡಿದರೆ ಮಾತ್ರವೇ ನೀವು ನಿಜವಾಗಿಯೂ ದೇವರನ್ನು ಪ್ರೀತಿಸುತ್ತೀರಿ. ದೇವರ ಸೃಷ್ಟಿಗಳನ್ನು ಮೊದಲು ಪ್ರೀತಿಸದೆ ದೇವರನ್ನು ಪ್ರೀತಿಸಲು ಸಾಧ್ಯವಿಲ್ಲ ಎಂದು ಪೈಗಂಬರರು ಈ ಮಾತಿನಲ್ಲಿ ನಮಗೆ ತಿಳಿಸಿಕೊಟ್ಟಿದ್ದಾರೆ.

## ಹಿಂಸೆಯಲ್ಲಿ ಎರಡು ವಿಧ ವಿಂಗಡನೆ

ಇಸ್ಲಾಂ ಧರ್ಮವು ಹಿಂಸೆಯನ್ನು ಮುಖ್ಯವಾಗಿ ಎರಡಾಗಿ ವಿಂಗಡನೆ ಮಾಡಿದೆ. ಒಂದು ಮನುಷ್ಯರಿಗೆ ನೀಡುವ ಹಿಂಸೆ. ಮತ್ತೊಂದು ಮನುಷ್ಯೇತರ ಜೀವಿಗಳಿಗೆ ನೀಡುವ ಹಿಂಸೆ. ಇದರಲ್ಲಿ ಮೊದಲನೆಯದು ಅಂದರೆ ಮನುಷ್ಯರು ಇತರ ಮನುಷ್ಯರಿಗೆ ನೀಡುವ ಹಿಂಸೆಯನ್ನು ಇಸ್ಲಾಂ ಧರ್ಮವು ಅತ್ಯಂತ ಘೋರ ಅಪರಾಧವಾಗಿ ಪರಿಗಣಿಸುತ್ತದೆ. ಮನುಷ್ಯೇತರ ಜೀವಿಗಳೊಡನೆ ಹಿಂಸಾಚಾರವೆಸಗುವುದು ಕೂಡಾ ಇಸ್ಲಾಮಿನ ದೃಷ್ಟಿಯಲ್ಲಿ ಅಧರ್ಮವೇ ಆಗಿದ್ದರೂ ಮನುಷ್ಯರಿಗೆ ನೀಡುವ ಹಿಂಸೆ, ಮನುಷ್ಯರೊಡನೆ ಅನ್ಯಾಯ ಅಕ್ರಮದಿಂದ ವರ್ತಿಸುವುದು, ಮನುಷ್ಯ ಜೀವಿಗಳಿಗೆ ಹಿಂಸೆ ನೀಡುವುದು ಮಹಾ ದೊಡ್ಡ ಅಧರ್ಮವಾಗಿದೆಯೆಂದು ಇಸ್ಲಾಂ ಧರ್ಮ ಕಲಿಸುತ್ತದೆ.

ಮನುಷ್ಯರು ತನ್ನ ಸಹವಾಸಿಗಳಾದ ಇತರ ಮನುಷ್ಯರಿಗೆ ನೀಡುವ ಈ ಹಿಂಸೆಯಲ್ಲಿ ಕೂಡಾ ಎರಡು ತರವಿದೆ. ಮಾನಸಿಕ ಹಿಂಸೆ ಮತ್ತು ಶಾರೀರಿಕ ಹಿಂಸೆ ಎಂಬುದು. ಈ ಎರಡು ರೀತಿಯ ಹಿಂಸೆಯನ್ನೂ ಇಸ್ಲಾಂ ಧರ್ಮವು ವಿರೋಧಿಸುತ್ತದೆ. ಅಂದರೆ, ಇಸ್ಲಾಂ ಧರ್ಮ ತತ್ವಗಳ ಪ್ರಕಾರ ಇತರ ಮನುಷ್ಯರನ್ನು ಮಾನಸಿಕವಾಗಿ ಹಿಂಸಿಸಬಾರದು; ಶಾರೀರಿಕವಾಗಿಯೂ ಹಿಂಸಿಸಬಾರದು. ಅನ್ಯಾಯ ಅಕ್ರಮ ಅತ್ಯಾಚಾರವೆಸಗಬಾರದು.

ಮನುಷ್ಯರನ್ನು ಹಿಂಸೆಗೆ ಗುರಿಪಡಿಸಬಾರದೆಂಬ ದೇವರ ಉದ್ದೇಶವನ್ನು ಕಾರ್ಯಗತಗೊಳಿಸಲು ಇಸ್ಲಾಂ ಧರ್ಮದಲ್ಲಿ ಹಲವಾರು ನಿರ್ದೇಶಗಳನ್ನು ನೀಡಲಾಗಿದೆ. ಮನುಷ್ಯರು ಮನುಷ್ಯರಿಗೆ ನೀಡುವ ಮಾನಸಿಕ ಹಿಂಸೆಯನ್ನು ನಿವಾರಿಸಲು ಮನುಷ್ಯ ಸಮಾನತೆಯನ್ನು ಇಸ್ಲಾಂ ಧರ್ಮವು ಅತ್ಯಂತ ಶಕ್ತಿಯುತವಾಗಿ ಸಾರುತ್ತದೆ. ಇದು ಇಸ್ಲಾಂ ಧರ್ಮದ ಅತಿ ಪ್ರಧಾನವಾದೊಂದು ಬೋಧನೆ. ಮನುಷ್ಯರಾಗಿ ಹುಟ್ಟಿದ ಎಲ್ಲಾ ಮಾನವರೂ ಮನುಷ್ಯರೆಂಬ ನೆಲೆಯಲ್ಲಿ ಸಮಾನರು ಎಂಬುದಾಗಿ ಇಸ್ಲಾಂ ಧರ್ಮವು ಮೂಲಭೂತವಾಗಿ ನಿರ್ದೇಶಿಸುತ್ತದೆ. ಹುಟ್ಟಿನಿಂದ ಅಥವಾ ಜಾತಿಯ ಆಧಾರದಿಂದ ಮನುಷ್ಯರನ್ನು ಮೇಲು ಕೀಳು ಎಂಬುದಾಗಿ ತಿಳಿಯುವುದನ್ನು ಇಸ್ಲಾಂ ಧರ್ಮವು ಕಠಿಣವಾಗಿ ವಿರೋಧಿಸುತ್ತದೆ. ಆ ರೀತಿ ಮನುಷ್ಯರಲ್ಲಿ ಮೇಲು ಕೀಳೆಂಬ ಭಾವನೆಯನ್ನುಂಟು ಮಾಡುವುದು, ಕೆಲವರನ್ನು ಕೀಳುಜಾತಿಯವರೆಂದು ಪರಿಗಣಿಸಿಕೊಂಡು ಪರಮಾತ್ಮನ ಸೃಷ್ಟಿಜಾಲಕ್ಕೆ ಸಾಮಾನ್ಯವಾಗಿ ಅನ್ವಯವಾಗುವಂತಹ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಕೂಡಾ ಅವರಿಗೆ ನಿರಾಕರಿಸುವುದು ಅವರನ್ನು ಮಾನಸಿಕವಾಗಿ ಹಿಂಸಿಸುವುದಕ್ಕೆ ಸಮವಾಗಿದೆ. ಈ ಸಂಬಂಧವಾಗಿ ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ:

يا يها الناس انا خلقنكم من ذكر و انثى
و جعلنكم شعوبا و قبآئل لتعارفو ان اكرمكم
عندالله اتقكم ان الله عليم خبير

ಎಲೈ ಮನುಷ್ಯರೇ, ನಾನು ನಿಮ್ಮನ್ನು ಸ್ತ್ರೀ ಪುರುಷ ಬೀಜಗಳ ಸಂಯೋಗದಿಂದ ಸೃಷ್ಟಿ ಮಾಡಿದ್ದೇನೆ. ನೀವು ಗೋತ್ರಗಳೂ ಪಂಗಡಗಳೂ ಆಗಿ ವಿಂಗಡನೆಯಾಗಿದ್ದರೆ ಅದು ನಿಮ್ಮನ್ನು ಪರಸ್ಪರ ಗುರುತಿಸುವ ಸಲುವಾಗಿ ಮಾತ್ರ ಇರಲಿ. (ಅಲ್ಲದೆ ಅದು ನಿಮ್ಮೊಳಗೆ ಅನ್ಯೋನ್ಯ ಮೇಲು ಕೀಳೆಂಬುದನ್ನು ಉಂಟು ಮಾಡಬಾರದು) ನಿಮ್ಮಲ್ಲಿ ಹೆಚ್ಚು ದೇವಭಕ್ತಿಯು ಯಾರಿಗಿದೆಯೋ ಅವರೇ ಉತ್ತಮರೆಂದು ಪರಿಗಣಿಸಲ್ಪಡುವರು. (ಅಲ್ಲದೆ ಹುಟ್ಟಿನ ಆಧಾರದಿಂದಲ್ಲ) ಅಲ್ಲಾಹನು ಎಲ್ಲವನ್ನೂ ಬಲ್ಲವನೂ ಎಲ್ಲವನ್ನೂ ತಿಳಿದುಕೊಂಡಿರುವವನೂ ಆಗಿದ್ದಾನೆ. (49 : 14)

ಮನುಷ್ಯ ಸಮಾನತೆಯನ್ನು ಎಷ್ಟು ಸೊಗಸಾಗಿ ಪವಿತ್ರ ಖುರ್‌ಆನ್ ಇಲ್ಲಿ ಚಿತ್ರಿಸಿದೆ! ಎಲ್ಲಾ ಮನುಷ್ಯರ ಸೃಷ್ಟಿಯೂ ಒಂದೇ ರೀತಿಯಲ್ಲಿ ಉಂಟಾಗಿದೆ. ಸ್ತ್ರೀ ಪುರುಷರ ಅಂಡ ಮತ್ತು ಬೀಜಗಳ ಸಂಯೋಜನೆಯಿಂದ ಮನುಷ್ಯರ ಉತ್ಪತ್ತಿ ಉಂಟಾಗುತ್ತದೆ. ಈ ರೀತಿ ಸೃಷ್ಟಿಸಲ್ಪಟ್ಟ ಎಲ್ಲಾ ಮನುಷ್ಯರೂ ಸಮಾನರು. ಅವರೊಳಗೆ ಭೇದಭಾವನೆ ಸಲ್ಲದು ಎಂದು ಖುರ್‌ಆನ್ ಹೇಳುತ್ತದೆ. ಆದರೆ, ಕೆಲವರಿಗೆ ಮಹತ್ವವಿದೆ. ಅದು ದೇವಭಕ್ತಿಯ ಮಾನದಂಡದಿಂದ ಅಳತೆ ಮಾಡಿ ನಿರ್ಣಯಿಸುವಂಥದ್ದು ಮಾತ್ರ. ಯಾರು ಹೆಚ್ಚು ದೇವಭಕ್ತರೋ ಯಾರಿಗೆ ಹೆಚ್ಚು ಧಾರ್ಮಿಕತೆಯಿದೆಯೋ ಅವನೇ ಉತ್ತಮನು. ಯಾರು ಅಧರ್ಮಿಯೋ ಅವನೇ ನೀಚನು; ಆದುದರಿಂದ ಉಚ್ಚ ನೀಚತ್ವವನ್ನು ಧಾರ್ಮಿಕತೆಯ ಆಧಾರದಿಂದ ನಿರ್ಣಯಿಸಬೇಕೇ ಹೊರತು ಅದನ್ನು ಹುಟ್ಟಿನ ಆಧಾರದಲ್ಲಿ ನಿರ್ಣಯಿಸಬಾರದೆಂದು ಇಸ್ಲಾಂ ಧರ್ಮದ ಧರ್ಮಗ್ರಂಥವಾದ ಪವಿತ್ರ ಖುರ್‌ಆನ್ ಕಲಿಸಿಕೊಡುತ್ತದೆ.

ಇಸ್ಲಾಂ ಧರ್ಮದಲ್ಲಿ ಈ ತತ್ವವನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲನೆಗೂ ತರಲಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ ಕಾಲದಿಂದಲೇ ಈ ತತ್ವದ ಅನುಷ್ಠಾನ ಪ್ರಾರಂಭವಾಗಿದೆ. ಆ ಪ್ರವಾದಿಯವರ ಕಾಲದಲ್ಲಿ ಅರೇಬಿಯಾದ ಜನರು ಕುಲಗೋತ್ರಗಳ ಹಿರಿಮೆಗೆ ಬಹಳವಾಗಿ ಅಂಟಿಕೊಂಡಿರುತ್ತಿದ್ದರು. ಜನನದ ಆಧಾರದಲ್ಲಿ ಕೆಲವರನ್ನು ಉತ್ತಮರೆಂದೂ ಮತ್ತೆ ಕೆಲವರನ್ನು ನೀಚರೆಂದೂ ಪರಿಗಣಿಸಲಾಗುತ್ತಿತ್ತು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರು ಆ ಕಿರಾತ ಸಮುದಾಯದ ಮಧ್ಯೆ ಇಸ್ಲಾಂ ಧರ್ಮದ ಸಂದೇಶವನ್ನು ಸಾರುತ್ತಾ, ಎಲೈ ಮನುಷ್ಯರೇ ಮಾನವರೆಂಬ ದೃಷ್ಟಿಯಲ್ಲಿ ನೀವೆಲ್ಲರೂ ಸಮಾನರಾಗಿದ್ದೀರಿ ಎಂದು ಹೇಳಿದರು. ಹುಜ್ಜತುಲ್ ವಿದಾ ಎಂಬ ಐತಿಹಾಸಿಕವಾದ ಭಾಷಣದಲ್ಲಿ ಪ್ರವಾದಿ ಮುಹಮ್ಮದರು ಈ ರೀತಿ ಸಾರುತ್ತಾರೆ – "ಯಾವ ಅರೇಬಿಯನಿಗೂ ಅರೇಬಿಯನಲ್ಲದವನ ಮೇಲೆ ಯಾವ ರೀತಿಯ ಮೇಲ್ಮೆಯೂ ಇರುವುದಿಲ್ಲ. ಅದೇ ರೀತಿ ಅರೇಬಿಯೇತರನಿಗೆ ಅರೇಬಿಯನಿಗಿಂತ ಶ್ರೇಷ್ಠತೆಯೂ ಇಲ್ಲ. ಬಿಳಿಯನಿಗೆ ಕರಿಯನಿಗಿಂತ ಅಥವಾ ಕರಿಯನಿಗೆ ಬಿಳಿಯನಿಗಿಂತ ಯಾವುದೇ ವಿಶೇಷತೆಯಿಲ್ಲ. ಮನುಷ್ಯರೆಲ್ಲರೂ ಸಮಾನರೇ ಆಗಿರುವರು. ಅನ್ಯಾಯವಾಗಿ ಮನುಷ್ಯರ ರಕ್ತ ಹರಿಸುವುದನ್ನು ನಾನಿದೋ ನಿಮಗೆ ನಿಷಿದ್ಧಗೊಳಿಸುತ್ತೇನೆ". ಹೀಗೆ ಹೇಳುತ್ತಾ ಹಝ್ರತ್ ಪೈಗಂಬರರು ತನ್ನ ಬಲಗೈಯನ್ನೆತ್ತಿ ಅದರ ಎರಡು ಬೆರಳುಗಳನ್ನು ತೋರಿಸಿ – "ಈ ಎರಡು ಬೆರಳುಗಳು ಯಾವ ರೀತಿ ಅನ್ಯೋನ್ಯವಾಗಿವೆಯೋ ಅದೇ ರೀತಿ ಮನುಷ್ಯರಾಗಿರುವ ನೀವೆಲ್ಲರೂ ಪರಸ್ಪರ ಅನ್ಯೋನ್ಯರೂ ಸಹೋದರರೂ ಸಮಾನರೂ ಆಗಿರುತ್ತೀರಿ" ಎಂದು ಘೋಷಿಸಿದರು. ಈ ರೀತಿ ಮನುಷ್ಯ ಸಮಾನತೆಯನ್ನು ಪುರಸ್ಕರಿಸುವುದರ ಮೂಲಕ ಮನುಷ್ಯರಿಂದ ಮನುಷ್ಯರಿಗೆ ಉಂಟಾಗುವ ಮಾನಸಿಕ ಹಿಂಸೆಯೂ ಕೆಲವೊಮ್ಮೆ ಸಂಭವಿಸಬಹುದಾದ ಶಾರೀರಿಕ ಹಿಂಸೆಯೂ ಕೂಡಾ ನಿರ್ಮೂಲನವಾಗುವುದು. ಮೇಲು ಕೀಳೆಂಬ ಭಾವನೆಯನ್ನು ಹೊಂದಿ ತನ್ನಂತೆಯೇ ಇರುವ ಇತರ ಮನುಷ್ಯರಿಗೆ ಮಾನಸಿಕ ಹಿಂಸೆಯನ್ನು ನೀಡುವುದು ಇಸ್ಲಾಂ ಧರ್ಮತತ್ವಗಳ ಪ್ರಕಾರ ನಿಷಿದ್ಧವಾಗಿದೆ. ಮಾನವ ಸಮಾನತೆಯನ್ನು ಸಾರುತ್ತಾ ಇಸ್ಲಾಂ ಧರ್ಮವು ಅಹಿಂಸೆಯನ್ನು ಎತ್ತಿಹಿಡಿದಿದೆ.

ದೇವರ ಸಂಪ್ರೀತಿಯನ್ನು ಬಯಸುವವರು ಹಿಂಸೆಯನ್ನು ಕೈಬಿಡಬೇಕೆಂದೂ ನ್ಯಾಯ, ಧರ್ಮ, ಅಹಿಂಸೆ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದೂ ಇಸ್ಲಾಂ ಧರ್ಮದ ಪವಿತ್ರ ಖುರ್‌ಆನಿನಲ್ಲಿ

ಧಾರಾಳ ಸ್ಥಳಗಳಲ್ಲಿ ವಿವರಿಸಲಾಗಿದೆ. ಹಾಗೆಯೇ ಹಝ್ರತ್ ಮುಹಮ್ಮದ್ ಪೈಗಂಬರರೂ ಕೂಡಾ ಹಿಂಸಾಚಾರದಿಂದ ದೂರವಿರಬೇಕೆಂಬುದಾಗಿ ಶಕ್ತಿಯುತವಾಗಿ ಬೋಧಿಸಿದ್ದಾರೆ. ಈ ಕುರಿತು ಖುರ್‌ಆನಿನಿಂದ ಹಾಗೂ ಪೈಗಂಬರರ ಮಾತುಗಳಿಂದ ಧಾರಾಳ ವಚನಗಳನ್ನು ಉಲ್ಲೇಖಿಸಬಹುದು. ಆದರೆ, ಸ್ಥಳಾಭಾವದ ಭಯದಿಂದ ಅವುಗಳಲ್ಲಿ ಕೆಲವನ್ನು ಮಾತ್ರ ನಾನಿಲ್ಲಿ ಉಲ್ಲೇಖಿಸಬಯಸುತ್ತೇನೆ. ಹಿಂಸಾಚಾರದ ಕಠೋರತೆಯನ್ನು ವಿವರಿಸುತ್ತಾ ಪವಿತ್ರ ಖುರ್‌ಆನ್ ಹೇಳುತ್ತದೆ:

ولا تحسبن الله غافلاً عما يعمل الظلمون

ಅಕ್ರಮಿಗಳ ಹಿಂಸಾಕೃತ್ಯಗಳ ಬಗ್ಗೆ ಅಲ್ಲಾಹನಿಗೆ ನಿಗಾ ಇಲ್ಲವೆಂದು ನೀವು ತಿಳಿಯಬೇಡಿರಿ. ಖಂಡಿತವಾಗಿಯೂ ಅವರ ಹಿಂಸಾತ್ಮಕ ಪಾಪಕೃತ್ಯಗಳನ್ನು ಅಲ್ಲಾಹನು ಗಮನಿಸುತ್ತಿದ್ದಾನೆ. (14:43)

ಮತ್ತೊಂದೆಡೆ ಪವಿತ್ರ ಖುರ್‌ಆನ್ ಹಿಂಸಾಚಾರಿಗಳಿಗೆ ನೀಡಲಾಗುವ ಶಿಕ್ಷೆಯ ಕುರಿತು ಈ ರೀತಿ ಹೇಳುತ್ತದೆ:

افمن يتقي بوجهه سوء العذاب يوم القيمة
وقيل للظلمين ذوقو ما كنتم تكسبون

ಅಕ್ರಮಿಗಳಿಗೂ ಹಿಂಸಾಚಾರಿಗಳಿಗೂ ನರಕದಲ್ಲಿ ನೀಡಲಾಗುವ ಶಿಕ್ಷೆಯ ಕುರಿತು ಏನು ಹೇಳಲಿ! ಭಯಂಕರ ಶಿಕ್ಷೆಗೆ ಅವರನ್ನು ಗುರಿಪಡಿಸಿ 'ನೀವು ಮಾಡಿದ ಹಿಂಸಾಚಾರದ ಫಲವನ್ನು ಈಗ ಅನುಭವಿಸಿರಿ' ಎಂದು ಅವರೊಡನೆ ಹೇಳಲಾಗುವುದು (39 : 25)

ಹಿಂಸಾಚಾರವು ಎಷ್ಟು ದೊಡ್ಡ ಘೋರ ಅಪರಾಧವಾಗಿದೆ ಎಂಬುದನ್ನು ಒಂದು ಉದಾಹರಣೆಯ ರೂಪದಲ್ಲಿ ಪವಿತ್ರ ಖುರ್‌ಆನ್ ಈ ರೀತಿ ವಿವರಿಸುತ್ತದೆ:

ولو ان للذين ظلموا ما في الارض جميعا
و مثله معه لافتدوا به من سوء العذاب
يوم القيامة وبدا لهم من الله مالم يكونو
يحتسبون

ಅಕ್ರಮಿಗಳೂ ಹಿಂಸಾಚಾರಿಗಳೂ ಆದ ಜನರ ಬಳಿಯಲ್ಲಿ ಈ ಭೂಮಿಯ ಮೇಲಿರುವ ಸಕಲ ಸ್ವತ್ತು ಸಂಪತ್ತು ಅವರದೇ ಆಗಿ ಇರುತ್ತಿದ್ದರೂ ಎಂದೇಕೆ ಮತ್ತೂ ಅದರಷ್ಟೇ ಸಂಪತ್ತನ್ನು ಅವರು ಹೊಂದಿದ್ದು ಅವೆಲ್ಲವನ್ನೂ ತಮ್ಮ ಹಿಂಸಾತ್ಮಕ ಪಾಪ ಕೃತ್ಯಗಳ ಪ್ರಾಯಶ್ಚಿತ್ತವಾಗಿ ಅರ್ಪಿಸಲು ಅವರು ತಯಾರಾದರೂ ಕೂಡಾ ಅವರ ಪಾಪಕೃತ್ಯಕ್ಕೆ ಅದು ಸಾಟಿಯಾಗಲಾರದು. ಅವರ ಕಲ್ಪನೆಗೂ ಮೀರಿದ ಭಯಂಕರ ಶಿಕ್ಷೆಯನ್ನು ಅವರು ಅನುಭವಿಸಬೇಕಾಗುವುದು. (39 : 48)

ಹಝ್ರತ್ ಮುಹಮ್ಮದ್ ಪೈಗಂಬರರು ಜನರನ್ನು ಎಚ್ಚರಿಸುತ್ತಾ ಅತ್ಯಂತ ಗಂಭೀರವಾಗಿ ಈ ರೀತಿ ಹೇಳಿದರು:

اتق دعوة المظلوم فانها ليس بينها و بين الله
حجاب

ಹಿಂಸೆಗೆ ಗುರಿಯಾದವನ ಮನಸ್ತಾಪದ ಕುರಿತು ಎಚ್ಚರವಾಗಿರಿ. ಯಾಕೆಂದರೆ ಹಿಂಸಿಸಲ್ಪಟ್ಟವನ ಪ್ರಾರ್ಥನೆಗೂ ಅಲ್ಲಾಹನಿಗೂ ಮಧ್ಯೆ ಯಾವುದೇ ತಡೆ ಇರುವುದಿಲ್ಲ. (ಬುಖಾರಿ)

ಈ ರೀತಿ ಇಸ್ಲಾಂ ಧರ್ಮವು ಹಿಂಸೆಯನ್ನು ಅತ್ಯಂತ ಜಿಗುಪ್ಸೆಯಿಂದ ಕಾಣುತ್ತದೆ. ಹಿಂಸೆಯನ್ನು ತ್ಯಜಿಸಬೇಕೆಂದೂ ಅಹಿಂಸೆಯನ್ನು ಕಡ್ಡಾಯವಾಗಿಯೂ ಪಾಲಿಸಬೇಕೆಂದೂ ಇಸ್ಲಾಂ ಧರ್ಮವು ಕಲಿಸುತ್ತದೆ.

## ಪ್ರಾಣಿ ಹಿಂಸೆ

ಹಿಂಸೆಯಲ್ಲಿರುವ ಮತ್ತೊಂದು ವಿಧವು ಪ್ರಾಣಿ ಹಿಂಸೆಯಾಗಿದೆ. ಅಂದರೆ ಮನುಷ್ಯೇತರ ಜೀವಿಗಳಿಗೆ ನೀಡುವ ಹಿಂಸೆ. ಇದನ್ನು ಕೂಡಾ ಇಸ್ಲಾಂ ಧರ್ಮವು ಕಠಿಣವಾಗಿ ವಿರೋಧಿಸುತ್ತದೆ. ಇಸ್ಲಾಂ ಧರ್ಮದಲ್ಲಿ ಪ್ರಾಣಿಹಿಂಸೆಯನ್ನು ವಿರೋಧಿಸಲಾಗಿದೆ ಎಂದು

ಕೇಳುವಾಗ ಕೆಲವರಿಗೆ ಆಶ್ಚರ್ಯವಾಗಬಹುದು. ಮುಸ್ಲಿಮರು ಮಾಂಸಾಹಾರಿಗಳಾಗಿದ್ದಾರೆ. ಅಂದರೆ, ಸಂದರ್ಭೋಚಿತವಾಗಿ ಆಹಾರ ವಸ್ತುಗಳ ಜತೆ ಕೆಲವು ಪ್ರಾಣಿಗಳ ಮಾಂಸವನ್ನು ಸೇವಿಸುವುದು ಮುಸಲ್ಮಾನರಿಗೆ ಅನುಮತಿಸಲ್ಪಟ್ಟಿದೆ. ಆದ್ದರಿಂದ ಇಸ್ಲಾಂ ಧರ್ಮದಲ್ಲಿ ಪ್ರಾಣಿಹಿಂಸೆ ಇದೆ ಎಂದು ಕೆಲವರು ಊಹಿಸಬಹುದು. ಇಲ್ಲಿ ನಾವು ಮುಖ್ಯವಾಗಿ ವಿಚಾರ ಮಾಡಬೇಕಾದ ಅಂಶವೇದರೆ, ಪ್ರಾಣಿಹಿಂಸೆ ಎಂದರೆ ನಿಜವಾಗಿಯೂ ಇದರ ಅರ್ಥವೇನು ಎಂದು. ಪ್ರಾಣಿಹಿಂಸೆಯ ವ್ಯಾಖ್ಯೆ ಏನು? ಇಸ್ಲಾಂ ಧರ್ಮ ತತ್ವಗಳ ಪ್ರಕಾರ ಈ ಲೋಕದಲ್ಲಿರುವ ಎಲ್ಲಾ ವಸ್ತುಗಳನ್ನೂ ಮನುಷ್ಯರ ಆವಶ್ಯಕತೆಗೂ ಅವರ ಉಪಯೋಗಕ್ಕಾಗಿಯೂ ಪರಮಾತ್ಮನು ಸೃಷ್ಟಿಮಾಡಿದ್ದಾನೆ. ಮನುಷ್ಯ ಸೃಷ್ಟಿಯು ಎಲ್ಲಾ ಸೃಷ್ಟಿಗಳ ಮೂಲವೆಂದೂ ಮನುಷ್ಯನು ಪರಮಾತ್ಮನ ಸೃಷ್ಟಿಗಳ ಪೈಕಿ ಉತ್ಕೃಷ್ಟವಾದ ಸೃಷ್ಟಿಯೆಂದೂ ಇಸ್ಲಾಂ ಧರ್ಮ ಹೇಳುತ್ತದೆ. ಹಾಗಿರುವಾಗ ಮನುಷ್ಯನ ಪ್ರಯೋಜನಕ್ಕಾಗಿಯೂ ಮನುಷ್ಯನ ಉಪಯೋಗಕ್ಕಾಗಿಯೂ ಒಂದು ಪ್ರಾಣಿಯನ್ನು ಬಲಿ ಮಾಡುವುದು ಪ್ರಾಣಿಹಿಂಸೆಯಾಗಲಾರದು ಎಂದು ಇಸ್ಲಾಂ ಧರ್ಮ ಹೇಳುತ್ತದೆ. ಉತ್ತಮವಾದ ಒಂದು ವಸ್ತುವಿನ ಸಂರಕ್ಷಣೆಗಾಗಿ ಅದಕ್ಕಿಂತ ಕೆಳತರದ ಮತ್ತೊಂದು ವಸ್ತುವನ್ನು ಬಲಿಕೊಡಬಹುದು ಎಂಬುದು ಒಂದು ಸಾಮಾನ್ಯ ತತ್ವವಷ್ಟೆ. ಆದುದರಿಂದ ಮನುಷ್ಯನು ಯಾವ ರೀತಿಯಲ್ಲಿ ಇತರ ಪ್ರಾಣಿಗಳಿಂದ ದುಡಿಮೆಯನ್ನು ಸ್ವೀಕರಿಸಬಹುದೋ, ಅಂದರೆ ಯಾವ ರೀತಿ ನಮ್ಮ ಉಪಯೋಗಕ್ಕಾಗಿ ಪ್ರಾಣಿಗಳನ್ನು ಹಲವಾರು ರೀತಿಯ ಕೆಲಸಗಳಲ್ಲಿ ನಾವು ತೊಡಗಿಸುತ್ತೇವೋ ಅದೇ ರೀತಿ ಮನುಷ್ಯರ ಆಹಾರದ ಆವಶ್ಯಕತೆಗಾಗಿ ಕೂಡಾ ಮೃಗಗಳನ್ನು ಬಲಿಮಾಡಬಹುದೆಂದು ಇಸ್ಲಾಂ ಧರ್ಮ ಹೇಳುತ್ತದೆ. ಅದಕ್ಕೆ ವಿರುದ್ಧವಾಗಿ, ಪ್ರಾಣಿಗಳ ಕಾರಣದಿಂದ ಮನುಷ್ಯರನ್ನು ಹಿಂಸಿಸುವುದನ್ನು ಇಸ್ಲಾಂ ಧರ್ಮವು ಒಪ್ಪುವುದಿಲ್ಲ.

ಇದು ಇಸ್ಲಾಂ ಧರ್ಮದ ಮಾತ್ರ ನಿಯಮವಲ್ಲ. ಸಾಮಾನ್ಯವಾಗಿ ನಾನು ಅಧ್ಯಯನ ಮಾಡಿದ ಎಲ್ಲಾ ಧರ್ಮಗಳಲ್ಲೂ ಈ ತತ್ವದ ಉಲ್ಲೇಖವಿರುವುದನ್ನು ಕಂಡಿದ್ದೇನೆ. ಮಾನವನ ಒಳಿತಿಗಾಗಿ ಇತರ ಮೃಗಗಳನ್ನು ಬಲಿಯರ್ಪಿಸುವಂತಹ ಸಿದ್ಧಾಂತವು ಎಲ್ಲಾ ಧರ್ಮಗಳಲ್ಲೂ ಸಮ್ಮತಿಸಲಾಗಿದೆ. ಉದಾಹರಣೆಗೆ, ಹಿಂದೂ ಧರ್ಮದಲ್ಲಿ ಕೂಡಾ ಮಾನವ ಕುಲದ ಏಳಿಗೆಗಾಗಿ ನಡೆಸುವಂತಹ ಯಜ್ಞ ಯಾಗಾದಿ ಪುಣ್ಯಕಾರ್ಯಗಳಿಗೆ ಮೃಗಗಳನ್ನು ಬಲಿಕೊಡಲಾಗುತ್ತಿತ್ತು. ಪುರಾತನ ಹಿಂದೂ ಸಂಪ್ರದಾಯದಲ್ಲಿ ಮೃಗಗಳ ಮಾಂಸವನ್ನು ಆಹಾರ ವಸ್ತುವಾಗಿ ಉಪಯೋಗಿಸುತ್ತಿದ್ದ ಉದಾಹರಣೆಗಳು ಹಿಂದೂ ಧರ್ಮಗ್ರಂಥಗಳಲ್ಲಿ ಧಾರಾಳ ಇವೆ. ಇದಾವುದೂ ಸಹ ಪ್ರಾಣಿಹಿಂಸೆ ಎಂದು ಯಾರೂ ತಿಳಿಯಬಾರದು. ಮನುಷ್ಯ ವಂಶದ ಒಳಿತಿಗಾಗಿಯೂ ಮನುಷ್ಯರ ಉಪಯೋಗಕ್ಕಾಗಿಯೂ ಇತರ ಮೃಗಗಳನ್ನು ಈ ರೀತಿ ಉಪಯೋಗಿಸಲಾಗುತ್ತಿತ್ತು ಎಂದು ಮಾತ್ರ ಇದರ ಅರ್ಥ.

ಪ್ರಾಣಿಗಳಿಗೆ ಜೀವವಿದೆ ಎಂಬ ಕಾರಣಕ್ಕಾಗಿ ಅದನ್ನು ಕೊಂದು ಆಹಾರವಾಗಿ ಸೇವಿಸಬಾರದು ಎಂದು ಹೇಳುವುದಿದ್ದರೆ,* ಸಸ್ಯಾಹಾರವೂ ಕೂಡಾ ನಿಷಿದ್ಧವಾಗಿಬಿಡುತ್ತದೆ. ಯಾಕೆಂದರೆ ಸಸ್ಯಗಳಿಗೂ ಸಹ ಜೀವವಿದೆಯಷ್ಟೆ. ಆದುದರಿಂದ ಜೀವವಿರುವ ಸಸ್ಯಗಳನ್ನು ನಾವು ಹೇಗೆ ಆಹಾರ ವಸ್ತುವಾಗಿ ಉಪಯೋಗಿಸಬಹುದೋ ಅದೇ ರೀತಿ ಪ್ರಾಣಿಗಳನ್ನು ಕೂಡಾ ಆಹಾರಕ್ಕಾಗಿ ಉಪಯೋಗಿಸುವುದರಲ್ಲಿ ಪಾಪವಿಲ್ಲವೆಂದು ಇಸ್ಲಾಂ ಧರ್ಮ ಹೇಳುತ್ತದೆ. ಇದು ಧರ್ಮಸಮ್ಮತವಾದ ಒಂದು ಕಾರ್ಯವಾಗಿದೆ. ಅಹಿಂಸೆಯ ಅತಿದೊಡ್ಡ ಆಚಾರ್ಯರೆಂದು ತಿಳಿಯಲಾಗುವ ಮಹಾತ್ಮರಾದ ವರ್ಧಮಾನ ಮಹಾವೀರರೂ ಕೂಡಾ ಈ ತತ್ವವನ್ನು ಒಪ್ಪಿರುತ್ತಾರೆ. ಅವರ ಕೆಲವು ವಚನಗಳನ್ನು ನಾನು "ಸಂಬೋಧಿ"ಯಿಂದ ಈ ಕೆಳಗೆ ಉದ್ಧರಿಸುತ್ತೇನೆ. ಮಹಾತ್ಮಾ ಮಹಾವೀರರು ಹೇಳುತ್ತಾರೆ:

> ಅರ್ಥಜಾನರ್ಥಜಾ ಚೇತಿ, ಹಿಂಸಾ ಪ್ರೋಕ್ತಾ
> ಮಯಾ ದ್ವಿಧಾ।
> ಅನರ್ಥಜಾಂ ತ್ಯಜನ್ನೇಷ, ಪ್ರವೃತ್ತಿ ಲಭತೇ ಸತಿಂ॥

ಹಿಂಸೆಯನ್ನು ನಾನು ಎರಡು ವಿಧವಾಗಿ ವಿಂಗಡಿಸುತ್ತೇನೆ. ಒಂದನೆಯದು ಅರ್ಥಜ ಹಿಂಸೆ. (ಅಂದರೆ,

---

* ಜೈನ ಧರ್ಮೀಯರು ಸಾಮಾನ್ಯವಾಗಿ ಈ ರೀತಿ ಹೇಳುವುದಿದೆ.

ಯಾವುದಾದರೂ ಉದ್ದೇಶವನ್ನು ಮುಂದಿಟ್ಟು ಕೊಂಡು ಒಂದು ಉಪಯೋಗಕ್ಕಾಗಿ ಮಾಡುವ ಹಿಂಸೆ.) ಮತ್ತೊಂದು ಅನರ್ಥಜ ಹಿಂಸೆ. (ಅಂದರೆ, ಯಾವುದೇ ಉದ್ದೇಶವಿಲ್ಲದೆ ವಿನಾಕಾರಣ ಹಿಂಸೆ ಮಾಡುವುದು.) ಒಬ್ಬ ಗೃಹಸ್ಥನು ಅಂದರೆ ಕುಟುಂಬ ಜೀವಿಯಾದ ಮನುಷ್ಯನೊಬ್ಬ ಈ ಎರಡನೆಯ ತರದ ಅನರ್ಥಜ ಹಿಂಸೆಯಿಂದ ಅಂದರೆ ವಿನಾಕಾರಣ ಮಾಡುವ ಹಿಂಸೆಯಿಂದ ದೂರವಿರಬೇಕು. ಆ ರೀತಿ ಅನ್ಯಾಯವಾಗಿ ಹಿಂಸೆ ಮಾಡುವ ಅನರ್ಥಜ ಹಿಂಸೆಯಿಂದ ವಿಮುಖನಾದರೆ ಅವನ ಕೃತ್ಯಗಳು ಪುಣ್ಯಕರ್ಮವಾಗಿ ಪರಿಗಣಿಸಲ್ಪಡುವುದು.

ಇಲ್ಲಿ ಗೃಹಸ್ಥಾಶ್ರಮದ ಮನುಷ್ಯರು ಅನರ್ಥಜ ಹಿಂಸೆಯನ್ನು ಮಾತ್ರ ತ್ಯಜಿಸಬೇಕೆಂದೂ ಯಾವುದಾದರೂ ಉದ್ದೇಶಕ್ಕಾಗಿ ಅಥವಾ ಆವಶ್ಯಕತೆಗಾಗಿ ನಡೆಸುವ ಹಿಂಸೆಯು ಪಾಪಕೃತ್ಯವಲ್ಲವೆಂದೂ ಶ್ರೀ ಮಹಾವೀರರು ಸ್ಪಷ್ಟವಾಗಿ ಹೇಳಿರುತ್ತಾರೆ. ಮತ್ತೂ ಆ ಮಹಾನುಭಾವರು ಹೇಳುವುದನ್ನು ನೋಡಿರಿ:

> ಆತ್ಮನೇ ಜ್ಞಾತಯೇ ತದ್ವದ್, ರಾಜ್ಞ್ಯಾಯ ಸುಹೃದೇ ತಥಾ।
> ಯಾ ಹಿಂಸಾ ಕ್ರಿಯತೇ ಲೋಕೈರರ್ಥಜಾ ಸಾ ಕಿಲೋಚ್ಯತೇ॥

ಒಬ್ಬನ ಸ್ವಂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲಿಕ್ಕಾಗಿ ಮಾಡುವ ಹಿಂಸೆ ಮತ್ತು ತನ್ನ ಕುಟುಂಬದ, ಸ್ನೇಹಿತರ, ಮತ್ತು ರಾಜ್ಯದ ಒಳಿತಿಗಾಗಿ ಮಾಡುವ ಹಿಂಸೆಯೂ ಅರ್ಥಜ ಹಿಂಸೆಯಾಗಿ ಪರಿಗಣಿಸಲಾಗುವುದು.

ಆದುದರಿಂದ ಅದನ್ನು ಸಂಪೂರ್ಣ ತ್ಯಜಿಸಬೇಕಾಗಿಲ್ಲವೆಂದು ಇದರ ಅರ್ಥ. ಇದು ಪಾಪಕೃತ್ಯವಲ್ಲ. ಮತ್ತೂ ಆ ಮಹಾತ್ಮರು ಈ ರೀತಿ ಹೇಳುತ್ತಾರೆ:

> ಪರಸ್ಪರೋಗ್ರಹೋ ಹಿ ಸಮಾಜಾಲಂಭನಂ ಭವೇತ್।
> ತದರ್ಥ ಕ್ರಿಯತೇ ಹಿಂಸಾ, ಕಥ್ಯತೇ ಸಾಪಿ ಚಾರ್ಥಜಾ॥

ಸಮಾಜವು ಅದರ ಸದಸ್ಯರ ಪರಸ್ಪರ ಸಹಕಾರದಿಂದ ರೂಪುಗೊಂಡಿದೆ. ಆದ ಕಾರಣ ಸಮಾಜದ ಏಳಿಗೆಯನ್ನು ಮುಂದಿರಿಸಿಕೊಂಡು ಮಾಡುವ ಹಿಂಸೆಯೂ ಅರ್ಥಜ ಹಿಂಸೆಯೆಂದು ಪರಿಗಣಿಸಲ್ಪಡುವುದು.

ಶ್ರೀ ವರ್ಧಮಾನ ಮಹಾವೀರರ ವಚನಗಳಿವು. ಮನುಷ್ಯನು ತನ್ನ ಸ್ವಂತ ಉಪಯೋಗಕ್ಕಾಗಲೀ ತನ್ನ ಕುಟುಂಬದ, ಯಾ ತನ್ನ ಸ್ನೇಹಿತನ, ಸಮಾಜದ, ರಾಷ್ಟ್ರದ ಒಳಿತಿಗಾಗಿಯೂ ಉಪಯೋಗಕ್ಕಾಗಿಯೂ ಮಾಡುವ ಹಿಂಸೆಯು ಅರ್ಥಜ ಹಿಂಸೆಯೆಂದು ಪರಿಗಣಿಸಲ್ಪಡುವುದೆಂದೂ ಇವನ್ನು ಪಾಪಕೃತ್ಯಗಳೆಂದು ಹೇಳಲಾಗದೆಂದೂ ಆ ಮಹಾತ್ಮರು ಮೇಲಿನ ವಚನಗಳಲ್ಲಿ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ.

ಇದೇ ತತ್ವವನ್ನೇ ಇಸ್ಲಾಂ ಧರ್ಮವೂ ಪುರಸ್ಕರಿಸುತ್ತದೆ. ಅದೇ ವೇಳೆ ವಿನಾಕಾರಣವಾಗಿ ಯಾವ ಜೀವಿಯನ್ನೂ ಹಿಂಸಿಸಬಾರದೆಂದು ಅಥವಾ ಅನರ್ಥಜ ಹಿಂಸೆಯನ್ನು ಯಾವತ್ತೂ ಮಾಡಬಾರದೆಂದೂ ಇಸ್ಲಾಂ ಧರ್ಮ ಬೋಧಿಸುತ್ತದೆ. ಎಲ್ಲಾ ಪ್ರಾಣಿಗಳನ್ನೂ ಪ್ರೀತಿಸುವಂತೆ, ಅವುಗಳೊಡನೆ ದಯೆಯಿಂದಲೂ ಕರುಣೆಯಿಂದಲೂ ವರ್ತಿಸುವಂತೆ ಇಸ್ಲಾಂ ಧರ್ಮ ಕಲಿಸುತ್ತದೆ. "ಅನ್ಯಾಯವಾಗಿ ಒಂದು ಇರುವೆಯನ್ನಾದರೂ ನೋಯಿಸಬಾರದು" ಎಂದು ಹಜ್ರತ್ ಮುಹಮ್ಮದ್ ಪೈಗಂಬರರು ಹೇಳಿರುವರು. ಒಂದು ದಿವಸ ಪೈಗಂಬರರು ನಡೆದು ಹೋಗುತ್ತಿದ್ದಾಗ ಒಂದು ಸಾಕುಮೃಗದ ಮುಖಕ್ಕೆ ಕಬ್ಬಿಣವನ್ನು ಕಾಯಿಸಿ ಗಾಯಮಾಡಿದ ಗುರುತನ್ನು ಕಂಡರು. ಅದೇನೆಂದು ವಿಚಾರಿಸಿದಾಗ ಕೆಲವು ರೋಗಗಳನ್ನು ತಡೆಗಟ್ಟಲಿಕ್ಕಾಗಿಯೂ ಮೃಗಗಳ ಗುರುತು ತಿಳಿದುಕೊಳ್ಳಲಿಕ್ಕೂ ಈ ರೀತಿ ಮಾಡುವ ವಾಡಿಕೆಯಿದೆ ಎಂದು ಪೈಗಂಬರರ ಸಹಚರರು ಅವರಿಗೆ ತಿಳಿಸಿದರು. ಆಗ ಪೈಗಂಬರರು ಬಹಳವಾಗಿ ನೊಂದು ಈ ರೀತಿ ಹೇಳಿದರು: "ಮಾತನಾಡಲು ಶಕ್ತಿಯಿಲ್ಲದಂತಹ ಮೂಕ ಪ್ರಾಣಿಗಳನ್ನು ಈ ರೀತಿ ಹಿಂಸಿಸಬಾರದು. ಸುಟ್ಟ ಗಾಯಗಳನ್ನು ಅದರ ಮುಖದಲ್ಲುಂಟು ಮಾಡುವಾಗ ಅದಕ್ಕುಂಟಾದ ನೋವನ್ನು ತಿಳಿಸಲು ಅದಕ್ಕೆ ಮಾತು ಬರುವುದಿಲ್ಲವಲ್ಲ. ಈ ಹಿಂಸಾ

ಕೃತ್ಯವನ್ನು ದೇವರು ಇಷ್ಟಪಡುವುದಿಲ್ಲ. ನೀವು ಎಂದಿಗೂ ಈ ರೀತಿ ಮಾಡಬಾರದು. ಅಥವಾ ರೋಗ ಬಾರದಂತೆ ತಡೆಗಟ್ಟಲು ಈ ರೀತಿ ಮಾಡಲೇಬೇಕೆಂದಾದರೆ ಮುಖದ ಮೇಲೆ ಗಾಯ ಮಾಡದೆ ಅದರ ಶರೀರದ ನೋವು ಕಡಿಮೆಯಿರುವ ಬೇರೆ ಜಾಗದಲ್ಲಿ ಆ ರೀತಿ ಮಾಡಿರಿ. ಪ್ರಾಣಿಗಳ ಮುಖಕ್ಕೆ ಕಾದ ಕಬ್ಬಿಣದಿಂದ ಎಂದಿಗೂ ಗಾಯ ಮಾಡಬಾರದು" ಎಂದು ಹೇಳಿದರು. ಒಂದು ದಿವಸ ಪೈಗಂಬರರು ಒಂದು ಒಂಟೆಯನ್ನು ಕಂಡರು. ಅದು ಬಹಳ ಬಡಕಲಾಗಿತ್ತು. ಅದರ ಕಣ್ಣಿನಲ್ಲಿ ನೀರು ಸುರಿಯುತ್ತಿತ್ತು. ಇದರ ಮಾಲೀಕನಾರೆಂದು ಪೈಗಂಬರರು ವಿಚಾರಿಸಿ ಅತನೊಡನೆ "ನಿನಗೆ ದೇವರು ಅಧೀನಪಡಿಸಿ ಕೊಟ್ಟಿರುವಂತಹ, ನಿನ್ನ ಆಶ್ರಯದಲ್ಲಿರುವಂತಹ ಮೂಕ ಪ್ರಾಣಿಗಳೊಡನೆ ನಿನಗೆ ಏನೆಲ್ಲಾ ಬಾಧ್ಯತೆಗಳಿವೆ ಎಂಬುದನ್ನು ನೀನು ಮರೆತೆಯಾ? ಅದಕ್ಕೆ ತಿನ್ನಲು ಕೊಡದೆ ಹಿಂಸಿಸುವುದನ್ನೂ ಅದಕ್ಕೆ ಸಾಧ್ಯವಾಗುವುದಕ್ಕಿಂತ ಹೆಚ್ಚಿನ ಹೊರೆಯನ್ನು ಹೊರಿಸುವುದನ್ನೂ ಪರಮಾತ್ಮನು ವಿರೋಧಿಸಿದ್ದಾನೆ. ಆದುದರಿಂದ ದೇವರನ್ನು ಭಯಪಡು – ಅದನ್ನು ಚೆನ್ನಾಗಿ ನೋಡಿಕೋ" ಎಂದು ಹೇಳಿದರು.

ಮಾತನಾಡುವ ಶಕ್ತಿಯಿಲ್ಲದ ಮೂಕ ಪ್ರಾಣಿಗಳ ಬಗ್ಗೆ ಪೈಗಂಬರರು ಎಷ್ಟು ಕರುಣೆ ತೋರಿಸಿದ್ದರೆಂದು ಇದರಿಂದ ಸ್ಪಷ್ಟವಾಗುತ್ತದೆ. ಪ್ರಾಣಿಹಿಂಸೆಯನ್ನು ಅವರು ಕಠಿಣವಾಗಿ ವಿರೋಧಿಸಿದ್ದಾರೆ. ಅದೇ ರೀತಿ ಪ್ರಾಣಿಗಳೊಡನೆ ಕರುಣೆಯಿಂದಲೂ ಪ್ರೀತಿಯಿಂದಲೂ ವರ್ತಿಸಬೇಕೆಂದು ಅವರು ಆಜ್ಞಾಪಿಸಿದರು. ಒಮ್ಮೆ ಪೈಗಂಬರರು ತನ್ನ ಶಿಷ್ಯರಿಗೆ ಒಂದು ಘಟನೆಯನ್ನು ವಿವರಿಸಿದರು. ಅದೇನೆಂದರೆ, ಒಬ್ಬಳು ವೇಶ್ಯೆಯಿದ್ದಳು. ಅವಳು ನೀಚಳೂ ಪಾಪಿಯೂ ಆಗಿದ್ದಳು. ಸಮಾಜವು ಅವಳನ್ನು ಬಹಳ ಹೀನವಾಗಿ ಕಾಣುತ್ತಿತ್ತು. ನಿಜವಾಗಿಯೂ ವೇಶ್ಯಾ ವೃತ್ತಿಯ ಕಾರಣದಿಂದ ಅವಳೊಬ್ಬ ಮಹಾ ಪಾಪಿಯೇ ಆಗಿದ್ದಳು. ಈ ವೇಶ್ಯಾ ಸ್ತ್ರೀಯು ಒಂದು ದಿವಸ ಒಂದು ದಾರಿಯಲ್ಲಿ ನಡೆದು ಹೋಗುತ್ತಿದ್ದ ಸಂದರ್ಭದಲ್ಲಿ ಒಂದು ಕೊಳದ ಬಳಿ ನಾಯಿಯೊಂದು ನಿಂತು ಪರಿತಪಿಸುತ್ತಿರುವುದನ್ನು ಕಂಡಳು. ನಾಯಿಯು ಬಹಳ ಬಾಯಾರಿಕೆಯಿಂದ ಇತ್ತು. ಆದರೆ ಕೊಳದಲ್ಲಿ ಇಳಿದು ನೀರು ಕುಡಿಯಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇದನ್ನು ಕಂಡ ಆ ವೇಶ್ಯಾ ಸ್ತ್ರೀಯು ನಾಯಿಯ ಮೇಲೆ ಕರುಣೆದೋರಿ ಅದಕ್ಕೆ ನೀರು ಕುಡಿಸಲು ಬಯಸಿದಳು. ಆದರೆ, ನೀರು ಸೇದಲು ಅಲ್ಲಿ ಬೇರೆ ಪಾತ್ರೆಗಳೇನೂ ಇರಲಿಲ್ಲ. ಬೇರೆ ದಾರಿಯಿಲ್ಲದೆ ಆ ಮಹಿಳೆ ತನ್ನ ಕಾಲಿನ ಕಾಲ್ಚೀಲವನ್ನು ಬಿಚ್ಚಿ ಅದನ್ನು ಎರಡು ಮೂರು ಸಲ ನೀರಿಗೆ ಮುಳುಗಿಸಿ ತಂದು ನಾಯಿಗೆ ಕುಡಿಸಿದಳು. ನಾಯಿಯು ಸಂತೃಪ್ತಿಯಿಂದ ಬಾಲವಾಡಿಸಿ ಸಂತೋಷಗೊಂಡು ಹೊರಟುಹೋಯಿತು. ಮೂಕ ಪ್ರಾಣಿಯಾದ ಒಂದು ನಾಯಿಯ ಮೇಲೆ ಈ ರೀತಿ ಕರುಣೆ ತೋರಿಸಿದ್ದಕ್ಕಾಗಿ, ಮಹಾಪಾಪಿಯಾಗಿದ್ದ ಆ ವೇಶ್ಯೆಯ ಎಲ್ಲಾ ಪಾಪಕೃತ್ಯಗಳನ್ನೂ ಪರಮಾತ್ಮನು ಕ್ಷಮಿಸಿ ಅವಳನ್ನು ಸ್ವರ್ಗದಲ್ಲಿ ಪ್ರವೇಶಿಸುವಂತೆ ಮಾಡಿದನು – ಎಂದು ಹೇಳಿದರು. ಇದು ಪೈಗಂಬರರು ವಿವರಿಸಿದ ಒಂದು ಘಟನೆಯಾಗಿದೆ. ಅಹಿಂಸೆಯ ಮೂಲಮಂತ್ರವೇ ಕರುಣೆಯೆಂಬುದು. ಪ್ರಾಣಿದಯೆ, ಅಹಿಂಸೆ ಇವುಗಳ ಬಗ್ಗೆ ಪೈಗಂಬರರು ಎಷ್ಟು ಆಸಕ್ತಿ ವಹಿಸಿದ್ದರೆಂದು ಈ ಸಂಭವವನ್ನು ವಿವರಿಸುವುದರ ಮೂಲಕ ಅವರು ತಿಳಿಸಿಕೊಟ್ಟಿದ್ದಾರೆ.

ಪ್ರಾಣಿಗಳೊಡನೆ ದಯೆಯಿಂದಲೂ ಕರುಣೆಯಿಂದಲೂ ವರ್ತಿಸಬೇಕೆಂದು ಮಾತ್ರವಲ್ಲ ಪ್ರಾಣಿಗಳನ್ನು ಹಿಂಸಿಸಬಾರದೆಂಬ ನಿಷೇಧಾಜ್ಞೆ ಕೂಡಾ ಇಸ್ಲಾಂ ಧರ್ಮದಲ್ಲಿದೆ. ಯಾವ ಪ್ರಾಣಿಯನ್ನೂ ಅನ್ಯಾಯವಾಗಿ ಹಿಂಸಿಸಬಾರದೆಂಬುದು ಇಸ್ಲಾಮಿನ ಪಾಠವಾಗಿದೆ. ಈ ಕುರಿತು ಪೈಗಂಬರರ ವಚನಗಳನ್ನು ನೋಡಿರಿ:

ಒಮ್ಮೆ ಪೈಗಂಬರರು ಹೇಳಿದರು – "ಓರ್ವ ಮಹಿಳೆಯಿದ್ದಳು. ಆಕೆ ಒಂದು ಬೆಕ್ಕನ್ನು ಬಂಧನದಲ್ಲಿಟ್ಟು ಹಿಂಸಿಸಿದಳು. ಅದಕ್ಕೆ ತಿನ್ನಲಿಕ್ಕೂ ಕುಡಿಯಲಿಕ್ಕೂ ಏನನ್ನೂ ಕೊಡಲಿಲ್ಲ. ಹಸಿವೆಯಿಂದ ಆ ಬೆಕ್ಕು ಸತ್ತು ಹೋಯಿತು." ಮುಂದುವರಿಸಿ ಪೈಗಂಬರರು ಹೇಳುತ್ತಾರೆ – "ಅಲ್ಲಾಹನು ಆಕೆಯನ್ನು ಆ ಕಾರಣಕ್ಕಾಗಿ ನರಕಕ್ಕೆ ಹಾಕಿದನು. ಮಾತ್ರವಲ್ಲ, ನರಕದಲ್ಲಿ ಬೆಕ್ಕಿನ ಕ್ರೂರವಾದ ಉಗುರುಗಳಿಂದ ಆ ಮಹಿಳೆಯ ಮುಖವನ್ನು ಪರಚುತ್ತಿರುವ ಶಿಕ್ಷೆಗೆ ಆಕೆಯನ್ನು ಗುರಿಪಡಿಸಲಾಯಿತು."

ಈ ಘಟನೆಗಳನ್ನೆಲ್ಲಾ ವಿವರಿಸುವುದರ ಮೂಲಕ ಹಝ್ರತ್ ಪೈಗಂಬರರು ಪ್ರಾಣಿಗಳೊಂದಿಗೆ ದಯೆಯಿಂದ ವರ್ತಿಸಬೇಕೆಂದೂ ಪ್ರಾಣಿಹಿಂಸೆ ಮಾಡಬಾರದೆಂದೂ ಬೋಧಿಸಿರುತ್ತಾರೆ. ಕರುಣೆಯ ಕುರಿತು ಅವರ ವೀಕ್ಷಣೆಯು ಅತಿ ವಿಶಾಲವಾದದ್ದು; ಅಂತೆಯೇ ಪ್ರಯೋಗಾತ್ಮಕವಾದದ್ದು ಕೂಡಾ. ಪೈಗಂಬರರ ಚರ್ಯೆಯಿಂದಲೂ ಅವರ ವಚನಗಳಿಂದಲೂ ಈ ವಿಷಯದಲ್ಲಿ ಎಷ್ಟೋ ಉದಾಹರಣೆಗಳನ್ನು ನೀಡಬಹುದು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಿಕೊಂಡು ಈ ಲೇಖನ ಮುಕ್ತಾಯಗೊಳಿಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರರು ಹೇಳುತ್ತಾರೆ:

★ "ದಯೆ ತೋರಿಸುವವನ ಮೇಲೆ ಅಲ್ಲಾಹನು ದಯೆ ತೋರುತ್ತಾನೆ. ಭೂಮಿಯಲ್ಲಿರುವವರ ಮೇಲೆ ಕರುಣೆಯುಳ್ಳವರಾಗಿರಿ. ಉನ್ನತದಲ್ಲಿರುವವರು ನಿಮ್ಮ ಮೇಲೆ ಕರುಣೆಯುಳ್ಳವರಾಗುವರು."

★ "ನೀವು ಕರುಣೆಯುಳ್ಳವರಾಗುವ ತನಕ ಸತ್ಯವಿಶ್ವಾಸಿಗಳಾಗಲಾರಿರಿ." ಆಗ ಶಿಷ್ಯರು ಕೇಳಿದರು – "ಪ್ರವಾದಿವರ್ಯರೇ, ನಾವೆಲ್ಲರೂ ಕರುಣೆಯುಳ್ಳವರೇ ಆಗಿದ್ದೇವಲ್ಲಾ." ಪೈಗಂಬರರು ಅದಕ್ಕೆ ಈ ರೀತಿ ಉತ್ತರಿಸಿದರು – "ಅದು ನಿಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಬಂಧು–ಮಿತ್ರರೊಡನೆ ತೋರಿಸುವ ಕರುಣೆಯ ಕುರಿತು ಹೇಳಿದ್ದಲ್ಲ. ಬದಲಾಗಿ ಎಲ್ಲರೊಡನೆಯೂ ತೋರಿಸಬೇಕಾದ ಕರುಣೆಯ ಕುರಿತಾಗಿದೆ."

★ "ಕರುಣೆಯಿಲ್ಲದವನು ಭಾಗ್ಯಹೀನನಾಗಿರುವನು."
(ಅಬೂದಾವೂದ್)

★ "ಸಮಸ್ತ ಸೃಷ್ಟಿಗಳೊಂದಿಗೂ ಒಳ್ಳೆಯ ರೀತಿಯಲ್ಲಿ ವರ್ತಿಸಲು ಅಲ್ಲಾಹನು ನಿರ್ದೇಶಿಸಿದ್ದಾನೆ. ಆದುದರಿಂದ ನೀವು ಪ್ರಾಣಿಗಳನ್ನು ಆಹಾರಕ್ಕಾಗಿ ಕೊಯ್ಯುವಾಗಲೂ ಉತ್ತಮ ರೀತಿಯಲ್ಲಿ ಕೊಯ್ಯಿರಿ. ಕತ್ತಿಯನ್ನು ಚೆನ್ನಾಗಿ ಹರಿತಗೊಳಿಸಿ ಜೀವಿಗೆ ನೋವಾಗದಂತೆ ಮಾಡಿರಿ."
(ಸಹೀಹ್ ಮುಸ್ಲಿಂ)

● ಜೀವಿಗಳ ಅವಯವಗಳನ್ನು ಛೇಧಿಸಿ ಚಿತ್ರಹಿಂಸೆ ನೀಡುವವರನ್ನು ಪೈಗಂಬರರು ಶಪಿಸಿರುವರು.
(ಬುಖಾರಿ)

● ಜೀವ ಜಂತುಗಳನ್ನು ಬಂಧನದಲ್ಲಿಟ್ಟು ಅವುಗಳ ಮೇಲೆ ಕಲ್ಲು ಯಾ ಇತರ ಆಯುಧಗಳನ್ನು ತೂರಿ ಹಿಂಸಿಸಿ ಕೊಲ್ಲುವುದನ್ನು ಪೈಗಂಬರರು ವಿರೋಧಿಸಿದ್ದಾರೆ. (ಬುಖಾರಿ)

ಇತರ ಮನುಷ್ಯರೊಂದಿಗೂ ಪ್ರಾಣಿಗಳೊಂದಿಗೂ ಸಕಲ ಜೀವಿಗಳೊಂದಿಗೂ ಯಾವತ್ತೂ ದಯೆಯಿಂದ ವರ್ತಿಸಬೇಕೆಂದೂ ವಿನಾಕಾರಣ ಯಾರನ್ನಾದರೂ ಯಾವ ಪ್ರಾಣಿಯನ್ನಾದರೂ ಹಿಂಸಿಸುವುದು ಅತ್ಯಂತ ಘೋರ ಅಪರಾಧವೆಂದೂ ಇಸ್ಲಾಂ ಧರ್ಮ ಕಲಿಸುತ್ತದೆ. ದಯೆಯಿರುವವನ ಮೇಲೆ ಅಲ್ಲಾಹನ ದಯೆ ಬೀಳುವುದು. ಕ್ರೂರಿಯಾದವನು ಅಲ್ಲಾಹನ ಕ್ರೋಧವನ್ನು ಎದುರಿಸಬೇಕಾಗುವುದು.

ಓದಿರಿ :

## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಅಹ್ಮದಿಯರ ಧಾರ್ಮಿಕ ವಿಶ್ವಾಸಾಚಾರಗಳ ಸಂಕ್ಷಿಪ್ತ ರೂಪ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಬೆಲೆ : ರೂ. 1-00 ಅಂಚೆ ವೆಚ್ಚ : ಉಚಿತ

ಬರೆಯಿರಿ : ಅಹ್ಮದಿಯಾ ಮುಸ್ಲಿಂ ಮಿಶನ್
10-23-1008 ಅನ್ಸಾರಿ ರೋಡ್,
ಬಂದರ್, ಮಂಗಳೂರು – 575 001.

ಇಸ್ಲಾಂ ಮತ್ತು ವಿಜ್ಞಾನ*-3

# ಇಸ್ಲಾಮೀ ರಾಷ್ಟ್ರಗಳಲ್ಲಿ ವಿಜ್ಞಾನ ಇಂದು

—ಡಾ| ಅಬ್ದುಸ್ಸಲಾಂ

ಇಂದು ಇಸ್ಲಾಮಿಕ ರಾಷ್ಟ್ರಸಮೂಹದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಚಿತ್ರವೇನು? ಆರು ಭೂ ವಲಯಗಳಲ್ಲಿ ಇಸ್ಲಾಮಿಕ ಜನತೆ ಜೀವಿಸುತ್ತಿದೆ. ಇವುಗಳಲ್ಲಿ ಪ್ರಥಮವೂ ಸರ್ವಪ್ರಧಾನವಾದುದೂ ಅರೇಬಿಯಾ ಉಪಭೂಖಂಡದ ಮತ್ತು ಗಲ್ಫ್‌ನ ಒಂಬತ್ತು ರಾಷ್ಟ್ರಗಳಾಗಿವೆ. ಉತ್ತರ ಅರಬ್-ಸಿರಿಯಾ, ಜೋರ್ಡಾನ್, ಲೆಬನಾನ್, ಪಾಲೆಸ್ತೀನ್, ಪಶ್ಚಿಮ ತೀರದಲ್ಲಿ ಗಾಸ-ವಲಯವಾಗಿದೆ ಎರಡನೆಯದು. ಮೂರನೆಯ ವಲಯದಲ್ಲಿ ತುರ್ಕಿ, ಮುಸ್ಲಿಂ ಮಧ್ಯಏಶ್ಯ, ಇರಾನ್, ಅಫ್‌ಘಾನಿಸ್ತಾನ್, ಪಾಕಿಸ್ತಾನ್ ಎಂಬೀ ರಾಷ್ಟ್ರಗಳೂ ಸೇರುತ್ತವೆ. ಅತ್ಯಂತ ಜನಸಂಖ್ಯೆ ಇರುವ ನಾಲ್ಕನೆಯ ವಲಯದಲ್ಲಿ ಬಂಗ್ಲಾದೇಶ, ಮಲೇಷ್ಯಾ, ಇಂಡೋನೇಷ್ಯಾ ಎಂಬೀ ರಾಷ್ಟ್ರಗಳೂ ಭಾರತದ ದೊಡ್ಡ ಮುಸ್ಲಿಂ ಸಮುದಾಯವೂ ಸೇರುತ್ತದೆ. ಉತ್ತರ ಆಫ್ರಿಕದ ಅರಬ್ ರಾಷ್ಟ್ರಗಳು ಐದನೆಯ ವಲಯದಲ್ಲೂ ಇತರ ಅರಬ್ ಆಫ್ರಿಕನ್ ರಾಷ್ಟ್ರಗಳು ಆರನೆಯ ವಲಯದಲ್ಲೂ ಸೇರುತ್ತವೆ.

## ಬಹಳ ಹಿಂದೆ

ವಿಕಸಿತ ರಾಷ್ಟ್ರಗಳಲ್ಲಿ 18 ಮತ್ತು 23 ವರ್ಷ ಮಧ್ಯೆ ಪ್ರಾಯವುಳ್ಳವರ ಸರಾಸರಿ ಶೇಕಡಾ 12 ಈ ವಿದ್ಯಾಭ್ಯಾಸಕ್ಕೆ ಸೇರುತ್ತದೆ. ಇಸ್ಲಾಮಿಕ ರಾಷ್ಟ್ರಗಳಲ್ಲಾದರೆ, ಸರಾಸರಿ ಶೇಕಡಾ 2 ಆಗಿದೆ. ವಿಜ್ಞಾನ-ತಂತ್ರಜ್ಞಾನ ಸಂಶೋಧನೆಯಲ್ಲೂ ವಿಕಸನದಲ್ಲೂ ಇಸ್ಲಾಮೀ ರಾಷ್ಟ್ರ ಸಮೂಹ ಮತ್ತು ವಿಕಸಿತ ರಾಷ್ಟ್ರಗಳು ಒಟ್ಟು ಹೂಡುವ ಭಂಡವಾಳದ ಅನುಪಾತ 1 : 6 ಆಗಿದೆ.

ವೈಜ್ಞಾನಿಕ ಸಂಶೋಧನೆಗಳಲ್ಲಿ ನಿರತರಾಗಿರುವವರ ಸಂಖ್ಯೆಯ ಕುರಿತು ವಿವರವಾದ ಲೆಕ್ಕವಿಲ್ಲ. ಆದರೂ 1983 ಮೇ 10-13 ದಿನಾಂಕಗಳಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಇಸ್ಲಾಮಿಕ ಸಮ್ಮೇಳನ ಸಂಘಟನೆಯ ವಿಜ್ಞಾನ ಸಮಿತಿಯ ಒಂದನೆಯ ಅಧಿವೇಶನದಲ್ಲಿ ಸಾದರಪಡಿಸಿದ ಪ್ರಬಂಧದಲ್ಲಿ, ಇಸ್ಲಾಮಿಕ ರಾಷ್ಟ್ರಗಳಲ್ಲೆಲ್ಲಾ ಸೇರಿ ಒಟ್ಟು ಸುಮಾರು 45000 ಸಂಶೋಧನ ವಿಕಸನ ಶಾಸ್ತ್ರಜ್ಞರೂ ಇಂಜಿನಿಯರರೂ ಇರುವರೆಂದು ಹೇಳಲಾಗಿದೆ. ಸೋವಿಯತ್ ದೇಶದಲ್ಲಿ ಈ ಸಂಖ್ಯೆ 5 ಲಕ್ಷ ಮತ್ತು ಜಪಾನಿನಲ್ಲಿ 6 ಲಕ್ಷವಾಗಿದೆ.

ಪ್ರಪಂಚದಲ್ಲಿಡೀ ಭೌತಶಾಸ್ತ್ರ ರಂಗದಲ್ಲಿ ಹತ್ತರಲ್ಲಿ ಒಂದು ಮತ್ತು ಸಂಶೋಧನ ಪ್ರಸಿದ್ಧೀಕರಣ ರಂಗದಲ್ಲಿ ನೂರರಲ್ಲಿ ಒಂದು ಇಸ್ಲಾಮಿಕ ರಾಷ್ಟ್ರಗಳಿಂದಿರುವವರೆಂದು ಅಂಕೆ ಸಂಖ್ಯೆಗಳು ಸೂಚಿಸಿರುವುದಾಗಿ ಬೈರೂತಿನ ಅಮೇರಿಕಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದ ಎ. ಬಿ. ಝಹ್ಲಾನ್ ಬೊಟ್ಟುಮಾಡಿ ತೋರಿಸಿರುತ್ತಾರೆ. ಇಸ್ಲಾಮಿಕ ರಾಷ್ಟ್ರಗಳಲ್ಲಿ ವೈಜ್ಞಾನಿಕವಾಗಿ ಅತ್ಯಂತ ಪ್ರಗತಿಹೊಂದಿದ ರಾಜ್ಯಗಳಿಗೆ ಸೇರಿದ ಪಾಕಿಸ್ತಾನದಲ್ಲಿ 1983ರಲ್ಲಿ 13 ವಿಶ್ವವಿದ್ಯಾಲಯಗಳಿದ್ದವು. ಆದರೆ 13 ಭೌತಶಾಸ್ತ್ರ ಪ್ರೊಫೆಸರುಗಳೂ 42 ಭೌತಶಾಸ್ತ್ರ ಸಂಶೋಧಕ ಅಧ್ಯಾಪಕರುಗಳೂ ಸಂಶೋಧಕರೂ ಮಾತ್ರವೇ ಈ 13 ವಿಶ್ವವಿದ್ಯಾಲಯಗಳಲ್ಲಿ ಇದ್ದುದು! ಪಾಕಿಸ್ತಾನದ ಒಟ್ಟು ಜನಸಂಖ್ಯೆ 8 ಕೋಟಿ ಎಂಬುದು ನೆನಪಿಡಬೇಕು.

ಇದೇ ಸಮಯ ಬ್ರಿಟನಿನ ಒಂದು ವಿಶ್ವವಿದ್ಯಾಲಯದಲ್ಲಿ ಒಂದು ಕಾಲೇಜಿನಲ್ಲಿ ಮಾತ್ರ (ಇಂಪೀರಿಯಲ್ ಕಾಲೇಜ್ ಓಫ್ ಸಯನ್ಸ್ ಏಂಡ್ ಟೆಕ್ನೋಲಜಿ) 12 ಭೌತಶಾಸ್ತ್ರ ಪ್ರೊಫೆಸರ್‌ಗಳೂ 100 ಸಂಶೋಧಕರೂ ಇದ್ದಾರೆ.

## ವಾಸ್ತವಿಕ ರೂಕ್ಷ ವಿಮರ್ಶೆ

ಓರ್ವ ಮುಸ್ಲಿಮೇತರ ವ್ಯಕ್ತಿಯ ಅಭಿಪ್ರಾಯವನ್ನು ಸಹ ನೋಡೋಣ. ಪ್ರಖ್ಯಾತ ವಿಜ್ಞಾನ

* ಮಾತೃಭೂಮಿ, ಮೇ 14-18, 1986.

ಮಾಸ ಪತ್ರಿಕೆ 'ನೇಚರ್'ನಲ್ಲಿ (1983 ಮಾರ್ಚ್ 24) ಫ್ರಾನ್ಸಿಸ್ ಗೈಲ್ಸ್ ಕೇಳುತ್ತಾರೆ: "ಮುಸ್ಲಿಂ ವಿಜ್ಞಾನಕ್ಕೆ ಏನು ಘಟಿಸಿತು?"

ಅವರೇ ಹೇಳಿದ ಉತ್ತರ ಇದಾಗಿತ್ತು: "ಸುಮಾರು ಸಾವಿರ ವರ್ಷಗಳಿಗೆ ಮೊದಲು ಮುಸ್ಲಿಂ ವಿಜ್ಞಾನ ಅದರ ಪರಾಕಾಷ್ಠೆಗೆ ತಲಪಿದ್ದಾಗ ಮುಸ್ಲಿಂ ಲೋಕ ವಿಜ್ಞಾನ ರಂಗಕ್ಕೆ ಗಣ್ಯವಾದ ಕೊಡುಗೆಗಳನ್ನು ನೀಡಿತ್ತು—ವಿಶೇಷವಾಗಿ ಗಣಿತಶಾಸ್ತ್ರಕ್ಕೆ ಮತ್ತು ವೈದ್ಯಶಾಸ್ತ್ರಕ್ಕೆ. ಅಭಿವೃದ್ಧಿಯ ಉನ್ನತಿಯಲ್ಲಿರುವಾಗ ಬಗ್ದಾದ್ ಮತ್ತು ದಕ್ಷಿಣ ಸ್ಪೈಯಿನ್ ಸ್ಥಾಪಿಸಿದ ವಿಶ್ವವಿದ್ಯಾಲಯಗಳಿಗೆ ಸಾವಿರಗಟ್ಟಲೆ ಜನರ ಪ್ರವಾಹವೇ ಹರಿದು ಬರುತ್ತಿತ್ತು. ಆಡಳಿತಾಧಿಕಾರಿಗಳು ತಮಗೆ ಸುತ್ತಲೂ ವಿಜ್ಞಾನಿಗಳು ಮತ್ತು ಕಲಾಕಾರರ ಒಂದು ವಲಯವನ್ನೇ ಸೃಷ್ಟಿಸಿದ್ದರು. ಯಹೂದರೂ ಕ್ರೈಸ್ತರೂ ಮುಸ್ಲಿಮರೂ ಒಂದುಗೂಡಿ ಪ್ರವರ್ತಿಸುವ ಸ್ವಾತಂತ್ರ್ಯಚೈತನ್ಯ ಅಂದು ನೆಲೆಗೊಂಡಿತ್ತು. ಇಂದು ಅವೆಲ್ಲಾ ಗತಕಾಲ ಸ್ಮರಣೆಗಳು ಮಾತ್ರ.

"ತೈಲ ರಫ್ತು ಮಾಡುವ ಸಂಪನ್ನ ಮುಸ್ಲಿಂ ರಾಷ್ಟ್ರಗಳಲ್ಲಿ ಮಾತ್ರವೇ ವಿಜ್ಞಾನಕ್ಕೂ ತಂತ್ರಜ್ಞಾನಕ್ಕೂ ಹೂಡುವ ಭಂಡವಾಳದಲ್ಲಿ ವೃದ್ಧಿಯುಂಟಾಗಿದೆ. ಆದರೆ ಇವುಗಳಲ್ಲಿ ಕೆಲವು ರಾಷ್ಟ್ರಗಳು ಕೋಟಿಗಟ್ಟಲೆ ಡಾಲರ್ ನಷ್ಟಪಡಿಸಿ ಯುದ್ಧಗಳಲ್ಲಿ ನಿರತವಾಗಿರುತ್ತವೆ. ಖಂಡಿತವಾಗಿಯೂ ಅವರಿಗೆ ವಿಜ್ಞಾನಕ್ಕೆ ಬೇಕಾಗಿ ಸಮಯ ಕಳೆಯಲಾಗದು. ಕೈಗಾರಿಕಾ–ವ್ಯಾಪಾರ ಸಂಸ್ಥೆಗಳಲ್ಲಾದರೋ, ಆಮದು ಮಾಡಿದ ತಂತ್ರಜ್ಞಾನದ ಮೇಧಾವಿತ್ವವಾಗಿದೆ. ಮೌಲಿಕತೆಗಿಂತ ಅನುಕರಣವಾಗಿದೆ ಹೆಚ್ಚಿನ ರಾಷ್ಟ್ರಗಳ ಆರ್ಥಿಕ, ವೈಜ್ಞಾನಿಕ ಯೋಜನೆಗಳು.

"ತೈಲ ರಫ್ತು ಮೂಲಕ ಇತ್ತೀಚೆಗಿನ ಕಾಲದಲ್ಲಿ ಗಳಿಸಿದ ಸಂಪದ್ಸಮೃದ್ಧಿ ಕೂಡ ಈ ಸ್ಥಿತಿಯಲ್ಲಿ ತುಲನಾತ್ಮಕವಾಗಿ ದೊಡ್ಡ ವ್ಯತ್ಯಾಸವನ್ನು ಉಂಟುಮಾಡಲಿಲ್ಲ. ಮಧ್ಯಪೂರ್ವದೇಶದಲ್ಲಿ ವಿಜ್ಞಾನ ಮತ್ತು ರಾಜನೀತಿ ಪರಸ್ಪರ ತುಂಬಾ ಭಿನ್ನವಾಗಿದೆಯೆಂಬ ವಿಚಾರ ಸಹ ವಿಜ್ಞಾನಿಗಳಿಗೆ ಬಹಳ ವಿಷಮತೆಯನ್ನುಂಟುಮಾಡುತ್ತದೆ. ಉದಾರಮತಿಗಳೂ ಅಲ್ಲದವರೂ ಆದ ಸ್ವೇಚ್ಛಾಧಿಪತಿಗಳು ಹೆಚ್ಚಿನ ರಾಜ್ಯಗಳಲ್ಲೆಲ್ಲಾ ಆಳ್ವಿಕೆ ನಡೆಸುತ್ತಿದ್ದಾರೆ. ಇದು ರಾಷ್ಟ್ರೀಯವಾಗಿ ವಿಜ್ಞಾನ ಬೆಳೆಯುವುದಕ್ಕೆ ಹೆಚ್ಚು ಅಡ್ಡಿಯಾಗಿದೆ. ಇವೆಲ್ಲಾ ಕಾರಣವಾಗಿ ಔದ್ಯಮಿಕ ರಾಷ್ಟ್ರಗಳಿಗೆ ಇಲ್ಲಿಂದ ಉಂಟಾಗುವ ಪ್ರತಿಭಾ ಸೋರುವಿಕೆ ಮಧ್ಯಪೂರ್ವ ದೇಶದ ಬೌದ್ಧಿಕ ಜೀವನವನ್ನಿಡೀ ಜಡಗೊಳಿಸುವುದರಲ್ಲಿ ಆಶ್ಚರ್ಯಪಡಲಿಕ್ಕಿಲ್ಲ."

ಗೈಲ್ಸ್ ಅವರ ವಿಮರ್ಶೆ ಕಟುವೇ ಆಗಿದೆ. ಆದರೆ, ವಿಮರ್ಶೆಯಲ್ಲಿ ಹೆಚ್ಚಿನ ಅಂಶ ನಿಜವೂ ಸಂಪೂರ್ಣ ಸೂಕ್ತವೂ ಆಗಿದೆಯೆಂಬ ವಾಸ್ತವಾಂಶ ಅವಶೇಷವಾಗುತ್ತದೆ.

'ನೇಚರ್' ಮಾಸಪತ್ರಿಕೆಯ ಅದೇ ಸಂಚಿಕೆಯಲ್ಲೇ ಇಸ್ರಾಯೇಲ್‌ನ ಸಂಶೋಧನ ರಂಗದಲ್ಲಿ ಪ್ರವರ್ತಿಸುವವರ ಕುರಿತು ವಿವರಿಸುವ ಲೇಖನದಿಂದ ನಾನಿನ್ನು ಉದ್ಧರಿಸುತ್ತೇನೆ: "ವಿಶ್ವವಿದ್ಯಾಲಯದಲ್ಲಿ ತರಬೇತಿ ಗಳಿಸಿದವರು ವಿಜ್ಞಾನ ತಂತ್ರಜ್ಞಾನ ಸಂಶೋಧನ–ವಿಕಸನ ರಂಗಗಳಿಗೆ ಗಣನೀಯವಾದ ಸಂಖ್ಯೆಯಲ್ಲಿ ಬರಬೇಕಾದ ಆವಶ್ಯಕತೆ ಇಂದು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿದೆ. 1995ರಲ್ಲಿ 86,700 ಮಂದಿ ಈ ರಂಗಗಳಲ್ಲಿ ದುಡಿಯಬೇಕಾಗಿದೆ. 1974ರಲ್ಲಿ 34,800 ಮಂದಿ ಈ ರಂಗದಲ್ಲಿದ್ದರು. ಎಂದರೆ, 20 ವರ್ಷಗಳೊಳಗೆ ಇದು ಶೇಕಡಾ 250 ವೃದ್ಧಿಗೊಳ್ಳಬೇಕು."

ಇಸ್ರಾಯೇಲ್‌ನಲ್ಲಿ 1974ರಲ್ಲಿ 34,800 ಮಂದಿ ಈ ರಂಗದಲ್ಲಿರುವಾಗ, ಇಸ್ಲಾಮಿಕ ರಾಷ್ಟ್ರಗಳಲ್ಲಿ ಒಟ್ಟು 45,000 ಸಂಶೋಧಕರಿದ್ದರು. (ಜನಸಂಖ್ಯೆಯಲ್ಲಾದರೆ, ಇಸ್ರಾಯೇಲ್ ಮತ್ತು ಮುಸ್ಲಿಮರು ತಮ್ಮೊಳಗಿನ ಅನುಪಾತ 1 : 200 ಆಗಿದೆ!)

## ಇಸ್ಲಾಮಿನಲ್ಲಿ ವಿಜ್ಞಾನದ ನವೋತ್ಥಾನ

ನಮಗೆ ಚರಿತ್ರೆಯ ಪುಟಗಳನ್ನು ಒಮ್ಮೆ ಹಿಂದಕ್ಕೆ ಮಗುಚಿ ನೋಡೋಣವೇ? ಅಂದಿನಂತೆ ಇನ್ನೂ ವಿಜ್ಞಾನ ರಂಗದಲ್ಲಿ ನಮಗೆ ನಾಯಕತ್ವವನ್ನು ವಹಿಸಿಕೊಳ್ಳಲು ಸಾಧ್ಯವೇ? ನನಗೆ ವಿನೀತವಾಗಿ ಹೇಳಲಿಕ್ಕಿರುವುದು ಇದು ನಮಗೆ ಸಾಧ್ಯವಿದೆಯೆಂದೇ ಆಗಿದೆ. ಆದರೆ, ಸಮೂಹವಿಡೀ–ಮುಖ್ಯವಾಗಿ ಯುವಜನರು ಇದನ್ನು ನಮ್ಮ ಅತ್ಯಂತ ಆವಶ್ಯಕ ಲಕ್ಷ್ಯವೆಂದು ತಿಳಿದುಕೊಂಡರೆ

ಮಾತ್ರವೇ ಇದು ಸಾಧ್ಯವಾಗುವುದು. ನಮ್ಮ ವೈಜ್ಞಾನಿಕ ನಂಬಿಕೆಗಳನ್ನೂ ಇಸ್ಲಾಮಿನ ಆದ್ಯಶತಕಗಳ ಅನುಭವಗಳನ್ನೂ ಹೃದಯದಲ್ಲಿ ಭದ್ರವಾಗಿರಿಸಿಕೊಂಡೇ ಈ ಗುರಿಸಾಧಿಸಬೇಕೆಂದು ತೀರ್ಮಾನಿಸಬೇಕಾಗಿದೆ. ಆದರೆ, ಈ ನವೋತ್ಥಾನಕ್ಕೆ ಹ್ರಸ್ವಮಾರ್ಗಗಳಿಲ್ಲವೆಂದು ನಾವು ನೆನಪಿಡಬೇಕಾಗಿದೆ. ಇಂದಿನ ಪರಿಸ್ಥಿತಿಗಳಲ್ಲಿ ರಾಷ್ಟ್ರದ ಯುವ ಪೀಳಿಗೆ ಈ ಲಕ್ಷ್ಯವನ್ನು ತಲಪಲಿಕ್ಕೆ ಆಶಾಭರಿತವಾಗಬೇಕಾಗಿದೆ. ತಮ್ಮ ಮನುಷ್ಯ ಶಕ್ತಿಯಿಂದ ಅರ್ಧಕ್ಕಿಂತ ಹೆಚ್ಚು ಜನರಿಗೆ ನಿರ್ದಿಷ್ಟವಾದ ವೈಜ್ಞಾನಿಕ ಶಿಕ್ಷಣವನ್ನು ನೀಡಬೇಕಾಗಿದೆ. ತಮ್ಮ ಒಟ್ಟು ರಾಷ್ಟ್ರದ ವರಮಾನದ ಶೇಕಡಾ 1–2 ಸಂಶೋಧನ–ವಿಕಸನ ರಂಗದಲ್ಲಿ ವ್ಯಯಿಸಬೇಕಾಗಿದೆ. ಈ ಭಂಡವಾಳದಲ್ಲಿ ಮೂರನೆಯ ಒಂದಂಶವಾದರೂ ಕೇವಲ ವಿಜ್ಞಾನಕ್ಕೆ ಮಾತ್ರವಾಗಿ ಮೀಸಲಿಡಬೇಕು.

## ಜಪಾನ್, ರಶ್ಯಾ, ಚೀನಾ

ಮೈಜಿ ಕ್ರಾಂತಿಕಾಲದಲ್ಲಿ ಜಪಾನದಲ್ಲಿ ಹೀಗೆ ಮಾಡಲಾಗಿತ್ತು. ಲೋಕದ ಯಾವುದೇ ಮೂಲೆಯಿಂದಾದರೂ ವಿಜ್ಞಾನವು ಎಲ್ಲಿಂದ ಲಭಿಸಿದರೂ ಸ್ವಾಯತ್ತ ಮಾಡಲಾಗುವುದೆಂದು ಅಂದು ಜಪಾನ್ ಚಕ್ರವರ್ತಿ ಪ್ರತಿಜ್ಞೆ ಮಾಡಿದನು. 60 ವರ್ಷ ಮೊದಲು ಸೋವಿಯತ್ ಯೂನಿಯನ್‌ನಲ್ಲೂ ಇದು ಸಂಭವಿಸಿತು. ಮಹಾನ್ ಪೀಟರ್ ಸ್ಥಾಪಿಸಿದ ಸೋವಿಯತ್ ಅಕಾಡೆಮಿ ಓಫ್ ಸಯನ್ಸ್‌ನೊಂದಿಗೆ ಅಂದು ತಮ್ಮ ಸಂಸ್ಥೆಯ ಸದಸ್ಯ ಸಂಖ್ಯೆಯನ್ನು ಹೆಚ್ಚಿಸಲೂ ವಿಜ್ಞಾನದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾವೀಣ್ಯವನ್ನು ಗಳಿಸಲಿಕ್ಕೂ ಕ್ರಾಂತಿಯ ಬಳಿಕ ಸರಕಾರ ಅಗತ್ಯಪಡಿಸಿತು. ಇಂದು ಸೋವಿಯತ್ ಯೂನಿಯನ್ ಸ್ವಯಂ ಆಡಳಿತಾಧಿಕಾರವುಳ್ಳ ಅರ್ಧ ಲಕ್ಷಕ್ಕಿಂತ ಹೆಚ್ಚು ವಿಜ್ಞಾನಿಗಳ ಸಮೂಹವಾಗಿದೆ. ಸೋವಿಯತ್ ವ್ಯವಸ್ಥೆಯಲ್ಲಿ ಇಂದು ಈ ವಿಜ್ಞಾನಿಗಳಿಗೆ ದೊರೆಯುವ ಅನುಕೂಲತೆಗಳೂ ಪ್ರಾಶಸ್ತ್ಯವೂ ಇತರರಿಗೆ ಅಸೂಯೆ ಉಂಟುಮಾಡುತ್ತದೆ. ಯುದ್ಧದ ನಂತರ ಸೋವಿಯತ್ ಆರ್ಥಿಕ ವ್ಯವಸ್ಥೆ ಕುಸಿದ ಕಾಲದಲ್ಲಿ 1945ರಲ್ಲಿ ಸೋವಿಯತ್ ವಿಜ್ಞಾನದ ನವೋತ್ಥಾನ ಆರಂಭಗೊಂಡದ್ದು ಎಂದು ವಿದ್ಯಾಭ್ಯಾಸ ತಜ್ಞ ಮಾಲ್ಕೋವ್ ಹೇಳುತ್ತಾರೆ. ವಿಜ್ಞಾನದ ಪ್ರಾಧಾನ್ಯವನ್ನು ಹೆಚ್ಚಿಸಲು ಅಂದು ಸ್ಟಾಲಿನ್ ತೀರ್ಮಾನಿಸಿದನು. ಸೋವಿಯತ್ ಅಕಾಡೆಮಿಯ ಎಲ್ಲಾ ವಿಜ್ಞಾನಿಗಳ ಮತ್ತು ತಾಂತ್ರಿಕ ತಜ್ಞರ ವೇತನ ಇತ್ಯಾದಿ ಶೇಕಡಾ 300 ಹೆಚ್ಚಿಸಲು ಬೇರೆ ಯಾರೊಡನೆಯೂ ಸಮಾಲೋಚನೆ ಮಾಡದೆಯೇ ಅಂದು ಸ್ಟಾಲಿನ್ ತೀರ್ಮಾನಿಸಿದನು. ವೈಜ್ಞಾನಿಕ ಸಂಶೋಧನ ರಂಗದಲ್ಲಿ ಪ್ರತಿಭಾವಂತ ಯುವಕ ಯುವತಿಯರನ್ನು ಬಹುಸಂಖ್ಯೆಯಲ್ಲಿ ತರಬೇಕೆಂದಾಗಿತ್ತು ಸ್ಟಾಲಿನನ ಇಚ್ಛೆ. ಹೆಚ್ಚು ಕಮ್ಮಿ ಅಂದು ಸೋವಿಯತ್ ಯೂನಿಯನಿನಂತೆ ಇಂದು ಚೀನದಲ್ಲಿ ವಿಜ್ಞಾನಕ್ಕೆ ಪ್ರಾಧಾನ್ಯ ನೀಡಲು ಆರಂಭವಾಗಿರುತ್ತದೆ. ಬಹಳ ಶೀಘ್ರವಾಗಿಯೂ ಸಂವ್ಯವಸ್ಥಿತವಾಗಿಯೂ ವಿಜ್ಞಾನದ ಅಭಿವೃದ್ಧಿಯನ್ನು ತ್ವರಿತಗೊಳಿಸಲಿಕ್ಕೆ ಯೋಜನೆಗಳು ಚೀನದಲ್ಲಿ ಪ್ರಾರಂಭವಾಗಿವೆ. ಈ ಶತಮಾನದ ಅಂತ್ಯದೊಳಗೆ ಬಾಹ್ಯಾಕಾಶ ಶಾಸ್ತ್ರ, ಮೈಕ್ರೋಇಲಕ್ಟ್ರೋನಿಕ್ಸ್ ಹೈ ಎನರ್ಜಿ, ಭೌತಶಾಸ್ತ್ರ, ಫ್ಯೂಷನ್ ಫಿಸಿಕ್ಸ್, ಥರ್ಮೋ–ನ್ಯೂಕ್ಲಿಯರ್ ಶಕ್ತಿ ನಿಯಂತ್ರಣ ಇತ್ಯಾದಿಗಳಲ್ಲಿ ಬ್ರಿಟನನ್ನು ಹಿಂದೆ ಹಾಕಬೇಕೆಂಬ ಬಹು ದೊಡ್ಡ ಲಕ್ಷ್ಯವನ್ನು ಚೀನದಲ್ಲಿ ಘೋಷಿಸಿಯಾಗಿದೆ. ಎಲ್ಲಾ ಮೂಲಶಾಸ್ತ್ರಗಳನ್ನೂ ಚೀನೀಯರು ಅಂಗೀಕರಿಸಿದ್ದಾರೆ. ಇಂದಿನ ಸಂಶೋಧನೆ ನಾಳೆಯ ಪ್ರಯೋಗವೆಂದೂ ತಾವು ಅಂದು ಮುಂಚೂಣಿಯಲ್ಲೇ ಇರಬೇಕೆಂದೂ ಚೀನಾ ನಿಶ್ಚಯಿಸಿದೆ. ಇಸ್ಲಾಮಿಕ ರಾಷ್ಟ್ರಗಳ ಒಟ್ಟು ರಾಷ್ಟ್ರೀಯ ವರಮಾನ ಚೀನಕ್ಕಿಂತ ಹೆಚ್ಚೆಂದು ಈ ಸಂದರ್ಭದಲ್ಲಿ ನೆನಪಿಡಬೇಕು. ಜನಸಂಖ್ಯೆಯಾದರೆ ಚೀನಕ್ಕಿಂತ ಕಡಿಮೆ.

ವಿಜ್ಞಾನ ರಂಗದಲ್ಲಿ ಕೆಲವು ದಶಾಬ್ದಗಳಲ್ಲಿ ಮಾತ್ರವೇ ಚೀನ ಇಂದು ಇಸ್ಲಾಮಿಕ ರಾಷ್ಟ್ರಗಳಿಗಿಂತ ಮುಂದೆ ಹೋಗಿದೆ. ಚೀನದವರ ಮಾದರಿಯನ್ನು ಅನುಸರಿಸೋಣ ಎಂಬ ಕಿರಿಯ ಲಕ್ಷ್ಯವನ್ನಾದರೂ ನಮಗೆ ಘೋಷಿಸಬಾರದೇ?

(ಸಶೇಷ)

## ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ-5

# ಹದೀಸು ನೀಡುವ ಸಾಕ್ಷ್ಯಗಳು-2

ಉರ್ದು ಮೂಲ: **ಮಿರ್ಝಾ ಬಶೀರ್ ಅಹ್ಮದ್** ಎಂ. ಎ.    ಅನುವಾದ: **ಎಂ. ಉಬೈದುಲ್ಲಾ**

ಹಝ್ರತ್ ಅಬೂಬಕರ್ (ರ. ಅ.)ರವರ ಬಗ್ಗೆ ನಿವೇದಿಸಲಾದ ಒಂದು ಹದೀಸನ್ನು ನಾನು ಇಲ್ಲಿ ನಿಮ್ಮ ಮುಂದಿಡಲು ಬಯಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರ್ ಹೇಳಿರುವುದಾಗಿ ಹೀಗೆ ನಿವೇದಿಸಲಾಗಿದೆ:

"ابوبکر افضل هذه الامّة الا ان یکون نبی"

**"ಅಬೂಬಕರ್ ಈ (ಮುಸ್ಲಿಮ್) ಸಮುದಾಯದಲ್ಲಿ ಅತ್ಯಂತ ಶ್ರೇಷ್ಠರಾಗಿದ್ದಾರೆ-ಇನ್ನು ಮುಂದೆ ಯಾವುದಾದರೂ ಪ್ರವಾದಿ ಜನಿಸುವುದನ್ನು ಹೊರತುಪಡಿಸಿದರೆ" (ಇಮಾಮ್ ಮನಾವಿ ತನ್ನ "ಕುನೂಝುಲ್ ಹಖಾಯಿಖ್"ನಲ್ಲಿ ಈ ಹದೀಸನ್ನು ಉಲ್ಲೇಖಿಸಿದ್ದಾರೆ.)**

**ಇನ್ನೊಂದು ಹದೀಸು ಈ ರೀತಿ ಇದೆ:**

"ابوبکر خیر الناس الا ان یکون نبی"

**"ಹಝ್ರತ್ ಅಬೂಬಕರ್ ಎಲ್ಲಾ ಜನರಿಗಿಂತ ಅತ್ಯಂತ ಶ್ರೇಷ್ಠರಾಗಿದ್ದಾರೆ-ಇನ್ನು ಮುಂದೆ ಯಾವುದಾದರೂ ಪ್ರವಾದಿ ಜನಿಸುವುದನ್ನು ಹೊರತುಪಡಿಸಿದರೆ." (ಇಮಾಮ್ ಸುಯೂಥಿಯ ಜಾಮಿವುಸಗೀರ್‌ನಲ್ಲಿ ಇದು ಉಲ್ಲೇಖಿಸಲ್ಪಟ್ಟಿದೆ.)**

ಹದೀಸಿನ ಮೂರು ಗ್ರಂಥಗಳಿಂದ ಆಯ್ದ ಈ ಎರಡು ವಚನಗಳು ಒಂದೇ ಅರ್ಥವನ್ನು ನೀಡುತ್ತಿವೆ. ಈ ಹದೀಸುಗಳ ಮೂಲಕ ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ-ಹಝ್ರತ್ ಅಬೂಬಕರ್ (ರ. ಅ.) ಈ ಸಮುದಾಯದ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಆದರೆ ಈ ಸಮುದಾಯದಲ್ಲಿ ಪ್ರವಾದಿ ಬಂದರೆ ಅವರು ಅವರಿಗಿಂತ ಶ್ರೇಷ್ಠವಾಗುವರು ಎಂದು. ಏಕೆಂದರೆ ಒಬ್ಬ ಪ್ರವಾದಿಯು ಪ್ರವಾದಿಯಲ್ಲದ ವ್ಯಕ್ತಿಗಿಂತ ಎಷ್ಟೋ ಶ್ರೇಷ್ಠರಾಗಿರುವರು. ಈ ಹದೀಸುಗಳು ಬಹಳ ಸ್ಪಷ್ಟವಾಗಿದ್ದು ಅವುಗಳ ಅರ್ಥದ ಬಗ್ಗೆ ಯಾವುದೇ ರೀತಿ ಶಂಕಿಸಲು ಸಾಧ್ಯವಿಲ್ಲದಂತೆ ನಿರೂಪಿಸಲಾಗಿವೆ. ಈ ಹದೀಸುಗಳನ್ನು ನಾವು ರಚಿಸಿರುವುದೇನೂ ಅಲ್ಲ, ನೂರಾರು ವರ್ಷಗಳಿಂದ ಮುಸ್ಲಿಂ ಲೋಕದಲ್ಲಿ ಈ ಹದೀಸುಗಳು ಪ್ರಚಾರಗೊಳ್ಳುತ್ತಾ ಇವೆ. ಈ ಹದೀಸುಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದವರು ಬಹಳ ದೊಡ್ಡ ಮತಪಂಡಿತರಾಗಿರುವರು-ಇಮಾಮ್ ಮನಾವಿ ಮತ್ತು ಇಮಾಮ್ ಸುಯೂಥಿ. ಸತ್ಯಾನ್ವೇಷಿಗಳಾದವರು ಈ ಹದೀಸುಗಳ ಬಗ್ಗೆ ಗಾಢವಾಗಿ ಚಿಂತಿಸುವುದು ಅತ್ಯಾವಶ್ಯಕವಾಗಿದೆ.

### ಕೊನೆಯ ಕಾಲಘಟ್ಟದಲ್ಲಿ ಪ್ರವಾದಿತ್ವದ ಮಾರ್ಗದಲ್ಲಿ ಖಿಲಾಫತ್

ಇಸ್ಲಾಂ ಧರ್ಮದ ವಿವಿಧ ಕಾಲಘಟ್ಟಗಳ ಕುರಿತು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ವಿವರಿಸಿದ ಇನ್ನೊಂದು ಹದೀಸನ್ನು ನಿಮ್ಮ ಮುಂದಿರಿಸುತ್ತೇನೆ. "ಓ ಮುಸ್ಲಿಮರೇ ನುಬುವ್ವತ್ ಕಾಲ ಅದು ಇರಲಿ ಎಂದು ಅಲ್ಲಾಹನು ಇಚ್ಛಿಸುವ ವರೆಗೆ ನಿಮ್ಮಲ್ಲಿ ಮುಂದುವರಿಯುವುದು. ಅನಂತರ ಅದು ಕೊನೆಗೊಳ್ಳುವುದು. ಅನಂತರ ಖಿಲಾಫತ್ ವ್ಯವಸ್ಥೆ ನುಬುವ್ವತ್‌ನ ಮಾರ್ಗದಲ್ಲಿ ಅದು ಇರಲಿ ಎಂದು ಅಲ್ಲಾಹನು ಬಯಸುವ ವರೆಗೆ ಇರುವುದು. (ಈ ಖಿಲಾಫತ್ ಕೊನೆಗೊಳ್ಳುವುದು) ಅನಂತರ ಕ್ರೂರಿಗಳಾದ ದೊರೆಗಳ ಕಾಲ ಬರುವುದು. ಅದು ಸಹ ಅಲ್ಲಾಹನು ಉದ್ದೇಶಿಸುವ ವರೆಗೆ ಮುಂದುವರಿದು ಕೊನೆಗೊಳ್ಳುವುದು. ಅನಂತರ ನಿರಂಕುಶಾಧಿಕಾರಿಗಳ (ಆದರೆ ದೌರ್ಜನ್ಯಕಾರರಲ್ಲದವರ) ಕಾಲ ಬಂದು ಅದು ಸಹ ಅಲ್ಲಾಹನು ನಿರ್ಧರಿಸುವ ವರೆಗೆ ಅಧಿಕಾರ ಪಡೆದು ಕೊನೆಗೊಳ್ಳುವುದು ಅನಂತರ

ಖಿಲಾಫತ್ ನುಬುವ್ವತ್‌ನ ಮಾರ್ಗದಲ್ಲಿ ಸ್ಥಾಪಿತವಾಗುವುದು." ಅನಂತರ ಪ್ರವಾದಿಗಳು ಮೌನವಹಿಸಿದರೆಂದು ಹದೀಸು ನಿವೇದಿಸಿದವರು ಹೇಳುತ್ತಾರೆ.

(ಮುಸ್ನದ್ ಅಹ್ಮದ್ ಸಂಪುಟ 5, ಪುಟ 404)

## ಇಸ್ಲಾಮಿನ ಚರಿತ್ರೆಯ ಸಂಕ್ಷಿಪ್ತ ನಿರೂಪಣೆ

ಈ ಹದೀಸು ಇಸ್ಲಾಮಿನ ಏರು ತಗ್ಗುಗಳ ಚರಿತ್ರೆಯ ಒಂದು ಆಕರ್ಷಕ ಮತ್ತು ಸಂಪೂರ್ಣ ಸಾರಾಂಶವಾಗಿದೆ. ನಮ್ಮ ಅತ್ಯಂತ ಪ್ರಿಯ ನಾಯಕರಾದ ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ರವರು ಬಹಳ ಆಕರ್ಷಕವಾದ ಶೈಲಿಯಲ್ಲಿ ಇದನ್ನು ನಿರೂಪಿಸಿದ್ದಾರೆ. ಪ್ರಥಮವಾಗಿರುವುದು ನುಬುವ್ವತ್ ಕಾಲ; ಅನಂತರ ಬರುವುದು ಖಿಲಾಫತ್ ಕಾಲ. ಆದರೆ ಖಿಲಾಫತ್ ಎಂದರೆ ನಾಮಮಾತ್ರ ಖಿಲಾಫತ್ ಅಲ್ಲ– ಕೆಲವು ರಾಜರು ತಮಗೆ ಇಷ್ಟಬಂದಂತೆ ತಮ್ಮನ್ನು ಖಲೀಫ ಎಂದು ಕರೆದುದಿದೆ. ಅಂತಹ ಖಿಲಾಫತ್‌ನ ಕುರಿತು ಇಲ್ಲಿ ಹೇಳಿದುದಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ಹೇಳಿದ ಖಿಲಾಫತ್ ನುಬುವ್ವತ್ ಮಾರ್ಗದಲ್ಲಿರುವ ಖಿಲಾಫತ್ ಆಗಿದೆ. ಒಬ್ಬ ಸತ್ಯವಂತನಾದ ಪ್ರವಾದಿ ಬಂದನಂತರ ಆ ಪ್ರವಾದಿಗಳ ಕಾರ್ಯವನ್ನು ನೆರವೇರಿಸುತ್ತಾ ಇರಲು ಅಲ್ಲಾಹನು ಮಾಡುವ ಏರ್ಪಾಡು "ಖಿಲಾಫತ್ ಅಲಾ ಮಿನ್‌ಹಾಜಿ ನುಬುವ್ವತ್" ಎಂದರೆ ನುಬುವ್ವತ್ ಮಾರ್ಗದಲ್ಲಿರುವ ಖಿಲಾಫತ್. ನಮ್ಮ ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ರವರ ಅನಂತರ ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಅಲಿ (ರ. ಅಲೈಹಿಮ್) ರವರ ಖಿಲಾಫತ್ ಸ್ಥಾಪಿತವಾದ ರೀತಿಯಲ್ಲಿರುವ ಖಿಲಾಫತ್ ಇಲ್ಲಿ ಉದ್ದೇಶಿಸಲಾಗಿದೆ. ಇಂತಹ ಖಿಲಾಫತ್ ಕೊನೆಗೊಂಡ ನಂತರ ದೌರ್ಜನ್ಯಕಾರರಾದ ಕ್ರೂರಿ ದೊರೆಗಳ ರಾಜ್ಯಭಾರ ನಡೆಯಿತು. ಆ ಕಾಲದಲ್ಲಿಯೇ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರ ಪೌತ್ರರಾದ ಹಝ್ರತ್ ಹುಸೈನ್ (ರ. ಅ.) ಮತ್ತು ಪೈಗಂಬರರ ಕುಟುಂಬದ ಎಷ್ಟೆಷ್ಟೋ ಜನರು ದೌರ್ಜನ್ಯಕ್ಕೊಳಗಾದರು. ಇದೇ ಕಾಲದಲ್ಲಿ ಹಝ್ರತ್ ಅಬೂಬಕರ್ (ರ. ಅ.)ರವರ ಮೊಮ್ಮಗ ಹಝ್ರತ್ ಅಬ್ದುಲ್ಲಾಹಿಬ್ನು ಝುಬೈರ್ ಸಹ ರಕ್ತಸಾಕ್ಷಿಗಳಾದರು. ಇದೇ ಕಾಲದಲ್ಲಿ ಹಜ್ಜಾಜ್ ಬಿನ್ ಯೂಸುಫ್ ಎಂಬ ರಕ್ತಪಿಪಾಸು ಕ್ರೂರಿಯ ಖಡ್ಗದಿಂದಾಗಿ ಸಾವಿರಾರು ನಿರಪರಾಧಿಗಳಾದ ಮುಸ್ಲಿಮರು ಸಂಹರಿಸಲ್ಪಟ್ಟರು. ಆ ಕಾಲ ದೌರ್ಜನ್ಯಕಾರರ ಕಾಲವಾಗಿತ್ತು. ಆ ಕಾಲದಲ್ಲಿ ದೌರ್ಜನ್ಯಕಾರರ ನಿರ್ದಯಿ ಹಲ್ಲುಗಳು ನಿರಪರಾಧಿಗಳ ಮಾಂಸ ಕಚ್ಚಿ ಚೂರು ಚೂರು ಮಾಡುವುದರಲ್ಲಿ ಮಗ್ನವಾಗಿದ್ದುವು.

ಅನಂತರ ದೌರ್ಜನ್ಯಕಾರರಲ್ಲವಾದರೂ ತಮ್ಮ ಇಷ್ಟದಂತೆ ರಾಜ್ಯಭಾರ ನಡೆಸುವವರ ಕಾಲ ಬಂದಿತು. ಅವರು ಹಿಂದಿನವರಷ್ಟು ಅನ್ಯಾಯ ಮಾಡದಿದ್ದರೂ ಪ್ರಜಾಭಿಪ್ರಾಯಗಳನ್ನು ಅರಿತುಕೊಂಡು ರಾಜ್ಯಭಾರ ನಡೆಸಲು ಮುಂದಾಗಲಿಲ್ಲ. ಅವರು ವಂಶ ಪಾರಂಪರ್ಯದ ಕಾರಣದಿಂದ ಅಥವಾ ತಮ್ಮ ಶಕ್ತಿಯ ಬಲದಿಂದ ಅಧಿಕಾರದಲ್ಲಿ ಮುಂದುವರಿದರು. ಈ ರೀತಿಯ ಆಡಳಿತ ವ್ಯವಸ್ಥೆ ಹಲವು ಶತಮಾನಗಳಷ್ಟು ಕಾಲ ನಡೆಯಿತು. ಆ ಕಾಲದಲ್ಲಿ ಯಝೀದ್ ಬಿನ್ ಮುಆವಿಯಾ ಮತ್ತು ಹಜ್ಜಾಜ್ ಬಿನ್ ಯೂಸುಫ್ ಅವರ ಕಾಲದ ಅನ್ಯಾಯಗಳು ನಡೆಯದಿದ್ದರೂ ಅದೊಂದು ನಿರಂಕುಶಾಧಿಕಾರದ ಕಾಲವಾಗಿದ್ದಿತು. ಸರಿಯಾದ ಇಸ್ಲಾಮಿಕ ಆಡಳಿತ ವ್ಯವಸ್ಥೆ ಆ ಕಾಲದಲ್ಲಿ ಇರಲಿಲ್ಲ.

## ನುಬುವ್ವತ್ ಮತ್ತು ಖಿಲಾಫತ್‌ನ ಎರಡನೆಯ ಕಾಲಘಟ್ಟ

ಮೇಲೆ ವಿವರಿಸಲಾದ ಕಾಲಗಳ ನಂತರ ಬರಲಿರುವ ಕಾಲದ ಬಗ್ಗೆ ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ಹೇಳಿದುದು "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್" (ನುಬುವ್ವತ್ ಮಾರ್ಗದಲ್ಲಿ ಸ್ಥಾಪಿತವಾದ ಖಿಲಾಫತ್) ಎಂದಾಗಿದೆ. ಎಂದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ (ಸ)ರ ಅನುಯಾಯಿಗಳಲ್ಲಿ ತನ್ನ ಸಾಮಿಪ್ಯವನ್ನು ಗಳಿಸಿದವರಲ್ಲೊಬ್ಬರಿಗೆ ಉಮ್ಮತೀ ನಬಿಯ ಸ್ಥಾನವನ್ನು ನೀಡಿ ಪುನಃ ಅವರ ಮೂಲಕ ಇಸ್ಲಾಮಿಕ ಖಿಲಾಫತ್ ವ್ಯವಸ್ಥೆಯನ್ನು ಜಾರಿಗೊಳಿಸುವನೆಂದಾಗಿದೆ. ಈ ಹದೀಸು

ಎಷ್ಟು ಸ್ಪಷ್ಟವಾಗಿ ನಿರೂಪಿಸುತ್ತಿದೆ! ಇಸ್ಲಾಮಿನಲ್ಲಿ ಆದಿ ಕಾಲದಲ್ಲಿ ನುಬುವ್ವತ್ ಮಾರ್ಗದಲ್ಲಿ ಖಿಲಾಫತ್ ಸ್ಥಾಪಿತವಾದ ಹಾಗೆಯೇ ಕೊನೆಯ ಕಾಲದಲ್ಲೂ ಪುನಃ ಅದೇ ರೀತಿ ಖಿಲಾಫತ್ ಸ್ಥಾಪಿತವಾಗುವುದುಂ. ಎಂದರೆ ಹಝ್ರತ್ ಮುಹಮ್ಮದ್ ರಸೂಲ್ (ಸ) ರವರ ಅನುಯಾಯಿಗಳಲ್ಲಿಯೇ ಒಬ್ಬರು ಶಿಷ್ಯ ಪ್ರವಾದಿಯ ಸ್ಥಾನವನ್ನು ಪಡೆದು ಆಗಮಿಸುವರೆಂದೂ ಅನಂತರ ಅವರ ಕಾಲಾನಂತರ ಖಿಲಾಫತ್ ಪುನಃ ಸ್ಥಾಪಿತವಾಗುವುದೆಂದೂ ಎಷ್ಟು ಸ್ಪಷ್ಟವಾಗಿ ನಿರೂಪಿಸಲಾಗಿದೆ! ಈ ಹದೀಸಿನ ಮಾತುಗಳನ್ನು ಹೇಳಿದ ನಂತರ ಹಝ್ರತ್ ಮುಹಮ್ಮದ್ ರಸೂಲ್ (ಸ) ಮೌನವಹಿಸಿದರೆಂದು ಈ ಹದೀಸಿನ ವರದಿಗಾರರು ಹೇಳುತ್ತಾರೆ. ಹೊಸ ಖಿಲಾಫತ್ ಸ್ಥಾಪನೆಯಿಂದ ಇಸ್ಲಾಮಿನ ಚರಿತ್ರೆಯು ಪ್ರಥಮ ಕಾಲಘಟ್ಟ ಕೊನೆಗೊಂಡು ಹೊಸದಾದೊಂದು ಕಾಲಘಟ್ಟಕ್ಕೆ ಪ್ರವೇಶಿಸಿದಂತಾಗುತ್ತದೆ ಎಂಬುದರ ಬಗ್ಗೆ ಇದು ಸೂಚನೆಯಾಗಿದೆ. ಈ ಹೊಸ ಕಾಲಘಟ್ಟ ಅಹ್ಮದಿಯಾ ಜಮಾಅತಿನ ದಿವ್ಯ ಸ್ಥಾಪಕರ ಆಗಮನದೊಂದಿಗೆ ಪ್ರಾರಂಭವಾಗಿದೆ. ಹದೀಸಿನ ಪ್ರಸಿದ್ಧ ಗ್ರಂಥವಾದ "ಮಿಶ್ಕಾತ್"ನಲ್ಲೂ ಈ ಹದೀಸು ಉಲ್ಲೇಖಿಸಲ್ಪಟ್ಟು ಹೀಗೆ ಟಿಪ್ಪಣಿ ಕೊಡಲಾಗಿದೆ:

الظّاھر انّ المراد بہ زمن عیسی والمھدی

"ಇದರಿಂದ ಉದ್ದೇಶಿಸಿರುವುದು ಈಸಾ ಮತ್ತು ಮಹ್‌ದಿಯ ಕಾಲವನ್ನಾಗಿದೆ ಎಂದು ಸ್ಪಷ್ಟ". (ಮಿಶ್ಕಾತ್, ಅಸಹ್ಹುಲ್ ಮಥಾಬಅ್, ಕರಾಚಿ ಪುಟ 461).

ಇದು ಎಂತಹ ಸ್ಪಷ್ಟವಾದ ವಿವರಣೆಯಾಗಿದೆ ನೋಡಿರಿ.

**ಹಝ್ರತ್ ಉಮರಿಬ್ನು ಅಬ್ದುಲ್ ಅಝೀಝ್ ಈ ಭವಿಷ್ಯವಾಣಿಯನ್ನು ನೆರವೇರಿಸುವುದಿಲ್ಲ**

ಹಝ್ರತ್ ಉಮರಿಬ್ನು ಅಬ್ದುಲ್ ಅಝೀಝ್ ರವರು ಅಧಿಕಾರಕ್ಕೆ ಬಂದು ಅವರು ಸ್ಥಾಪಿಸಿದ ಉಮವೀ ಖಿಲಾಫತ್ ಈ ಹದೀಸಿನ ಉದ್ದೇಶವನ್ನು ನೆರವೇರಿಸಿದೆಯೆಂದು ಯಾರಾದರೂ ಸಂಶಯಪಡುವುದಾದರೆ ಅದು ಸರಿಯಾಗಲಾರದು. ಖಿಲಾಫತ್ ಅಲಾ ಮಿನ್‌ಹಾಜಿನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಖಿಲಾಫತ್) ಎಂಬುದರ ಉದ್ದೇಶ ಅದೊಂದು ವ್ಯವಸ್ಥೆಗೊಳಪಟ್ಟು ದೀರ್ಘಕಾಲ ಜಾರಿಯಲ್ಲಿರುವುದೆಂದು ಸೂಚಿಸುತ್ತದೆ. ಆದರೆ ಹಝ್‌ರತ್ ಉಮರಿಬ್ನು ಅಬ್ದುಲ್ ಅಝೀಝ್‌ರ ಖಿಲಾಫತ್ ಎರಡು ಅಥವಾ ಎರಡೂ ಕಾಲು ವರ್ಷ ಜಾರಿಯಲ್ಲಿದ್ದಿತು. ಅನಂತರ ಕೊನೆಗೊಂಡಿತು. (ಥಬರೀ ಮತ್ತು ಇಬ್ನು ಕಸೀರರ ತಾರೀಖೆ ಕಾಮಿಲ್). ಹಝ್‌ರತ್ ಮುಹಮ್ಮದ್ ರಸೂಲ್ (ಸ) ರು ಇಷ್ಟು ಅಲ್ಪಾವಧಿಯ, ಒಬ್ಬ ವ್ಯಕ್ತಿಯಲ್ಲಿ ಕೊನೆಗೊಂಡ ಖಿಲಾಫತ್ ಕುರಿತು ಹೊಸದಾದೊಂದು ಖಿಲಾಫತ್ ಕಾಲಘಟ್ಟದ ಹಾಗೆ ಹೇಳಿರುವುದಾಗಿ ಭಾವಿಸುವುದು ಸರಿಯಾಗಲಾರದು. ಪ್ರತಿಯೊಬ್ಬ ಚರಿತ್ರೆಗಾರರಿಗೆ ತಿಳಿದದೆ – ಹಝ್‌ರತ್ ಉಮರಿಬ್ನು ಅಬ್ದುಲ್ ಅಝೀಝ್‌ರ ಖಿಲಾಫತ್ ಮೊದಲು ವಿವರಿಸಿದ ದೌರ್ಜನ್ಯಕಾರರಾದ ಮತ್ತು ನಿರಂಕುಶಾಧಿಕಾರಿಗಳಾದ ದೊರೆಗಳ ಮಧ್ಯದಲ್ಲಿದ್ದ ಮತ್ತು ಅವರೊಳಗೆ ಸ್ಥಳಾವಕಾಶ ಪಡೆದು ಸ್ಥಾಪಿಸಿದ ಖಿಲಾಫತ್ ಆಗಿದ್ದಿತು ಎಂದು. ಅದು ಎರಡು ರೀತಿಯ ರಾಜರುಗಳ ಅನಂತರ ಸ್ಥಾಪಿತವಾದ ಖಿಲಾಫತ್ ಆಗಿರಲಿಲ್ಲ. ಆದರೆ ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ.) ವಿವರಿಸಿರುವ ಖಿಲಾಫತ್ ಎರಡು ರೀತಿಯ ರಾಜ್ಯಾಡಳಿತಗಳ ಅನಂತರ ಬರುವ ಖಿಲಾಫತ್ ಬಗ್ಗೆಯಾಗಿದೆ. ಹಝ್‌ರತ್ ಉಮರಿಬ್ನು ಅಬ್ದುಲ್ ಅಝೀಝರ ಖಿಲಾಫತ್ ಆ ರೀತಿಯದಾಗಿರಲಿಲ್ಲ.

ಒಟ್ಟಾರೆ ಹೇಳುವುದಾದರೆ, ಮೇಲೆ ವಿವರಿಸಿದ ಹದೀಸು ಮುಸ್ಲಿಮರಲ್ಲಿ "ಖಿಲಾಫತ್ ಅಲಾ ಮಿನ್ ಹಾಜಿನ್ನುಬುವ್ವತ್" – "ನುಬುವ್ವತ್ ಮಾರ್ಗದಲ್ಲಿ ಸ್ಥಾಪಿತವಾದ ಖಿಲಾಫತ್" – ಬಗ್ಗೆ ವಾಗ್ದಾನ ನೀಡುತ್ತದೆ. ಆದುದರಿಂದ ಸತ್ಯನಿಷ್ಠವಾದ ಈ ಖಿಲಾಫತ್ ಸ್ಥಾಪಿತವಾಗಬೇಕಾದರೆ ಯಾವುದಾದರೂ ಶಿಷ್ಯಪ್ರವಾದಿ (ಉಮ್ಮತೀ ನಬಿ) ಬರುವುದು ಅತ್ಯಾವಶ್ಯಕವಾಗಿದೆ.

### ಈ ಹದೀಸಿನಲ್ಲಿ ಖಿಲಾಫತ್ ಜೊತೆ ನುಬುವ್ವತ್ ಬಗ್ಗೆಯೂ ಹೇಳಲಾಗಿದೆ

ಗಾಢವಾಗಿ ಚಿಂತಿಸದೆ ಮಾತಾಡುವವರು ಈ ಹದೀಸಿನ ಬಗ್ಗೆ ಬೇಗನೆ ಅಭಿಪ್ರಾಯಭಿನ್ನತೆ ಸೂಚಿಸುತ್ತಾ ಹೇಳುತ್ತಾರೆ– ಈ ಹದೀಸಿನಲ್ಲಿ ಖಿಲಾಫತ್ ಬಗ್ಗೆ ಹೇಳಲಾಗಿದೆ; ನುಬುವ್ವತ್ ಬಗ್ಗೆ ಹೇಳಿಲ್ಲ ಎಂದು. ಆದರೆ ಅವರು ಈ ಹದೀಸನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಹೇಳಿದುದು "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್" ಎಂದಾಗಿದೆ. ಎಂದರೆ "ನುಬುವ್ವತ್ ಮಾರ್ಗದಲ್ಲಿ ಸ್ಥಾಪಿತವಾದ ಖಿಲಾಫತ್" .ಅಥವಾ "ನುಬುವ್ವತ್‌ನ ಅನಂತರ ಬರಲಿರುವ ಖಿಲಾಫತ್". ಈ ರೀತಿಯು ಖಿಲಾಫತ್ ಬಗ್ಗೆ ಹೇಳುವಾಗ ನುಬುವ್ವತ್ತಿನ ಸಂಗತಿ ಇದರಲ್ಲಿ ಅಡಕವಾಗಿದೆ. ಅದನ್ನು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ. ಆದರೆ ನುಬುವ್ವತ್ ಇಲ್ಲದೆ ಖಿಲಾಫತ್ ಸ್ಥಾಪಿಸುವುದಾದರೂ ಹೇಗೆ? ಆದರೆ ನಮ್ಮ ವಿರೋಧಿಗಳು ಇದರ ಬಗ್ಗೆ ಚೆನ್ನಾಗಿ ಚಿಂತಿಸಿಲ್ಲ. ನಾವು ಇಲ್ಲಿ ಹೊಸದಾಗಿ ನುಬುವ್ವತ್ ಮಾರ್ಗದಲ್ಲಿ ಖಿಲಾಫತ್ ಸ್ಥಾಪನೆಯಿಂದ ಉದ್ದೇಶಿಸಿರುವುದು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅ. ಸ.) ಸ್ಥಾಪಿಸಿದ ಖಿಲಾಫತ್ ಆಗಿದೆ. ಆದರೆ ಅವರು ಹಝ್ರತ್ ಮುಹಮ್ಮದ್ ರಸೂಲ್ (ಸ)ರ ಶಿಷ್ಯಪ್ರವಾದಿ (ಉಮ್ಮತೀ ನಬಿ)ಯ ವಾದವನ್ನು ಮಾತ್ರ ಮಾಡಿರುವರು. ಅದು ಹಝ್ರತ್ ಮುಹಮ್ಮದ್ ರಸೂಲ್ (ಸ) ರ ನುಬುವ್ವತ್‌ನ ಭಾಗವಾಗಿದ್ದು ಆ ನುಬುವ್ವತ್‌ನ ಪ್ರತಿಬಿಂಬವಾಗಿದೆ. ಆದುದರಿಂದ ಇಲ್ಲಿ ಪ್ರತ್ಯೇಕವಾಗಿ ನುಬುವ್ವತ್ ಬಗ್ಗೆ ಹೇಳುವ ಅಗತ್ಯವಿಲ್ಲ. ಪವಿತ್ರ ಖುರ್‌ಆನ್ ಸಹ ಸೂರಃ ಜುಮುಅ 3 ಮತ್ತು 4ನೇ ವಚನಗಳಲ್ಲಿ ಈ ಬಗ್ಗೆ ಈ ರೀತಿ ಸೂಚಿಸಿದೆ:

هوالذی بعث فی الاُمّیین رَسولاً ........
وآخرینَ منهم لمّا یلحقوا بهم

"ಮತ್ತು ಆತನೇ ನಿರಕ್ಷರಿಗಳಾದ ಕೋಮಿನವರಿಗೆ ಅವರಿಂದಲೇ ಒಬ್ಬನನ್ನು ಪ್ರವಾದಿಯನ್ನಾಗಿ ಮಾಡಿ ಕಳುಹಿಸಿದನು..................

"ಮತ್ತು (ಆತನನ್ನು) ಅವರೊಂದಿಗೆ ಇನ್ನೂ ಸೇರಿರದ ಇನ್ನೊಂದು ಕೋಮಿನಲ್ಲೂ (ಅವನು ಕಳುಹಿಸುವನು)."

ಇಲ್ಲಿ ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಎರಡನೆಯ ಬರುವಿಕೆಯ ಬಗ್ಗೆ ಸೂಚಿಸಲಾಗಿದೆ. ಆ ಬರುವಿಕೆಯು ಅವರ ಶಿಷ್ಯಪ್ರವಾದಿ (ಉಮ್ಮತೀ ನಬಿ)ಯ ರೂಪದಲ್ಲಿರುವುದು. ಆದರೆ ಇದನ್ನು ಪೈಗಂಬರರ ಮೊದಲಿನ ಶಿಷ್ಯರೊಂದಿಗೆ ಇನ್ನೂ ಸೇರಿರದವರಲ್ಲಿ ನಿಯುಕ್ತರನ್ನಾಗಿ ಮಾಡುವ ಬಗ್ಗೆ ಹೇಳಲಾಗಿದೆ. ಕೊನೆಯ ಕಾಲದಲ್ಲಿ ಬರಲಿರುವ ಪ್ರವಾದಿ ಬೇರೆಯೇ ಒಬ್ಬ ಪ್ರವಾದಿಯಲ್ಲ. ತನ್ನದೇ ಪ್ರತಿರೂಪ ಎಂದು ಇಲ್ಲಿ ಸೂಚಿಸಲಾಗಿದೆ. ಹಾಗೆ ಬರಲಿರುವ ಪ್ರವಾದಿ ಮುಹಮ್ಮದ್ ಪೈಗಂಬರ್ (ಸ) ರ ದಾಸರೂ ಅವರ ಶಿಷ್ಯರೂ, ಅವರದೇ ನೆರಳಿನ ರೂಪದಲ್ಲಿಯೂ ಇರುವರು. ಏಕೆಂದರೆ ಖಾತಮುನ್ನಬಿಯ್ಯೀನ್‌ರ ಆಗಮನದ ನಂತರ ಬೇರೆ ಯಾವುದೇ ಹೊಸ ಪ್ರವಾದಿಯ ಆಗಮನಕ್ಕೆ ಅವಕಾಶವಿರುವುದಿಲ್ಲ. ಆದರೆ ಬರಲಿರುವ ವ್ಯಕ್ತಿ ಮುಹಮ್ಮದ್ ಪೈಗಂಬರರ ಸೇವಕರೂ ಅವರ ಪ್ರಕಾಶದಿಂದ ಪ್ರಕಾಶ ಪಡೆದವರೂ ಆಗಿರುವರು. ಅವರು ಸ್ವತಂತ್ರವಾಗಿ ನುಬುವ್ವತ್ ಪಡೆದವರಾಗಿರಲಾರರು. ಹದಿನಾಲ್ಕನೆಯ ರಾತ್ರೆಯ ಚಂದ್ರಮ ಎಷ್ಟು ಪ್ರಕಾಶಮಾನವಾದರೂ ಎಷ್ಟು ಆಕರ್ಷಕವಾಗಿದ್ದರೂ ಅದರ ಪ್ರಕಾಶ ಸೂರ್ಯನ ಪ್ರಕಾಶದ ಅಂಶವೂ ಪ್ರತಿಬಿಂಬವೂ ಆಗಿರುತ್ತದೆ. ಅದಕ್ಕೆ ಸ್ವಯಂ ಯಾವುದೇ ಪ್ರಭೆಯಿರುವುದಿಲ್ಲ. ಇದೇ ಸತ್ಯಸಂಗತಿಯ ಬಗ್ಗೆ ಸೂಚಿಸುತ್ತಾ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿರುವರು:

اُس نور پر فدا ہوں اُس کا ہی میں ہوا ہوں
وہ ہے میں چیز کیا ہوں بس فیصلہ یہی ہے

ಆ ಪ್ರಕಾಶಕ್ಕೆ ನಾನು ಮೋಹಿತನಾಗಿದ್ದೇನೆ.
ನಾನು ಅದರದ್ದೇ ಆಗಿಬಿಟ್ಟಿದ್ದೇನೆ.
ಅದೇ ಯಥಾರ್ಥವಾದುದು; ನಾನು ನಿಸ್ಸಾರನು.
ಇದೇ ತೀರ್ಮಾನವಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಹದೀಸಿನಲ್ಲೂ ಕೊನೆಯ ಕಾಲದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರ ಸೇವಕರಲ್ಲಿ ಒಬ್ಬ ಪೈಗಂಬರರ ನೆರಳಿನ ರೂಪದ ಉಮ್ಮತೀ ನಬಿ ಜನಿಸುವರೆಂದು ಸ್ಪಷ್ಟವಾಗುತ್ತದೆ. ಆ ಉಮ್ಮತೀ ನಬಿಯ ನಂತರ ಪುನಃ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಖಿಲಾಫತ್) ಸ್ಥಾಪಿತವಾಗುವುದು.

## ಬರಲಿರುವ ಮಸೀಹರನ್ನು ಹದೀಸಿನಲ್ಲಿ ನಬಿಯೆಂದು ಹೇಳಲಾಗಿದೆ

ಕೊನೆಗಾಲದಲ್ಲಿ ಬರಲಿರುವ ಮಸೀಹರನ್ನು "ನಬಿ" (ಪ್ರವಾದಿ) ಎಂದು ಕರೆಯಲಾಗಿದೆ. ನೋಡಿರಿ:

"ಅಬೂಹುರೈರ (ರ. ಅ.) ವರದಿ ಮಾಡುತ್ತಾರೆ– ಹಝ್ರತ್ ರಸೂಲ್ (ಸ) ಹೇಳಿದರು: ನನ್ನ ಮತ್ತು ಅವರ (ಬರಲಿರುವ ಮಸೀಹರ) ಮಧ್ಯೆ ಯಾವುದೇ ಪ್ರವಾದಿಯಿಲ್ಲ. ಮಸೀಹ್ ನಿಶ್ಚಯವಾಗಿಯೂ ಬರುವರು; ಅವರು ಬಂದಾಗ ನೀವು ನೋಡುತ್ತಲೇ ಗುರುತಿಸಿರಿ. ಅವರು ಮಧ್ಯಮ ಎತ್ತರದವರಾಗಿರುವರು. ಅವರ ಮೈಬಣ್ಣ ಕೆಂಪಿನ ಛಾಯೆಯನ್ನು ಹೊಂದಿದ ಬಿಳಿಯದಾಗಿರುವುದು......... ಅವರು ಇಸ್ಲಾಮಿನ ಪರವಾಗಿ ವಿರೋಧಿಗಳೊಂದಿಗೆ ಹೋರಾಡುವರು. ಅವರು ಶಿಲುಬೆಯನ್ನು ಒಡೆಯುವರು. ಮತ್ತು ಹಂದಿಗಳನ್ನು ನಾಶಗೊಳಿಸುವರು. (ಶಿಲುಬೆಯ ಮತದ ಪ್ರಾಬಲ್ಯವನ್ನು ಕುಗ್ಗಿಸುವರು; ಹಂದಿಯ ಹಾಗಿರುವ ಕೊಳಕು ಸ್ವಭಾವ ಹೊಂದಿದವರನ್ನು ಪರಿಶುದ್ಧಗೊಳಿಸುವರು) ಆ ಕಾಲದಲ್ಲಿ ಧರ್ಮ ರಕ್ಷಣೆಗಾಗಿ ಖಡ್ಗ ಪ್ರಯೋಗದ ಯುದ್ಧಗಳು ಕೊನೆಗೊಂಡಿರುವುದರಿಂದ ಜಿಝಿಯಾ ತೆರಿಗೆಯೂ ಇಲ್ಲದಾಗುವುದು." (ಅಬೂ ದಾವೂದ್)

ಈ ಹದೀಸಿನ ಬಗ್ಗೆ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಈ ಹದೀಸು ಎಷ್ಟು ಸ್ಪಷ್ಟವಾಗಿದೆ! لیس بینی و بینہ نبی "ನನ್ನ ಮತ್ತು ಅವರ ಮಧ್ಯೆ ಪ್ರವಾದಿಯಿಲ್ಲ" ಎಂದರೆ ಬರಲಿರುವ ಮಸೀಹರು ಮಾತ್ರ ಪ್ರವಾದಿ ಆಗಿರುವರೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಇನ್ನೊಂದು ಸಂಗತಿ ಸಹ ಸ್ಪಷ್ಟವಾಗುತ್ತದೆ– ಹಝ್ರತ್ ಮುಹಮ್ಮದ್ ರಸೂಲ್ (ಸ) ಮತ್ತು ಮಸೀಹರ ಆಗಮನದ ಮಧ್ಯಾವಧಿಯಲ್ಲಿ ಬೇರೆ ಯಾವುದೇ ನಬಿ ಬರಲಾರರೆಂದು. ಆದುದರಿಂದ ಯಾರಾದರೂ ಹಾಗೆ ವಾದಿಸಿದ್ದರೆ ಹಾಗೆ ವಾದಿಸಿದವ ಸತ್ಯವಾದಿಯಾಗಿರಲು ಸಾಧ್ಯವಿಲ್ಲ. ಆತನನ್ನು ಸ್ವೀಕರಿಸಬಾರದು.

ಬರಲಿರುವ ಮಸೀಹರನ್ನು ನಬಿ ಎಂದು ಕರೆದಿರುವ ಇನ್ನೊಂದು ಹದೀಸು ಹದೀಸಿನ ಪ್ರಸಿದ್ಧ ಗ್ರಂಥವಾದ "ಸಹೀಹ್ ಮುಸ್ಲಿಮ್"ನಲ್ಲಿ ಈ ರೀತಿ ಇದೆ;

ಅಲ್ಲಾಹನ ನಬಿಯಾದ ಮಸೀಹರು ಮತ್ತು ಶಿಷ್ಯರು ಶತ್ರುಗಳ ಬಂಧನಕ್ಕೊಳಗಾಗುವರು;......... ಅನಂತರ ಅಲ್ಲಾಹನ ನಬಿಯಾದ ಮಸೀಹರು ಮತ್ತು ಶಿಷ್ಯರು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುವರು;...... ಆಮೇಲೆ ಅಲ್ಲಾಹನ ನಬಿಯಾದ ಮಸೀಹರು ಮತ್ತು ಶಿಷ್ಯರು ಕಷ್ಟದಿಂದ ಬಿಡುಗಡೆ ಪಡೆಯುವರು. ವಿರೋಧಿಗಳ ಮೇಲೆ ಆಕ್ರಮಣ ಮಾಡುವರು ಮತ್ತು ಪುನಃ ಕಷ್ಟಕ್ಕೊಳಗಾಗುವರು......... ಪುನಃ ಅಲ್ಲಾಹನ ನಬಿಯಾದ ಮಸೀಹರು ಮತ್ತು ಶಿಷ್ಯರು ಪುನಃ ಅಲ್ಲಾಹನೊಡನೆ ಪ್ರಾರ್ಥಿಸುವರು............"

(ಮುಸ್ಲಿಮ್ – ಬಾಬ್ ಝಿಕ್ರುದ್ದಜ್ಜಾಲ್)

ಈ ಹದೀಸಿನಲ್ಲಿ ಬರಲಿರುವ ಮಸೀಹರನ್ನು ನಾಲ್ಕು ಸಲ ನಬಿ (ಪ್ರವಾದಿ) ಎಂದು ಹೇಳಲಾಗಿದೆ. ಆದುದರಿಂದ ಬರಲಿರುವ ಮಸೀಹರು ನಬಿಯಾಗಿರುವರೆಂಬುದಕ್ಕೆ ಯಾವುದೇ ಸಂಶಯವಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ (ಸ) ಕೊನೆಯ ಶರೀಅತ್ ತಂದ ಪ್ರವಾದಿಯಾದ ಕಾರಣ ಬೇರೆ ಯಾವುದೇ ನಬಿ ಬರಲಾರರೆಂಬ ನಂಬಿಕೆ ನಿವಾರಿಸಲಿಕ್ಕಾಗಿಯೇ ಮಸೀಹರನ್ನು ಇಲ್ಲಿ ನಾಲ್ಕು ಸಲ ಅಲ್ಲಾಹನ ನಬಿಯೆಂದು ಒತ್ತಿ ಹೇಳಲಾಗಿದೆ. ಇದರಿಂದ ತಿಳಿಯುವುದೇನೆಂದರೆ ಬರಲಿರುವ ಮಸೀಹರಿಂದ ತನ್ನ ನುಬುವ್ವತ್ ಪದವಿಗೆ ಚ್ಯುತಿ ಬರುವುದೆಂದು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಭಾವಿಸಿರಲಿಲ್ಲ, ಯಾಕೆಂದರೆ ಬರಲಿರುವ ಮಸೀಹರು ಅವರದೇ ಸೇವಕರೂ ಅವರ ಆಜ್ಞಾನುವರ್ತಿಯೂ ಅವರಿಂದ ಅನುಗ್ರಹ ಪಡೆದವರೇ ಆಗುವರು.

## ಮುಬಶ್ಶಿರಾತ್ ಜಾರಿಯಲ್ಲಿರುವುದು

ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಒಂದು ಹದೀಸನ್ನು ನಮ್ಮ ವಾದದ ವಿರುದ್ಧ ಕೆಲವರು ಮುಂದಿಡುತ್ತಾರೆ. ಆ ಹದೀಸು ಹೀಗಿದೆ:

لم يبق من النبوة الا المبشرات قالوا وما
المبشرات قال الرؤيا صالحة

ಹಝ್ರತ್ ಮುಹಮ್ಮದ್ ರಸೂಲ್ (ಸ) ಹೇಳಿದರು: ನುಬುವ್ವತ್‌ನಲ್ಲಿ ಮುಬಶ್ಶಿರಾತ್ ಹೊರತು ಬೇರೆ ಏನೂ ಬಾಕಿಯಾಗಿಲ್ಲ. ಆಗ ಶಿಷ್ಯರು ಕೇಳಿದರು; "ಮುಬಶ್ಶಿರಾತ್" ಎಂದರೇನು? ಅವರು ಹೇಳಿದರು; ಉತ್ತಮವಾದ ಸ್ವಪ್ನಗಳು. (ಸಹೀಹ್ ಬುಖಾರಿ, ಅಬ್ವಾಬುರ್ರುಯಾ)

ಇದೇ ಹದೀಸು ಹೀಗೆ ಸಹ ವರದಿಯಾಗಿದೆ:

ಹಝ್ರತ್ ಮುಹಮ್ಮದ್ ರಸೂಲ್ (ಸ) ಅಸ್ವಸ್ಥರಾಗಿದ್ದಾಗ – ಇದೇ ಅಸ್ವಸ್ಥತೆಯಲ್ಲಿ ಅವರು ಮೃತರಾಗಿದ್ದರು– ಒಂದು ದಿನ ತಮ್ಮ ಕಾಯಿಲೆ ಉಲ್ಬಣಗೊಂಡ ಕಾರಣ ತಲೆಗೆ ಬಟ್ಟೆ ಕಟ್ಟಿಕೊಂಡಿದ್ದರು. ಅವರು ಬಾಗಿಲಿನ ಪರದೆಯನ್ನು ಸರಿಸಿ ನೋಡುವಾಗ ಹಝ್ರತ್ ಅಬೂಬಕರ್ ಜನರನ್ನು ಸಾಲಾಗಿ ನಿಲ್ಲಿಸಿ ಪ್ರಾರ್ಥನೆಗೆ ಸಿದ್ಧರಾಗಿ ನಿಂತಿದ್ದರು. ಆಗ ಪೈಗಂಬರರು ಹೇಳಿದರು: ಈಗ ನುಬುವ್ವತ್‌ನಲ್ಲಿ ಬರೇ ಮುಬಶ್ಶಿರಾತ್ ಬಾಕಿಯಾಗಿದೆ. (ಸಹೀಹ್ ಮುಸ್ಲಿಮ್ ಮತ್ತು ಅಬೂದಾವೂದ್)

ಈ ಹದೀಸಿನ ಆಧಾರದ ಮೇಲೆ ನಮ್ಮ ವಾದವನ್ನು ವಿರೋಧಿಸುವವರು, ನುಬುವ್ವತ್ ಸಂಪೂರ್ಣ ಕೊನೆಗೊಂಡಿದೆ; ಮುಸ್ಲಿಮರಿಗೆ ಕೇವಲ ಒಳ್ಳೆಯ ಸ್ವಪ್ನಗಳು ಮಾತ್ರವುಂಟಾಗುವುದು ಎಂದು ಹೇಳುತ್ತಾರೆ. ಆದರೆ ಯಥಾರ್ಥವಾಗಿ ಈ ಹದೀಸು ನಮ್ಮ ವಾದವನ್ನೇ ಪುರಸ್ಕರಿಸುತ್ತಿದೆ. ಇನ್ನು ಮುಂದೆ ಶರೀಅತ್ ತರುವ ನುಬುವ್ವತ್ ಮತ್ತು ಸ್ವತಂತ್ರ ನುಬುವ್ವತ್ ಉಂಟಾಗಲಾರದೆಂದೂ ಉಮ್ಮತೀ ನುಬುವ್ವತ್ ಮಾತ್ರ ಬಾಕಿಯಾಗುವುದೆಂದೂ ಅದು ಹಝ್ರತ್ ಮುಹಮ್ಮದ್ ರಸೂಲ್ (ಸ) ರನ್ನು ಹಿಂಬಾಲಿಸುವವರಿಗೆ ಮಾತ್ರ ದೊರಕುವುದೆಂದೂ ಈ ಹದೀಸಿನಿಂದ ಸ್ಪಷ್ಟವಾಗುತ್ತದೆ.

ಈ ಹದೀಸು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ತನ್ನ ಕೊನೆಯ ಅಸ್ವಸ್ಥತೆಯ ಸಂದರ್ಭದಲ್ಲಿ ಹೇಳಿದುದಾಗಿದೆ. ಅವರು ಹೇಳಿದುದರ ಉದ್ದೇಶ ಇನ್ನು ಮುಂದೆ ಯಾವುದೇ ಶರೀಅತ್ ತರುವ ಪ್ರವಾದಿ ಬರಲಾರರೆಂದೇ ಆಗಿದೆ. ಇದರ ಬಗ್ಗೆ ಹದೀಸಿನ ಬಹಳ ದೊಡ್ಡ ಪಂಡಿತರಾದ ಅಲ್ಲಾಮ ಇಬ್ನು ಹಜರ್ (ಮರಣ: ಹಿಜರಿ ವರ್ಷ 852) ಹೀಗೆಂದಿರುವರು:

"ಇಲ್ಲಿ ನುಬುವ್ವತ್ ಎಂದು ಹೇಳಿದುದು ಹಝ್ರತ್ ಮುಹಮ್ಮದ್ ರಸೂಲ್ (ಸ)ರ ಸ್ವಂತ ನುಬುವ್ವತ್ ಬಗ್ಗೆಯಾಗಿದೆ. ನನ್ನ ನುಬುವ್ವತ್‌ನಲ್ಲಿ ಶರೀಅತ್‌ನ ಭಾಗ ಕೊನೆಗೊಂಡಿದೆ. ಆದರೆ ಮುಬಶ್ಶಿರಾತ್ ಬಾಕಿಯಾಗಿದೆ ಎಂದೇ ಇದರ ಅರ್ಥ."

(ಫತಹುಲ್ ಬಾರಿ – ಸಂಪುಟ 12, ಪುಟ 305)

ಇಲ್ಲಿ ನುಬುವ್ವತ್ ಎಂದು ಹೇಳಿದುದು ನುಬುವ್ವತ್ ಪದವಿಯ ಮುಂದಿನ ಸ್ಥಿತಿಯ ಬಗ್ಗೆಯಲ್ಲ, ಅದು ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಸ್ವಂತ ನುಬುವ್ವತ್ ಬಗ್ಗೆ ಮಾತ್ರ ಹೇಳಿದುದಾಗಿದೆ. ಮತ್ತು ಅವರ ಕಾಲಕ್ಕೆ ಸಮೀಪವಾದ ಕಾಲದಲ್ಲಿ ಯಾವುದೇ ಪ್ರವಾದಿ ಜನಿಸಲಾರರೆಂದೂ ಯಾರಿಗೂ ಒಳ್ಳೆಯ ಸ್ವಪ್ನಗಳ ಹೊರತು ಬೇರೆ ಯಾವುದೇ ರೀತಿಯ ದೇವ ಸಂದೇಶಗಳು ದೊರಕಲಾರವೆಂದೂ ಇದರ ಅರ್ಥವಾಗಿದೆ. ಆ ಕಾಲದಲ್ಲಿ ಬೇರೆ ದೇವ ಸಂದೇಶಗಳು ಪವಿತ್ರ ಖುರ್ಆನಿನ ಜೊತೆ ಮಿಶ್ರವಾಗುವ ಸಾಧ್ಯತೆಯನ್ನು ನಿವಾರಿಸುವುದೂ ಇದರ ಉದ್ದೇಶವಾಗಿತ್ತು. ಈ ಬಗ್ಗೆ ಅಲ್ಲಾಮ ಇಬ್ನು ಹಜರ್ ಹೀಗೆಂದು ಹೇಳಿದ್ದಾರೆ:

"ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಸಮೀಪ ಕಾಲದಲ್ಲಿ ದೇವಸಂದೇಶಗಳು ಅನಂತರದ ದೂರದ ಕಾಲದಲ್ಲಿ ಲಭಿಸಿದ ಹಾಗೆ ಲಭಿಸಿರಲಿಲ್ಲ; ಹೀಗೆ ಅಲ್ಲಾಹನು ಪವಿತ್ರ ಖುರ್ಆನಿನ ಸುರಕ್ಷಿತತೆಯನ್ನು ಕಾಪಾಡಿರುವನು. ಅದರೊಂದಿಗೆ ಬೇರೆ ಯಾವುದೇ ಸಂದೇಶ ಸೇರಿಕೊಳ್ಳದಂತಾಗಲು ಅವನು ಹೀಗೆ ಮಾಡಿರುವನು.

(ಫತ್‌ಹುಲ್ ಬಾರಿ – ಸಂಪುಟ 12, ಪುಟ 305)

ಈ ಹದೀಸಿನ ಬಗ್ಗೆ ಆಳವಾಗಿ ಚಿಂತಿಸುವುದಾದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಈ ಹದೀಸು ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ)ರ ಸಮೀಪ ಕಾಲವನ್ನು ಉದ್ದೇಶಿಸಿ ಹೇಳಿದುದಾಗಿದೆ. ಆ ಕಾಲದಲ್ಲಿ ಅಲ್ಲಾಹನ ಸಂದೇಶಗಳು ಒಳ್ಳೆಯ ಸ್ವಪ್ನಗಳ ಮೂಲಕವೇ ಪ್ರಕಟಗೊಳ್ಳುತ್ತಿದ್ದುವು. ಆದುದರಿಂದ 'ಅಲ್‌ಮುಬಶ್ಶಿರಾತ'ನ್ನು ಒಳ್ಳೆಯ ಸ್ವಪ್ನಗಳೆಂದು ಅವರು ವಿವರಿಸಿದ್ದರು.

ಆದರೆ ಈ ಹದೀಸಿನಲ್ಲಿ ಬಂದ ಮುಬಶ್ಶಿರಾತ್ ಎಂಬ ಶಬ್ದವನ್ನು ಆ ಶಬ್ದಕ್ಕಿರುವ ವಿಶಾಲವಾದ ಅರ್ಥಗಳನ್ನು ಪರಿಗಣಿಸಿ ನೋಡುವುದಾದರೆ ನಮ್ಮ ವಾದಕ್ಕೆ ಈ ಹದೀಸು ವಿರುದ್ಧವಾಗಿ ಕಂಡುಬರುವುದಿಲ್ಲ. ನುಬುವ್ವತ್ ಮೂರು ವಿಧಗಳಾಗಿರುತ್ತವೆಯೆಂದು ನಾವು ಆರಂಭದಲ್ಲಿಯೇ ವಿವರಿಸಿದ್ದೇವೆ.

ಮೊದಲನೆಯದಾಗಿ, ಶರೀಅತ್ ತರುವ ನುಬುವ್ವತ್ (ತಶ್‌ರೀಈ ನುಬುವ್ವತ್). ಹಝ್‌ರತ್ ಮೂಸಾ (ಅ) ಮತ್ತು ಹಝ್‌ರತ್ ಮುಹಮ್ಮದ್ ರಸೂಲ್ (ಸ) ಇಂತಹ ಪ್ರವಾದಿಗಳಾಗಿದ್ದರು. ಎರಡನೆಯದಾಗಿ ಸ್ವತಂತ್ರ ಪ್ರವಾದಿ (ಮುಸ್ತಖಿಲ್ ನುಬುವ್ವತ್) – ಹಿಂದಿನ ಪ್ರವಾದಿಯ ಶಿಷ್ಯತ್ವವನ್ನು ಪಡೆಯದೆ ನೇರವಾಗಿ ಪ್ರವಾದಿತ್ವ ಅಲ್ಲಾಹನಿಂದ ಗಳಿಸುವವರು. ಇಂತಹ ಪ್ರವಾದಿಗಳು ಶರೀಅತ್ ಹೊಂದಿರುವುದಿಲ್ಲ ಮತ್ತು ತಮಗಿಂತ ಮೊದಲಿನ ಪ್ರವಾದಿಯನ್ನು ಅನುಸರಿಸದೆ ನೇರವಾಗಿ ಅಲ್ಲಾಹನಿಂದ ನುಬುವ್ವತ್ ಗಳಿಸುತ್ತಾರೆ. ಇವರು ಸ್ವತಂತ್ರವಾಗಿ ನುಬುವ್ವತ್ ಗಳಿಸುತ್ತಾರೆ. ಹಝ್‌ರತ್ ದಾವೂದ್ (ಅ), ಹಝ್ರತ್ ಈಸಾ (ಅ) ಇಂತಹ ಪ್ರವಾದಿಗಳಾಗಿದ್ದಾರೆ. ಇನ್ನು ಮೂರನೆಯದು ನೆರಳಿನ ರೂಪದ ಉಮ್ಮತೀ ನುಬುವ್ವತ್ತಾಗಿದೆ. ಈ ಪ್ರವಾದಿತ್ವ ತನ್ನ ಹಿಂದಿನ ಪ್ರವಾದಿಯ ಪ್ರತಿಬಿಂಬ ಅಥವಾ ನೆರಳಿನ ರೂಪದಲ್ಲಿದ್ದು ಹಿಂದಿನ ಪ್ರವಾದಿಯ ಶಿಷ್ಯತ್ವ ಸ್ವೀಕರಿಸಿ ಅವರ ಉಪದೇಶಗಳ ಪ್ರಕಾರ ನಡೆದುದರ ಫಲವಾಗಿಯೇ ಈ ನುಬುವ್ವತ್ ಲಭಿಸುತ್ತದೆ. ಹಝ್‌ರತ್ ಮುಹಮ್ಮದ್ ರಸೂಲ್ (ಸ) ರ ನಂತರ ಬರಲಿರುವ ಮಸೀಹರು ಇಂತಹದೇ ಪ್ರವಾದಿತ್ವ ಗಳಿಸುವವರಾಗಿದ್ದಾರೆ. ಆದುದರಿಂದ "ಮುಬಶ್ಶಿರಾತ್" ಎಂಬ ಪದವನ್ನು ಅದರ ವಿಶಾಲವಾದ ಅರ್ಥದಲ್ಲಿ ಒಳ್ಳೆಯ ಸ್ವಪ್ನಗಳು, ಶುಭ ಸಂದೇಶಗಳು ಎಂಬ ಅರ್ಥದಲ್ಲಿ ತೆಗೆದುಕೊಳ್ಳುವುದಾದರೆ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಹೇಳಿದುದು ತನ್ನ ಅನಂತರ ಶರೀಅತ್ ತರುವ ಪ್ರವಾದಿಗಳು ಬರಲಾರರು; ಆದರೆ ಮುಬಶ್ಶಿರಾತ್ (ಶುಭ ಸಂದೇಶಗಳು) ಮತ್ತು ಮುನ್‌ಝಿರಾತ್ (ಅಶುಭ ವಾರ್ತೆಗಳು) ತರುವ ಪ್ರವಾದಿ ಬರಬಹುದೆಂದಾಗಿದೆ. ಆದರೆ ಅಂತಹ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲ್ (ಸ) ರ ನುಬುವ್ವತ್‌ನ ಪ್ರಕಾಶದಿಂದ ಪ್ರಕಾಶ ಪಡೆಯುವವರಾಗುವರು.

## ಮುಬಶ್ಶಿರಾತ್ ಹೆಚ್ಚು ಹೆಚ್ಚಾಗಿ ಉಂಟಾಗುವುದೇ ನುಬುವ್ವತ್

ಮುಬಶ್ಶಿರಾತ್ ಜೊತೆ ಮುನ್‌ಝಿರಾತ್ ಇದ್ದೇ ಇರಬೇಕಾಗಿದೆ. ಎಂದರೆ ಶುಭವಾರ್ತೆಗಳೊಂದಿಗೆ ಅಶುಭ ವಾರ್ತೆಗಳು. ಆದುದರಿಂದ ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಸಾಮಾನ್ಯ ಸಂಗತಿಗಳೆಂದು ಭಾವಿಸಬಾರದು. ಇವುಗಳು ಆಧಿಕ್ಯ (ಕಮಿಯ್ಯತ್) ಮತ್ತು ಅವುಗಳ ವೈಶಿಷ್ಟ್ಯ (ಕೈಫಿಯತ್)ದ ಕಾರಣದಿಂದಲೇ ಒಬ್ಬ ವ್ಯಕ್ತಿ ನುಬುವ್ವತ್ ಗಳಿಸುತ್ತಾರೆ. ಆದರೆ ಒಂದು ರೂಪಾಯಿಯನ್ನು ಹೊಂದಿದವನನ್ನು ಧನಿಕ ಎಂದು ಹೇಳಲು ಹೇಗೆ ಸಾಧ್ಯವಿಲ್ಲವೋ ಅದೇ ರೀತಿ ಅಲ್ಪ ಸ್ವಲ್ಪ ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಪಡೆಯುವವನೂ ನಬಿಯಾಗಲು ಸಾಧ್ಯವಿಲ್ಲ. ಅಸಾಮಾನ್ಯವಾಗಿ ಅತ್ಯಧಿಕ ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಗಳಿಸುವವರೇ ನಬಿಯಾಗಬಲ್ಲರು. ಪ್ರಾಮುಖ್ಯವಾದ ಸಂಗತಿ ಇವುಗಳು ಹೆಚ್ಚಿಗೆ ಇವೆಯೋ ಎಂಬುದಾಗಿದೆ. ಅತ್ಯಧಿಕ ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಗಳಿಸುವುದರ ಮತ್ತೊಂದು ಹೆಸರೇ ನುಬುವ್ವತ್ ಆಗಿದೆ. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

وما نرسل المرسلين الا مبشرين ومنذرين فمن
آمن واصلح فلا خوفٌ عليهم ولاهم يحزنون

"ನಾವು ಪ್ರವಾದಿಗಳನ್ನು ಕೇವಲ ಶುಭವಾರ್ತೆ ನೀಡುವವರನ್ನಾಗಿ ಮತ್ತು ಮುನ್ನೆಚ್ಚರಿಕೆ

ನೀಡುವವರನ್ನಾಗಿ ಕಳುಹಿಸುತ್ತೇವೆ. ಯಾರು ವಿಶ್ವಾಸ ಹೊಂದುತ್ತಾರೋ ಹಾಗೂ ನಡವಳಿಕೆಗಳನ್ನು ಉತ್ತಮಗೊಳಿಸುತ್ತಾರೋ ಅವರಿಗೆ (ಬರಲಿರುವ ಸಂಗತಿಗಳ ಕುರಿತು) ಯಾವುದೇ ಭಯವಾಗಲೀ (ನಡೆದು ಹೋದ ಸಂಗತಿಗಳ ಕುರಿತು) ಯಾವುದೇ ವ್ಯಸನವಾಗಲೀ ಇರಲಾರದು." (6 : 49)

ಇಲ್ಲಿ ಪ್ರವಾದಿಗಳ ಕುರಿತು ಮುಬಶ್ಶಿರೀನ್ (ಶುಭವಾರ್ತೆ ನೀಡುವವರು) ಎಂದೂ ಮುನ್‌ಝಿರೀನ್ (ಮುನ್ನೆಚ್ಚರಿಕೆ ನೀಡುವವರು) ಎಂದೂ ಹೇಳಲಾಗಿದೆ. ಪ್ರವಾದಿಯಾಗಲು ಪ್ರಮುಖವಾದ ಸಂಗತಿ ಇಷ್ಟು ಮಾತ್ರವಾಗಿದೆ. ಶರೀಅತ್ ತರುವುದು ಮತ್ತಿತರ ಸಂಗತಿಗಳು ಒಬ್ಬ ಪ್ರವಾದಿಗೆ ಪ್ರವಾದಿತ್ವ ಸಿಗಲು ಅತ್ಯಾವಶ್ಯಕವಾದ ಸಂಗತಿಗಳಲ್ಲ. ಅದು ಪ್ರವಾದಿಯ ಸ್ಥಾನವನ್ನು ಹೆಚ್ಚು ಮಾಡುವ ಸಂಗತಿಗಳಾಗಿವೆ. ಎಲ್ಲಾ ಪ್ರವಾದಿಗಳೂ ಮುಬಶ್ಶಿರೀನ್ ಮತ್ತು ಮುನ್‌ಝಿರೀನ್ ಆಗಿರುತ್ತಾರೆ. ಆದರೆ ಎಲ್ಲಾ ಪ್ರವಾದಿಗಳೂ ಶರೀಯಅತ್ ತಂದವರಾಗಿರುವುದಿಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ಬಗ್ಗೆ ಹೀಗೆ ಹೇಳಿರುವರು:

"ನಬಿ"ಯ ವಾಸ್ತವಿಕ ಅರ್ಥವೇನೆಂದು ಚಿಂತಿಸದ ಕಾರಣ ಈ ಎಲ್ಲಾ ತಪ್ಪುಗ್ರಹಿಕೆಗಳುಂಟಾಗಿವೆ. ನಬಿಯ ಅರ್ಥ ಇಷ್ಟೇ ಆಗಿದೆ: ಅಲ್ಲಾಹನಿಂದ, ಅವನು ನೀಡುವ ಸಂದೇಶಗಳ ಮೂಲಕ ಜ್ಞಾನಗಳಿಸುವುದಾಗಿದೆ. ಶರೀಅತ್ ತರುವುದು ಒಬ್ಬನು ನಬಿಯಾಗಲು ಆವಶ್ಯಕವಾದ ಸಂಗತಿಯಲ್ಲ. ಮತ್ತು ಯಾವುದೇ ಶರೀಅತನ್ನು ತಂದ ಪ್ರವಾದಿಯನ್ನು ಹೊಸ ನಬಿ ಅನುಸರಿಸಬಾರದೆಂಬ ನಿರ್ಬಂಧ ಸಹ ಒಬ್ಬ ನಬಿಯಾಗಲು ಇರುವುದಿಲ್ಲ. (ಬರಾಹೀನೆ ಅಹ್ಮದಿಯಾ – 5ನೇ ಭಾಗ ಪುಟ 138)

ಬೇರೊಂದು ಗ್ರಂಥದಲ್ಲಿ ಅವರು ಹೀಗೆಂದಿದ್ದಾರೆ:

ಮುಜದ್ದಿದ್ ಸರ್‌ಹಿಂದೀ ತಮ್ಮ "ಮಕ್ತೂಬಾತ್" ನಲ್ಲಿ ಹೀಗೆ ಬರೆದಿದ್ದಾರೆ: ಈ ಸಮುದಾಯದ ವಿಶಿಷ್ಟ ವ್ಯಕ್ತಿಗಳು ಅಲ್ಲಾಹನಿಂದ ಸಂಬೋಧಿಸಲ್ಪಟ್ಟಿರುವರಾದರೂ ಲೋಕಾವಸಾನದ ವರೆಗೆ ವಿಶಿಷ್ಟ ವ್ಯಕ್ತಿಗಳು ಅಲ್ಲಾಹನಿಂದ ಸಂಬೋಧಿಸಲ್ಪಡುತ್ತಲೇ ಇರುವರಾದರೂ ಯಾರು ಈ ರೀತಿಯಾಗಿ ಅತ್ಯಧಿಕ ಹೆಚ್ಚು ಸಂಬೋಧಿಸಲ್ಪಟ್ಟಿರುವರೋ ಮತ್ತು ಅಗೋಚರವಾದ ಸಂಗತಿಗಳು ಯಾರಿಗೆ ಅತ್ಯಧಿಕ ಪ್ರಕಟಗೊಳಿಸಲಾಗಿದೆಯೋ ಅಂತಹವರೇ ನಬಿಯೆಂದು ಕರೆಯಲ್ಪಡುತ್ತಾರೆ. (ಹಖೀಖತುಲ್ ವಹೀ – ಪುಟ 390).

ಆದುದರಿಂದ ಪ್ರವಾದಿಯಾಗಲು ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಮಾತ್ರ ಸಾಕು. ಒಬ್ಬ ಪ್ರವಾದಿಯಾಗಲು ಶರೀಅತ್ ಅವತೀರ್ಣಗೊಳಿಸಲ್ಪಡುವುದು ಅತ್ಯಾವಶ್ಯಕವಲ್ಲವೆಂದು ಇದರಿಂದೆಲ್ಲಾ ಸ್ಪಷ್ಟವಾಗುತ್ತದೆ.

## ಹಝ್ರತ್ ಮುಹಮ್ಮದ್ ರಸೂಲ್ (ಸ) ರ ಅನುಯಾಯಿಗಳಲ್ಲಿ ವಿಶಿಷ್ಟ ತರಗತಿಯವರಿಂದ ದೇವನ ಸಂದೇಶವಾಣಿ ಅವತೀರ್ಣವಾಗುತ್ತಾ ಇರುವುದು

ಈ ಹದೀಸಿನಲ್ಲಿ, 'ಮುಬಶ್ಶಿರಾತ್' ಎಂದರೆ 'ಉತ್ತಮವಾದ ಸ್ವಪ್ನಗಳು' ಎಂದು ಅರ್ಥ ಹೇಳಿದುದು ಸಾಧಾರಣ ಸತ್ಯವಿಶ್ವಾಸಿಗಳನ್ನುದ್ದೇಶಿಸಿ ಆಗಿದೆ. ಏಕೆಂದರೆ ಇಸ್ಲಾಮಿನ ಚರಿತ್ರೆಯಲ್ಲಿ ಸಾವಿರಾರು ದೇವಭಕ್ತರು ಮತ್ತು ಸತ್ಪುರುಷರ ಸಾಕ್ಷ್ಯಗಳಿಂದ ತಿಳಿಯುವುದೇನೆಂದರೆ ಮುಸ್ಲಿಮರಿಗೆ ಕೇವಲ ಉತ್ತಮ ಸ್ವಪ್ನಗಳು ಮಾತ್ರ ಉಂಟಾಗುವುದೆಂದೂ ಯಾವುದೇ ಕಶ್‌ಫ್ ದುತ್ತು ಇಲ್‌ಹಾಮ್ (ದಿವ್ಯದರ್ಶನ ಮತ್ತು ದೇವವಾಣಿ) ಲಭಿಸಲಾರದೆಂದೂ ಹೇಳುವುದು ಸರಿಯಲ್ಲವೆಂದಾಗಿದೆ. ಈ ಹದೀಸಿನ ವ್ಯಾಖ್ಯಾನ ಮಾಡುತ್ತಾ ಇಮಾಮ್ ಅಬ್ದುಲ್ ಹಸನ್ ಹೀಗೆಂದು ಬರೆದಿದ್ದಾರೆ:

المراد انّها لم تبق على العموم و الاّ فالا
لهام والكشف للاولياء فموجودٌ

"ನುಬುವ್ವತ್‌ನಲ್ಲಿ ಮುಬಶ್ಶಿರಾತ್ ಹೊರತು ಬೇರೇನೂ ಬಾಕಿಯಾಗಿಲ್ಲವೆಂದು ಹಝ್ರತ್ ಮುಹಮ್ಮದ್ ರಸೂಲ್ (ಸ) ಹೇಳಿದುದು ಸಾಮಾನ್ಯ ಮುಸ್ಲಿಮರನ್ನು ಉದ್ದೇಶಿಸಿ ಆಗಿದೆ. ಆದರೆ ಕಶ್‌ಫ್ ಮತ್ತು ಇಲ್‌ಹಾಮ್ ಅಲ್ಲಾಹನ ವಲಿ (ಸ್ನೇಹಿತ,

ಸಾಮಿಪ್ಯ ಪಡೆದವ)ಗಳಿಗೆ ಮುಂದುವರಿಯುತ್ತಾ ಇರುವುದು."

(ಶರಹ್ ಸುನನ್ ಇಬ್ನು ಮಾಜ–ಸಂಪುಟ 3, ಪುಟ 448)

ಸಂಕ್ಷಿಪ್ತವಾಗಿ ಹೇಳುವುದಾದರೆ, ಹಝ್‌ರತ್ ಮುಹಮ್ಮದ್ ರಸೂಲ್ (ಸ) ಹೇಳಿದ ವಚನ ತನ್ನ ಸಮೀಪದ ಕಾಲವನ್ನು ಉದ್ದೇಶಿಸಿ ಆಗಿದೆ. ಈ ಹದೀಸು ಎಲ್ಲ ಕಾಲಗಳಿಗೆ ಅನ್ವಯಿಸುವುದೆಂದು ಗ್ರಹಿಸುವುದಾದರೆ, ಮುಬಶ್ಶಿರಾತ್ ಎಂಬ ಪದ ನುಬುವ್ವತ್ ಪದವಿಯನ್ನು ಸಂಪೂರ್ಣವಾಗಿ ಕೊನೆಗೊಳಿಸುವುದಿಲ್ಲ. ಅದು ಶರೀಅತ್ ತರುವ ನುಬುವ್ವತನ್ನು ಕೊನೆಗೊಳಿಸುತ್ತದೆ. ಮತ್ತು ಸ್ವತಂತ್ರ (ಮುಸ್ತಖಿಲ್) ನುಬುವ್ವತನ್ನೂ ಕೊನೆಗೊಳಿಸುತ್ತದೆ. ಆದರೆ ಮುಬಶ್ಶಿರಾತ್ ಮತ್ತು ಮುನ್‌ಝಿರಾತ್ ಮಾತ್ರ ಹೊಂದಿರುವ ನುಬುವ್ವತ್ತನ್ನು ಅದು ಕೊನೆಗೊಳಿಸುವುದಿಲ್ಲ.

### ಮುಬಶ್ಶಿರಾತ್ ಹೊಂದುವ ಒಬ್ಬ ನಬಿಯ ಬಗ್ಗೆ ಭವಿಷ್ಯವಾಣಿ

ನುಬುವ್ವತ್‌ನಲ್ಲಿ ಮುಬಶ್ಶಿರಾತ್ ಅಲ್ಲದೆ ಇನ್ನೇನೂ ಬಾಕಿ ಉಳಿದಿಲ್ಲ ಎಂಬ ಹದೀಸಿನಲ್ಲಿ ಒಂದು ಸೂಕ್ಷ್ಮ ಸೂಚನೆ ಸಹ ಅಡಕವಾಗಿದೆ. ಈ ಹದೀಸಿನಲ್ಲಿ ಹಝ್ರತ್ ಮಸೀಹ್ ನಾಸಿರೀ (ಅ) ರವರ ಪ್ರತಿಪುರುಷ ಪ್ರವಾದಿಯ ಬರುವಿಕೆಯನ್ನು ಸೂಚಿಸಲಾಗಿದೆ. ಇದರ ವಿವರ ಹೀಗಿದೆ: ಹಝ್ರತ್ ಈಸಾ (ಅ) ರಿಗೆ ಅವತೀರ್ಣವಾದ ಗ್ರಂಥದ ಬಗ್ಗೆ ಅರಬಿ ನಿಘಂಟು ಗ್ರಂಥಗಳಲ್ಲಿ "ಬಶಾರತ್" (ಸುವಾರ್ತೆ) ಎಂದೇ ಬರೆಯಲಾಗಿದೆ. (ಅಖ್‌ರಬುಲ್ ಮವಾರಿದ್ ಮೊದಲಾದ ನಿಘಂಟು ಗ್ರಂಥಗಳನ್ನು ನೋಡಿರಿ) ಆ ಗ್ರಂಥದಲ್ಲಿರುವ ಸಂಗತಿಗಳನ್ನು ಬಶಾರತ್ ಎಂದೇ ವಿವರಿಸಲಾಗಿರುವುದರಿಂದ, ಹೀಗೆ ಮೂಸಾ ಪ್ರವಾದಿ (ಅ)ಯ ಸಮುದಾಯದಲ್ಲಿ ಜನಿಸಿದ ಈಸಾ ಪ್ರವಾದಿ (ಅ) ರ ಹಾಗೆಯೇ ತನ್ನ ಸಮುದಾಯದಲ್ಲೂ ಬಶಾರತ್ ನೀಡುವ ಒಬ್ಬ ಪ್ರವಾದಿ ಬರಲಿರುವರು ಎಂದು ಹಝ್ರತ್ ಮುಹಮ್ಮದ್ ಪೈಗಂಬರರು ಸೂಕ್ಷ್ಮವಾಗಿ ಸೂಚನೆ ನೀಡಿರುವರು. ಗಾಢವಾಗಿ ಚಿಂತಿಸಿದರೆ ಈ ಹದೀಸಿನಲ್ಲಿ ಬರಲಿರುವ ಈಸಾ ನಬಿಯ ಪ್ರತಿಪುರುಷರ ಬಗ್ಗೆ ಸೂಚನೆಯಿದೆಯೆಂದು ತಿಳಿದುಕೊಳ್ಳಬಹುದು. ★


## ಕನ್ನಡ ಅಹ್ಮದಿಯಾ ಸಾಹಿತ್ಯಗಳು

| | | ಬೆಲೆ |
|---|---|---|
| ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು–ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮಿಕ ? | ... | ರೂ. 1–00 |
| ಪ್ರವಾದಿಗಳು ಮತ್ತು ಅವರ ಶತ್ರುಗಳು | ... | 1–50 |
| ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ | .... | 2–00 |
| ಯೇಸು ಕಾಶ್ಮೀರದಲ್ಲಿ | ... | 0–50 |
| ಕಲ್ಕಿ ಅವತಾರ | ... | 0–50 |

ದೊರೆಯುವ ಸ್ಥಳ : (ಅಂಚೆ ವೆಚ್ಚ ಪ್ರತ್ಯೇಕ)

ಜೂಬಿಲಿ ಪ್ರಿಂಟಿಂಗ್ ಪ್ರೆಸ್
ಅನ್ಸಾರಿ ರಸ್ತೆ, ಮಂಗಳೂರು–575 001.

# ಬೇಗಂ ಮೌದೂದಿಯ ವಿಲಾಪ

★ ಎಂ. ಪಿ. ಐ.

**"ಬೇಗಂ ಮೌಲಾನಾ ಅಬುಲ್ ಆಲಾ ಮೌದೂದಿ ತನ್ನ ಮೂವರು ಪುತ್ರರೊಂದಿಗಿನ ಹಕ್ಕು ಬಾಧ್ಯತೆಗಳಿಗೆ ವಿದಾಯ ಹೇಳುತ್ತಿದ್ದಾರೆ" ಎಂಬ ಶಿರೋನಾಮೆಯಲ್ಲಿ ಮುಂಬಯಿಯಿಂದ ಹೊರಡುವ BLITZ ವಾರಪತ್ರಿಕೆಯ ಉರ್ದು ಆವೃತ್ತಿಯಲ್ಲಿ ಈ ಕಳೆದ 1987ನೇ ಎಪ್ರಿಲ್ 25ರಂದು ಪ್ರಕಟವಾದ ಒಂದು ವಾರ್ತೆಯ ಕನ್ನಡಾನುವಾದ ಈ ಕೆಳಗಿನಂತಿದೆ :**

"ಮೌಲಾನಾ ಅಬುಲ್ ಆಲಾ ಮೌದೂದಿಯವರ ಧರ್ಮಪತ್ನಿ ತನ್ನ ಮಕ್ಕಳೊಳಗಿರುವ ಕಲಹದ ಕುರಿತು ಕೆಲವು ದಿನಗಳ ಹಿಂದೆ ಒಂದು ಪತ್ರಿಕಾ ಪ್ರಕಟಣೆ ನೀಡಿದ್ದನ್ನು ಪಾಕಿಸ್ತಾನದ ಹೆಚ್ಚಿನ ಎಲ್ಲಾ ಪತ್ರಿಕೆಗಳೂ ಬಹಳ ಪ್ರಾಮುಖ್ಯತೆಯನ್ನು ನೀಡಿ ಪ್ರಕಟಿಸಿದ್ದುವು. ಆ ಬಹಿರಂಗ ಹೇಳಿಕೆಯಲ್ಲಿ ಬೇಗಂ ಮೌದೂದಿಯವರು ಹೇಳುವುದೇನೆಂದರೆ – ನಾವು ಮೌಲಾನಾ ಮೌದೂದಿಯವರ ಮರಣ ವೇಳೆಯಲ್ಲಿ ಕೈಗೊಂಡ ಒಂದು ತೀರ್ಮಾನದ ಪ್ರಕಾರ ನಮ್ಮ ಮನೆಯನ್ನು "ವಕ್ಫ್" ಎಂದು ಘೋಷಿಸಿ ಅಲ್ಲಿ ಒಂದು ಮಸೀದಿ ಮತ್ತು ಅದರೊಂದಿಗೆ ಒಂದು ಇಸ್ಲಾಮಿಕ ಅಧ್ಯಯನ ಕೇಂದ್ರವನ್ನು ನಿರ್ಮಿಸಲು ಬಯಸುತ್ತೇವೆ. ಆದರೆ, ಈ ತೀರ್ಮಾನವನ್ನು ಕಾರ್ಯಗತಗೊಳಿಸುವಲ್ಲಿ ಹೈದರ್ ಫಾರೂಖ್, ಹುಸೇನ್ ಫಾರೂಖ್ ಮತ್ತು ಮುಹಮ್ಮದ್ ಫಾರೂಖ್ ಎಂಬ ತನ್ನ ಮಕ್ಕಳು ಅಡ್ಡಗೋಡೆಯಾಗಿ ನಿಂತಿದ್ದಾರೆ. ಬೇಗಂರವರು ತನ್ನ ಈ ದಾವೆಯನ್ನು ಅಲ್ಲಾಹನ ನ್ಯಾಯಾಲಯದಲ್ಲಿ ಹೂಡಿರುವುದಾಗಿಯೂ ತನ್ನ ಮೂವರು ಮಕ್ಕಳಾದ ಹೈದರ್ ಫಾರೂಖ್, ಹುಸೇನ್ ಫಾರೂಖ್ ಮತ್ತು ಮುಹಮ್ಮದ್ ಫಾರೂಖ್ ಎಂಬವರೊಡನಿರುವ ತನ್ನ ಎಲ್ಲಾ ಸಂಬಂಧವನ್ನೂ ಸಂಪೂರ್ಣ ಕಡಿದಿರುವುದಾಗಿಯೂ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

"ಬೇಗಂ ಮೌದೂದಿಯವರು ತನ್ನ ಹಸ್ತಾಕ್ಷರದೊಂದಿಗೆ ಪತ್ರಿಕೆಗಳಿಗೆ ನೀಡಿದ ಬಹಿರಂಗ ಹೇಳಿಕೆಯ ಪೂರ್ಣ ಪಾಠ ಈ ರೀತಿಯಿದೆ:

"ಮೌಲಾನಾ ಸೈಯ್ಯದ್ ಅಬುಲ್ ಆಲಾ ಮೌದೂದಿಯವರು ಮರಣಹೋದುವ ಸಮಯದಲ್ಲಿ, ನಮ್ಮ ಈ ಮನೆಯನ್ನು ಅಂದರೆ, ಲಾಹೋರಿನ ದೇಲ್‌ವಾರ್ ಪಾರ್ಕ್ 5 A ನಂಬರಿನ ನಮ್ಮ ಮನೆಯನ್ನು 'ವಕ್ಫ್' ಮಾಡಿಕೊಂಡು ಅಲ್ಲಿ ಒಂದು ಮಸೀದಿ ನಿರ್ಮಿಸಿ, ಅದಕ್ಕನುಬಂಧವಾಗಿ ಒಂದು ಇಸ್ಲಾಮಿಕ ಅಧ್ಯಯನ ಕೇಂದ್ರವನ್ನು ಕೂಡಾ ಸ್ಥಾಪಿಸುವುದಾಗಿ ತೀರ್ಮಾನಿಸಿದ್ದೆವು. ಯಾಕೆಂದರೆ, ಸೈಯ್ಯದ್ ಮೌದೂದಿಯವರು ಯಾವ ರೀತಿಯ ವೈಜ್ಞಾನಿಕ ಚಟುವಟಿಕೆಗಳೊಂದಿಗೆ ಈ ಮನೆಯಲ್ಲಿ ಜೀವನ ನಡೆಸಿದರೋ ಅದರ ಒಂದು ಪರಂಪರೆಯು ಮುಂದುವರಿಯಲಿ ಎಂಬ ಉದ್ದೇಶದಿಂದ. ಹೈದರ್ ಫಾರೂಖ್ ಒಬ್ಬನನ್ನು ಬಿಟ್ಟು ಉಳಿದ ನನ್ನ ಎಲ್ಲಾ ಮಕ್ಕಳೂ ಈ ತೀರ್ಮಾನದಲ್ಲಿ ಸಹಮತರಾಗಿದ್ದರು. ಹೈದರ್ ಫಾರೂಖ್‌ನಿಗೆ ಆ ತೀರ್ಮಾನದೊಂದಿಗೆ ಪ್ರಾರಂಭದಿಂದಲೂ ಕಠಿಣವಾದ ವಿರೋಧವಿತ್ತು. ಆ ವಿರೋಧದ ಕಾರಣದಿಂದಲೇ ಆತನು ಕೊನೆಯ ಗಳಿಗೆಯಲ್ಲೂ ತನ್ನ ತಂದೆಯ ಮುಖವನ್ನು ನೋಡಲಿಲ್ಲ! ಹಾಗೂ ತನ್ನ ತಂದೆಯ ಮರಣಾನಂತರದ (ಜನಾಸ) ನಮಾಜಿನಲ್ಲೂ ಪಾಲುಗೊಳ್ಳಲಿಲ್ಲ!!

"ನಂತರ ಹುಸೇನ್ ಫಾರೂಖ್ ಮತ್ತು ಮುಹಮ್ಮದ್ ಫಾರೂಖ್ ಕೂಡಾ ಮುಖ ತಿರುಗಿಸಿ ಹೈದರ್ ಫಾರೂಖನ ಜತೆ ಸೇರಿಕೊಂಡರು. ನಿಜವಾಗಿಯೂ, ವಿಷಯ ಲಂಪಟತನವು ಇವರನ್ನು ಅಂಧರನ್ನಾಗಿ ಮಾಡಿಬಿಟ್ಟಿದೆ. ಅವರ ಮನಸ್ಸಿನಲ್ಲಿ ಬೇರೂರತೊಡಗಿದ ದುರ್ಮೋಹವು ಸಂಪೂರ್ಣ ಮನೆಯನ್ನೂ ತರ್ಜುಮಾನುಲ್ ಖುರ್‌ಆನ್ ಕಛೇರಿಯನ್ನೂ ಸೈಯ್ಯದ್ ಮೌದೂದಿಯವರ ಪುಸ್ತಕ ಭಂಡಾರವನ್ನೂ ಇತರ ಎಲ್ಲಾ ಆಸ್ತಿ ಪಾಸ್ತಿಗಳನ್ನೂ ಹೇಗಾದರೂ ಮಾಡಿ ಸ್ವಾಧೀನ ಪಡಿಸಿಕೊಳ್ಳಬೇಕೆಂದಾಗಿತ್ತು. ಈ ಉದ್ದೇಶ ಸಾಧನೆಗಾಗಿ ಅವರು ಮನೆಯೊಳಗೆ ಅನೇಕ ಬಾರಿ ಅವಾಚ್ಯ ಶಬ್ದಗಳನ್ನೂ ನಿಂದನಾ ಪೂರಿತ ಬೈಗಳನ್ನೂ ಕೂಗಿದ್ದಾರೆ. ಗೂಂಡಾಗಿರಿಯ ಪ್ರದರ್ಶನವನ್ನೂ ನಡೆಸಿದ್ದಾರೆ.

"ಕಾಮ–ಮೋಹ ಲಂಪಟತನದಲ್ಲಿ ಹುಸೇನ್ ಫಾರೂಖ್ ಎಂಬವನು ಎಲ್ಲರಿಗಿಂತಲೂ ಒಂದು ಹೆಜ್ಜೆ ಮುಂದು. ಅವನು ತನ್ನ ತಂದೆಗೆ ಕೂಡಾ ವಂಚನೆ ಬಗೆದುಬಿಟ್ಟಿದ್ದಾನೆ! ಮುಹಮ್ಮದ್ ಫಾರೂಖ್ ಮತ್ತು ಹೈದರ್ ಫಾರೂಖ್ ಇವರಿಬ್ಬರ ನೀಚ ಮಾತುಗಳೂ ಧಿಕ್ಕಾರವೂ ಊರಿನ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಹೈದರ್ ಫಾರೂಖ್ ತನ್ನ ತಂದೆಯೊಡನೆ ಪ್ರತೀಕಾರ ಬುದ್ಧಿಯಿಂದ ಅಹ್ಮದೀಯರ ಬಳಿಗೆ ರಬ್‌ವಾಕ್ಕೆ ಹೋಗಿಬಿಟ್ಟಿದ್ದ. ಮುಹಮ್ಮದ್ ಫಾರೂಖ್ ಒಮ್ಮೆ ತನ್ನ ತಂದೆಗೆ ಪಿಸ್ತೂಲು ತೋರಿಸಿ ಹಣ ಕೇಳಿದ್ದೂ ಉಂಟು.

"ಈ ಮೂರು ಸಹೋದರರೂ ಅವರ ತಂದೆಯನ್ನು ನಿರಂತರವಾಗಿ ಪೀಡಿಸುತ್ತಿದ್ದರು. ಈಗ ಅವರ ಕಣ್ಣು ನಮ್ಮ ಮೇಲೆ ಇದೆ.

"ಇತ್ತೀಚೆಗಷ್ಟೆ ನಾನು ಸೌದಿ ಅರೇಬಿಯಾದಿಂದ ನನ್ನ ಹಿರಿಯ ಮಗ ಉಮರ್ ಫಾರೂಖ್‌ನನ್ನೂ ಅಮೇರಿಕದಿಂದ ಡಾಕ್ಟರ್ ಅಹ್ಮದ್ ಫಾರೂಖ್‌ನನ್ನೂ ಕರೆಸಿದೆ. ಯಾಕೆಂದರೆ, ನಮಗೆ ಏಳು ಜನರಿಗೂ ಹಕ್ಕು ಇರುವಂತಹ ನಮ್ಮ ಮನೆಯ ಅವರವರ ಪಾಲುಗಳನ್ನು ವಕ್ಫ್ ಮಾಡುವ ಹಾಗೂ ದಸ್ತಾವೇಜು ಸಂಬಂಧವಾದ ಇತರ ಎಲ್ಲಾ ವ್ಯವಹಾರಗಳನ್ನೂ ಸರಿಪಡಿಸುವ ಉದ್ದೇಶದಿಂದ. ಈ ವಿಷಯದಲ್ಲಿ ಈಗಾಗಲೇ ಬಹಳಷ್ಟು ವಿಳಂಬ ಉಂಟಾಗಿದೆ. ಆದರೆ, ಈ ಜನರು ಅವರ ಉದ್ದೇಶ ಪೂರ್ತಿಯಾಗುವುದಿಲ್ಲವೆಂದು ತಿಳಿದಾಗ ನೀಚ ಕೃತ್ಯಗಳನ್ನೂ ನೀಚ ಮಾತುಗಳನ್ನೂ ಆಡಲು ತೊಡಗಿದರು.

"ಗೂಂಡಾಗಿರಿಯ ಪರಿಣಾಮ ಫಲ ಒಂದು ಭೀಕರ ಸಂಭವವಾಗಿತ್ತು. ಒಂದು ದಿನ ರಾತ್ರಿ ಹನ್ನೊಂದೂವರೆ ಗಂಟೆಗೆ ಹೈದರ್ ಫಾರೂಖ್ ಮತ್ತು ಮುಹಮ್ಮದ್ ಫಾರೂಖ್ ಮನೆಯೊಳಗೆ ನುಗ್ಗಿ ಮನೆಯೊಳಗಿದ್ದ ಇಬ್ಬರನ್ನೂ ಆಕ್ರಮಿಸಿದರು. ಹೈದರ್ ಫಾರೂಖ್ ಚೂರಿಯಿಂದ ಆಕ್ರಮಣ ನಡೆಸಿದರೆ ಮುಹಮ್ಮದ್ ಫಾರೂಖ್ ಹೂದಾನಿಗಳನ್ನು ತೆಗೆದು ಎಸೆಯತೊಡಗಿದ. ಚೂರಿಯ ಇರಿತದಿಂದ ಅಹ್ಮದ್ ಫಾರೂಖ್ ಬಿದ್ದುಬಿಟ್ಟ. ಹೂದಾನಿಗಳ ಎಸೆತದಿಂದ ಹೈದರ್ ಫಾರೂಖ್‌ನಿಗೂ ಏಟು ಬಿತ್ತು.

"ನಂತರ ನಾನು ಬಹಳ ಕಷ್ಟಪಟ್ಟು ಇವರನ್ನು ವೈದ್ಯಕೀಯ ಶುಶ್ರೂಷೆಗಾಗಿ ಸಾಗಿಸಿದೆ. ಆ ವೇಳೆಯಲ್ಲಿ ಮುಹಮ್ಮದ್ ಫಾರೂಖ್ ಮತ್ತು ಹೈದರ್ ಫಾರೂಖ್ ಇವರಿಬ್ಬರ ಬಾಯಿಂದಲೂ ಉದುರಿಬಿದ್ದ ಅಶ್ಲೀಲ ಮಾತುಗಳೂ ನೀಚ ಪದಗಳೂ ಗಲ್ಲಿಯಲ್ಲಿರುವವರಿಗೆಲ್ಲಾ ಕೇಳಿಸಿರಬಹುದು. ಅವುಗಳನ್ನು ಪುನರಾವರ್ತಿಸಲು ನನಗೆ ಶಕ್ತಿಯಿಲ್ಲ. ಪ್ರತೀಕಾರದ ಸಾಮರ್ಥ್ಯವೂ ನನ್ನಲ್ಲಿಲ್ಲ.

"ಮೌಲಾನಾರ ಪಾರಂಪರ್ಯದಲ್ಲಿ 'ಜಮಾತೇ ಇಸ್ಲಾಮಿ' ಕೂಡಾ ಸೇರುತ್ತದೆ. ಅವರ ಈ ಮೂರು ಮಕ್ಕಳು ತಮಗೆ ತೋಚಿದಾಗೆಲ್ಲಾ ಜಮಾತಿನ ಮೇಲೆ ಕೆಸರೆರಚುತ್ತಾ ಕುಟುಂಬ ಸದಸ್ಯರಿಗೂ ಮೌಲಾನಾರಲ್ಲಿ ನಿಷ್ಠೆಯಿರಿಸಿದ ಅನುಯಾಯಿಗಳಿಗೂ ಬಹಳ ದುಃಖವನ್ನುಂಟುಮಾಡುತ್ತಾರೆ.

ದಿವಂಗತರಾದ ನನ್ನ ಪತಿಯವರ ಸಂಪ್ರದಾಯದಂತೆ ನಾನು ಮಹಿಮಾವಂತನಾದ ಅಲ್ಲಾಹನ ನ್ಯಾಯಾಲಯದಲ್ಲಿ ನನ್ನ ಫಿರ್ಯಾದನ್ನು ಸಲ್ಲಿಸುತ್ತಿದ್ದೇನೆ. ಯಾಕೆಂದರೆ, ಅತ್ಯುತ್ತಮ ತೀರ್ಮಾನವು ಅವನದೇ ಆಗಿದೆ. ಹಾಗೂ ನಾನು ನನ್ನ ಮೂವರು ಮಕ್ಕಳಾದ ಹೈದರ್ ಫಾರೂಖ್, ಹುಸೇನ್ ಫಾರೂಖ್ ಮತ್ತು ಮುಹಮ್ಮದ್ ಫಾರೂಖ್ ಎಂಬವರ ಹಕ್ಕು ಬಾಧ್ಯತೆಗಳಿಂದ ಸಂಪೂರ್ಣ ವಿಮುಕ್ತಳೆಂದು ಈ ಮೂಲಕ ಘೋಷಿಸುತ್ತೇನೆ."

— ಬ್ಲಿಟ್ಸ್ ವಾರಪತ್ರಿಕೆ, ಮುಂಬಯಿ – 25 ಎಪ್ರಿಲ್ 1987.

## ಸಂತಾನ ಹೀನರಾಗುತ್ತಿರುವ ವಿರೋಧಿಗಳು

'ದೇವರ ಸೈನ್ಯ'ವೆಂದು ತಮ್ಮ ಪಕ್ಷದ ಕುರಿತು ಸ್ವಯಂ ಹೇಳಿಕೊಳ್ಳುತ್ತಿರುವ ಜಮಾಅತೇ ಇಸ್ಲಾಮಿ ಎಂಬ ಧರ್ಮಾಧಾರಿತ ರಾಜಕೀಯ ಪಕ್ಷದ ಸಂಸ್ಥಾಪಕರೂ ನೇತಾರರೂ ಆಗಿದ್ದರು ದಿವಂಗತ ಸೈಯ್ಯದ್ ಅಬೂಲ್ ಆಲಾ ಮೌದೂದಿ. ಅವರು ತನ್ನ ಪಕ್ಷವನ್ನು ಪರಿಚಯ ಮಾಡಿಕೊಟ್ಟದ್ದು ಈ ರೀತಿಯಾಗಿದೆ:

"ಇದು ಧಾರ್ಮಿಕ ಬೋಧನೆಗಳನ್ನು 'ತಬ್‌ಲೀಗ್' ಮಾಡುವ (ಸದುಪದೇಶಗಳಿಂದ ಜನರಿಗೆ ಧಾರ್ಮಿಕ ಬೋಧನೆ ನೀಡುವ) ಉಪದೇಶಕರ ಅಥವಾ ಸುವಾರ್ತಾ ಪ್ರಚಾರಕರ ಸಂಘಟನೆಯಲ್ಲ. ಬದಲಾಗಿ 'ಖುದಾಯೀ ಫೌಜ್‌ದಾರ್' ಎಂಬ ದೇವರ ಸೇನೆಯ ಒಂದು ಸಂಘಟನೆಯಾಗಿದೆ. ಅವರ ಕೆಲಸವೇನೆಂದರೆ– ಭೂಲೋಕದಿಂದ ಅನ್ಯಾಯ, ಅಕ್ರಮ, ಅನೀತಿ, ದುರಾಚಾರ ಮೊದಲಾದವುಗಳನ್ನು ಬಲಪ್ರಯೋಗದಿಂದ ನಿರ್ಮೂಲನ ಮಾಡುವುದಾಗಿದೆ....... ಇದಕ್ಕಾಗಿ ಈ ಪಕ್ಷಕ್ಕೆ ಆಡಳಿತವನ್ನು ಕರಗತಮಾಡಿಕೊಳ್ಳದೆ ನಿರ್ವಾಹವಿಲ್ಲ." (ತಫ್‌ಹೀಮಾತ್ – ಪುಟ 71)

ತನ್ನ ಪಕ್ಷದ ಈ ರೀತಿಯ ಸಂಹಾರ ಕಾರ್ಯಕ್ರಮವನ್ನು ಇಡೀ ಭೂಮಂಡಲದಲ್ಲಿ ಜಾರಿಗೊಳಿಸಲು ಹಾಗೂ ಆಡಳಿತಾಧಿಕಾರಗಳನ್ನು ಕಿತ್ತುಕೊಳ್ಳಲು ತನ್ನ ಅನುಯಾಯಿಗಳನ್ನು ಸಜ್ಜುಗೊಳಿಸುವ ಸಲುವಾಗಿ ಮೌದೂದಿಯವರ ಸಂತತಿಗಳು ಅವರ ಇತರ ಅನುಯಾಯಿಗಳಿಗೆ ಮಾದರಿಯಾಗಬಲ್ಲ ಮುಖಂಡತ್ವವನ್ನು ವಹಿಸುವರೆಂದು ಯಾರಾದರೂ ಆಶಿಸಿದ್ದರೆ ಅದು ಸ್ವಾಭಾವಿಕವೇ ಆಗಿದೆ. ತನ್ನ ಗಂಡು ಸಂತಾನಗಳನ್ನು ಇಸ್ಲಾಮಿನ ಸುವರ್ಣಯುಗದ ಅಗ್ರಗಣ್ಯ ವ್ಯಕ್ತಿಗಳ ಹೆಸರುಗಳಿಂದ ಕರೆಯಲು ಅವರು ತೀರ್ಮಾನಿಸಿದ್ದು ಕೂಡಾ ಈ ಸದುದ್ದೇಶದ ಸಾಕ್ಷಾತ್ಕಾರಕ್ಕಾಗಿಯೇ ಇರಬಹುದು. ಕೇಳುವಾಗಲೇ ರೋಮಾಂಚನಗೊಳ್ಳುವಂತೆ, ಮಿಲಿಟರಿ ಶಿಸ್ತಿನಿಂದ ಕೂಡಿದಂತೆ, ಒಂದೊಂದಾಗಿ ಉಮರ್ ಫಾರೂಖ್, ಹೈದರ್ ಫಾರೂಖ್, ಹುಸೇನ್ ಫಾರೂಖ್...... ಎಂದೆಲ್ಲಾ ತನ್ನ ಮುದ್ದು ಮಕ್ಕಳಿಗೆ ಅವರು ನಾಮಕರಣ ಮಾಡಿದರು. ಅಂದು ಮನೆಯವರೂ ಬಂಧು ಬಳಗದವರೂ ಎಷ್ಟೊಂದು ಆಹ್ಲಾದ ಭರಿತರಾಗಿದ್ದಿರಬಹುದು! ಮೌದೂದಿಯವರ ನಾಯಕತ್ವದಲ್ಲಿ ಅಭಿಮಾನಿಸುವ ಅವರ ಅನುಯಾಯಿಗಳು ಈ ಸಂತತಿಗಳಿಂದ ಏನನ್ನೆಲ್ಲಾ ನಿರೀಕ್ಷಿಸಿದ್ದಿರಬಹುದು!

ಆದರೆ, ಮೌದೂದಿ ಸಾಹೇಬರ ಆಧ್ಯಾತ್ಮಿಕ ಸಂರಕ್ಷಣೆಯಲ್ಲಿ ತರಬೇತಿ ಹೊಂದಿದ ಆ ಸಂತತಿಗಳ ಪರಾಕ್ರಮಗಳನ್ನು ಅವರ ಜೀವಿತ ಕಾಲದಲ್ಲಿ ಮನೆಯವರೂ ನೆರೆಕರೆಯವರೂ ಮಾತ್ರ ತಿಳಿದುಕೊಂಡಿದ್ದರೆ, ಈಗ ಅದನ್ನು ಪ್ರಪಂಚದಲ್ಲಿರುವ ಎಲ್ಲರ ತಿಳುವಳಿಕೆಗಾಗಿ ಅವರ ಸಹಧರ್ಮಿಣಿ ತನ್ನ ಹಸ್ತಾಕ್ಷರದೊಂದಿಗೆ ಬಹಿರಂಗಗೊಳಿಸಿದ್ದಾರೆ. ಆ ಬಹಿರಂಗ ಪ್ರಕಟಣೆಯ (ಭಾರತದ ಬೊಂಬಾಯಿಯಿಂದ ಹೊರಡುವ ಬ್ಲಿಟ್ಸ್– ಉರ್ದು – ವಾರಪತ್ರಿಕೆಯಲ್ಲಿ ಪ್ರಕಟವಾದುದು) ಕನ್ನಡಾನುವಾದವನ್ನು ವಾಚಕರು ಇದೀಗ ಓದಿದ್ದೀರಿ. ಮೌದೂದಿಯವರ ಪೋಲಿ ಮಕ್ಕಳ ದುಷ್ಕೃತ್ಯಗಳನ್ನೂ ನೀಚತನವನ್ನೂ ಲೋಕಕ್ಕೆ ವಿವರಿಸಿಕೊಟ್ಟು ತನಗಿರುವ ಪವಿತ್ರವಾದ ಮಾತೃಬಂಧಕ್ಕೆ ಆ ಮಹಿಳೆ ವಿದಾಯ ಹೇಳಿದ್ದಾರೆ. ವಿಷಯ ಲಂಪಟತನವೂ ಧನಮೋಹವೂ ಅವರನ್ನು ಆಳಲು ತೊಡಗಿದಾಗ ಶ್ರೇಷ್ಠವಾದ ಇಸ್ಲಾಮಿಕ ಮೌಲ್ಯಗಳನ್ನು ಅವರು ಕಡೆಗಾಲಿನಿಂದ ತುಳಿದು ಮುಂದೆ ಸಾಗುತ್ತಿರುವುದನ್ನು ಕಂಡ ಆ ಮಾತಾಮಣಿ, ಮೌಲಾನರ ಈ ಸುಕುಮಾರರು ತನ್ನ ಒಡಲಲ್ಲಿ ಜನಿಸದೆ

ಇರುತ್ತಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು ವಿಲಾಪಿಸುತ್ತಿರುವ ದಯನೀಯ ಸನ್ನಿವೇಶಕ್ಕೆ ಇಂದು ಲೋಕವು ಸಾಕ್ಷಿಯಾಯಿತು.

## ದೈವಿಕ ದೃಷ್ಟಾಂತ

ತಾನು ಅಲ್ಲಾಹನಿಂದ ನಿಯೋಜಿತನಾಗಿರುವ ಮಹ್‌ದೀ–ಮಸೀಹ್ ಆಗಿರುವೆನೆಂದು ಘೋಷಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರನ್ನು ಓರ್ವ ಸುಳ್ಳುವಾದಿಯೆಂದು ನಿರೂಪಿಸಲು ಆಯುಷ್ಕಾಲವನ್ನು ವ್ಯಯಮಾಡಿದ ಅಗ್ರೇಸರ ಪಂಡಿತ ಮಹಾಶಯರ ಪೈಕಿ ಓರ್ವರಾಗಿದ್ದರು ನಮ್ಮ ಈ ಮೌಲಾನಾ ಮೌದೂದಿ. ಅಲ್ಲಾಹನ ಸಂದೇಶವಾಹಕರನ್ನು ವಿರೋಧಿಸಿದ ಹಾಗೂ ಅವರ ವಿರುದ್ಧ ಸಮರ ಹೂಡಿದ ಅತಿರಥ ಮಹಾರಥರೆಲ್ಲಾ ಪರಾಭವದ ಪಾತಾಳವನ್ನು ಕಂಡು ನಿರಾಶೆಯ ನಿಟ್ಟುಸಿರಿನೊಂದಿಗೆ ಈ ಲೋಕವನ್ನು ತ್ಯಜಿಸಿದ ಉದಾಹರಣೆಗಳು ಮತಚರಿತ್ರೆಗಳಲ್ಲಿ ಧಾರಾಳ ಲಭ್ಯವಿದೆ. ಈ ಯುಗದ ಪ್ರವಾದಿಯಾಗಿ ಅಲ್ಲಾಹನಿಂದ ಕಳುಹಿಸಲ್ಪಟ್ಟ ಹಝ್ರತ್ ಅಹ್ಮದ್‌ರವರ ಎದುರಾಳಿಗಳಿಗೂ ಇದೇ ದುರ್ಗತಿ ಒದಗುತ್ತಿರುವುದು ನಮ್ಮ ಕಣ್ಣೆದುರಿನಲ್ಲಿ ಸಂಭವಿಸುತ್ತಿರುವ ದಿವ್ಯದೃಷ್ಟಾಂತವಾಗಿದೆ.

ಪತ್ರಿಕಾ ವರದಿಯ ನಮ್ಮ ಕಥಾನಾಯಕ ಅಬುಲ್ ಆಲಾ ಮೌದೂದಿ ಎಂಬವರು 1953ರಲ್ಲಿ ಪಾಕಿಸ್ತಾನದಲ್ಲಿ ನಡೆದ ಅಹ್ಮದಿಯಾ ವಿರೋಧಿ ಚಳವಳಿಯ ಸಾರಥ್ಯ ವಹಿಸಿದ್ದ ನಾಯಕರಾಗಿದ್ದರು. ನಂತರ 1974ರಲ್ಲಿ ಭುಟ್ಟೋ ಸರಕಾರ ಆಳ್ವಿಕೆ ನಡೆಸುತ್ತಿದ್ದಾಗ ಅಲ್ಲಿನ ನೇಶನಲ್ ಎಸೆಂಬ್ಲಿಯಲ್ಲಿ "ಅಹ್ಮದಿಯರು ಮುಸ್ಲಿಮರಲ್ಲ" ಎಂಬುದಾಗಿ ,ಸಂವಿಧಾನ ತಿದ್ದುಪಡಿ ಮಾಡಿಸಿ ಘೋಷಿಸಲು ನೇತೃತ್ವ ವಹಿಸಿದ ಒಂಬತ್ತು ಮೌಲಾನಾಗಳಲ್ಲಿ ಪ್ರಧಾನ ಪಂಡಿತರು ಇವರೇ ಆಗಿದ್ದರು. ಒಟ್ಟಿನಲ್ಲಿ ಮೌಲಾನಾ ಮೌದೂದಿ ತನ್ನ ಬದುಕಿನ ಅಂತ್ಯಶ್ವಾಸದ ವರೆಗೂ ಹಝ್ರತ್ ಅಹ್ಮದ್ (ಅ) ಅವರ ಪ್ರಚಂಡ ಶತ್ರುವಾಗಿ ವಿರಾಜಿಸಿದವರಾಗಿದ್ದಾರೆ.

ಹಝ್ರತ್ ಅಹ್ಮದ್‌ರವರು 1889ರಲ್ಲಿ ಅಲ್ಲಾಹನ ನಿರ್ದೇಶ ಪ್ರಕಾರ ಅಹ್ಮದಿಯಾ ಸಂಘಟನೆಯನ್ನು ಸ್ಥಾಪಿಸಿದರು. ಒಂದು ಶತಮಾನವು ಪೂರ್ಣಗೊಳ್ಳುತ್ತಿರುವ ಈ ಕಾಲದವರೆಗೂ ಅವರ ವಿರೋಧಿಗಳ ಪರಂಪರೆಯು ಅಖಂಡವಾಗಿ ಮುಂದುವರಿದು ಬಂದಿದೆ. ಈ ರೀತಿಯ ವಿರೋಧಿಗಳ ಪರಂಪರೆಯು ಸತ್ಯಪ್ರವಾದಿಗಳ ಶತ್ರುಶ್ರೇಣಿಗಳಲ್ಲಿ ಮಾತ್ರವೇ ಕಾಣಲು ಸಾಧ್ಯ. ವಿಶ್ವದ ಇತಿಹಾಸದಲ್ಲಿ ಯಾವ ಸುಳ್ಳುವಾದಿಯನ್ನೂ ಈ ರೀತಿ ವಿರೋಧಿಸಿದ ಉದಾಹರಣೆಗಳಿಲ್ಲ.

ಹಝ್ರತ್ ಅಹ್ಮದ್ ಅವರು ಒಂದು ಪದ್ಯದಲ್ಲಿ ಈ ರೀತಿ ಹೇಳಿದ್ದಾರೆ: "ನನ್ನ ಯಜಮಾನನಾದ ಅಲ್ಲಾಹನು ನನ್ನ ಪ್ರತಿಯೊಂದು ಹೆಜ್ಜೆಯಲ್ಲೂ ನನಗೆ ಸೂಚಕಕಾರ್ಯಗಳನ್ನು ನೀಡಿದ್ದಾನೆ. ಆ ದಿವ್ಯ ದೃಷ್ಟಾಂತಗಳು ವಿರೋಧಿ ಸಮೂಹಗಳ ಮೇಲೆ ಖಡ್ಗವಾಗಿ ಎರಗಿದಾಗ ಅವರು ಆಪತ್ತಿಗೂ ಅಪಮಾನಕ್ಕೂ ಗುರಿಯಾದರು."

ಇಲ್ಲಿ ಆ ದಿವ್ಯಾತ್ಮರು ಉದ್ಘೋಷಿಸುವುದೇನೆಂದರೆ, ತನ್ನ ಮುಂದಿನ ಪ್ರತಿಯೊಂದು ಹೆಜ್ಜೆಯಲ್ಲೂ ತಾನು ಅಲ್ಲಾಹನಿಂದ ನಿಯೋಜಿಸಲ್ಪಟ್ಟವನೆಂಬುದಕ್ಕೆ ನಿದರ್ಶನಗಳನ್ನು ಆ ಪರಮಾತ್ಮನು ತೋರಿಸಿಕೊಡುವನೆಂದೂ ಆ ದಿವ್ಯ ದೃಷ್ಟಾಂತಗಳು ತನ್ನ ಎದುರಾಳಿಗಳ ಕುತ್ತಿಗೆಯ ಮೇಲೆ ಖಡ್ಗವಾಗಿ ಬೀಳುವಾಗ ಆ ವಿರೋಧಿಗಳು ಇಹಲೋಕದಲ್ಲೂ ಪರಲೋಕದಲ್ಲೂ ಅಪಮಾನಕ್ಕೂ ನಿಂದನೆಗೂ ಗುರಿಯಾಗುವರೆಂದೂ ಆಗಿದೆ.

ಈ ಸನ್ನಿವೇಶದಲ್ಲಿ ಮೌಲಾನಾ ಮೌದೂದಿ ಸಾಹೇಬರ ಸಹಧರ್ಮಿಣಿ ನೀಡಿದ ಪತ್ರಿಕಾ ಹೇಳಿಕೆಯನ್ನು ನಾವು ಮತ್ತೊಮ್ಮೆ ಓದಿನೋಡಬೇಕಾಗಿದೆ. ಅದನ್ನು ಒಂದು ಅಮೂಲ್ಯ ದಾಖಲೆಯೆಂಬಂತೆ ನಾವು ಜೋಪಾನವಾಡಿ ಇಟ್ಟುಕೊಳ್ಳಬೇಕಾಗಿದೆ.

## ವಿರೋಧಿಗಳಿಗೆ ಎಚ್ಚರಿಕೆ

ಹಝ್ರತ್ ಅಹ್ಮದ್ (ಅ) ಅವರಿಗೆ ದೇವರಿಂದ ಲಭಿಸಿದ ಒಂದು ದಿವ್ಯವಾಣಿ ಈರೀತಿಯಿದೆ:

اِنی مہین من اراد اِہانتک

"ನಿನ್ನನ್ನು ನಿಂದಿಸಲು ಪ್ರಯತ್ನಿಸುವವನನ್ನು ಖಂಡಿತವಾಗಿಯೂ ನಾನು ನಿಂದನೆಗೆ ಗುರಿ ಪಡಿಸುವೆನು."

ಆ ದಿವ್ಯಾತ್ಮರ ಕುರಿತು ಜನಸಾಮಾನ್ಯರೆಡೆಯಲ್ಲಿ ತಾತ್ಸಾರವನ್ನೂ ಅಪಮಾನಕರವಾದ ನಿಂದನೆಗಳನ್ನೂ ಪ್ರಚಾರ ಮಾಡುತ್ತಿರುವ ಅವರ ಎಲ್ಲಾ ವಿರೋಧಿಗಳಿಗೂ ಅನ್ವಯಿಸುವಂತಹ ಈ ಅಲ್ಲಾಹನ ತಾಕೀತು ಅಂದಿನಿಂದ ಇಂದಿನ ವರೆಗೂ ಅದರ ಪೂರ್ಣ ಪ್ರತಾಪದೊಂದಿಗೆ ಕಾರ್ಯವೆಸಗುತ್ತಾ ಬಂದಿರುತ್ತದೆ.

ತೊಂಭತ್ತು ವರ್ಷಗಳ ಮೊದಲು ಹಝ್ರತ್ ಅಹ್ಮದ್ ಅವರು ತಾನು ದೇವರಿಂದ ನಿಯೋಜಿತನಾದ ಮಹ್‌ದೀ–ಮಸೀಹ್ ಆಗಿರುವೆನೆಂದು ಸಾರಿದಾಗ ಮೌದೂದಿ ಸಾಹೇಬರಂತೆ ಅಗ್ರಗಣ್ಯನಾದ ಓರ್ವ ಮೌಲವಿ ಇತರ ಅನೇಕ ಮೌಲವಿಗಳ ಮುಖಂಡತ್ವ ವಹಿಸಿಕೊಂಡು ರೋಷಾವೇಶದಿಂದ ಸಮರಾಂಗಣಕ್ಕೆ ಜಿಗಿದಿದ್ದರು. 'ಮೌಲವಿ ಅಬೂ ಸಯೀದ್ ಮುಹಮ್ಮದ್ ಹುಸೇನ್ ಬಟಾಲವೀ' ಎಂಬ ಹೆಸರಿನಿಂದ ವಿಖ್ಯಾತರಾಗಿದ್ದ ಆ ಅಹ್ಲೆಹದೀಸ್ ವಿಧ್ವಾಂಸ, ಹಿಜರಿ 14ನೇ ಶತಮಾನದಲ್ಲಿ ಉದಯಿಸಿದ ಇಮಾಂ ಮಹ್‌ದಿಯ ವಿರುದ್ಧ 'ಕುಫ್ರ್ ಫತ್ವಾ' ಸಿದ್ಧಪಡಿಸಲಿಕ್ಕೂ ಅವರನ್ನು ತೇಜೋವಧೆ ಮಾಡಲಿಕ್ಕೂ ಇಂಡಿಯಾ ದೇಶದಲ್ಲಿಡೀ ಸಂಚರಿಸಿದರು. ಸಾಲದ್ದಕ್ಕೆ ಪವಿತ್ರ ನಗರಗಳಾದ ಮಕ್ಕಾ ಮದೀನಾಕ್ಕೂ ಪ್ರಯಾಣ ಬೆಳೆಸಿ ಇನ್ನೂರರಷ್ಟು ಸುಪ್ರಸಿದ್ಧ ಮೌಲವಿಗಳಿಂದ ಸಹಿಗಳನ್ನು ಸಂಗ್ರಹಿಸಿ ಮತಭ್ರಷ್ಟತೆಯ ವಿಧಿಯನ್ನು ಹೊರಡಿಸಿದರು. ತನ್ನ ಅಪರಿಮಿತ ಪಾಂಡಿತ್ಯದಲ್ಲೂ ಅಚಂಚಲವಾದ ಜನಬೆಂಬಲದಲ್ಲೂ ಅಹಂಭಾವಿತನಾಗಿದ್ದ ಆ ಮೌಲವಿ ಈ ರೀತಿ ಗರ್ಜಿಸಿದರು–"ಮಿರ್ಝಾನನ್ನು ಉನ್ನತಕ್ಕೇರಿಸಿದ್ದು ನಾನು, ನಾನೇ ಅವನನ್ನು ಕೆಳಗಿಳಿಸುವೆನು!"

ಆ ಮೌಲಾನಾ ಈ ರೀತಿ ಆಕ್ರೋಶಿಸುವಾಗ ಅವರಿಗೆ ಜನಕೋಟಿಗಳ ಬೆಂಬಲವಿತ್ತು. ಸರಕಾರಿ ವರ್ತುಲಗಳಲ್ಲಿ ಬಹಳಷ್ಟು ಸ್ವಾಧೀನ ಶಕ್ತಿಯೂ ಇತ್ತು. ಇತರ ಮುಸ್ಲಿಂ ಪಂಗಡದ ಮೌಲವಿಗಳ ಮಧ್ಯೆ ವಿಶಿಷ್ಟವಾದೊಂದು ವ್ಯಕ್ತಿತ್ವವೂ ಸ್ವಂತ ಮುದ್ರಣಾಲಯವೂ ತನ್ನದೇ ಸಂಪಾದಕೀಯದಲ್ಲಿ ಪ್ರಕಟವಾಗುವ ಸ್ವಂತ ಪತ್ರಿಕೆಯೂ ಸಾಲದ್ದಕ್ಕೆ ತಾನೇ ನಾಯಕನಾಗಿರುವ ಒಂದು ಪಂಗಡದ ಮುಸ್ಲಿಂ ಸಮೂಹವೂ ಶಿಷ್ಯಗಣವೂ ಪರಿಚಾರಕರೂ ಎಲ್ಲಾ ಇದ್ದುವು.

ಇದಕ್ಕೆದುರಾಗಿ, ಹಝ್ರತ್ ಅಹ್ಮದ್ ಅವರು 1884ರಲ್ಲಿ ತನ್ನ ದೇವ ನಿಯೋಜಿತ ವಾದವನ್ನು ಘೋಷಿಸುವಾಗ ಅವರು ಒಬ್ಬಂಟಿಗರಾಗಿದ್ದರು. ಸುತ್ತಲೂ ಭಯಭೀತಿಯ ವಾತಾವರಣ. ಈ ಹಿನ್ನೆಲೆಯಲ್ಲಿ, ತನ್ನನ್ನು 'ಕೆಳಗಿಳಿಸುವ' ದೀಕ್ಷೆಯೊಂದಿಗೆ 'ಕುಫ್ರ್ ಫತ್ವಾ'ದ ವಜ್ರಾಯುಧವನ್ನು ಪ್ರಯೋಗಿಸುತ್ತಾ ರಣಭೇರಿ ಮೊಳಗಿಸಿದ ಆ ಮೌಲಾನಾರೊಡನೆ ಹಝ್ರತ್ ಅಹ್ಮದ್ (ಅ) ಶಾಂತಚಿತ್ತರಾಗಿ ಹೇಳಿದರು–

"ಎಲೈ ನನ್ನನ್ನು ಕಾಫಿರ್ ಎಂದು ಸಾರಲು
ಕಂಕಣಬದ್ಧನಾಗಿ ಹೊರಟಿರುವ ಮನುಷ್ಯಾ,
ನಿನ್ನ ಸ್ವಂತ ಮನೆಯು ಅನಾಥವಾಗಲಿದೆ.
ವಿನಾಶಕ್ಕೆ ನೀಗುತ್ತಿರುವ ನೀನು ಅನ್ಯರನ್ನು
ಕಾಫಿರ್ ಎಂದು ಘೋಷಿಸುವ ಚಿಂತೆಯಲ್ಲಿರುವಿ!"

ಹಝ್ರತ್ ಅಹ್ಮದ್ ಅವರ ಈ ಮಾತುಗಳ ನಂತರ ಆ ಮೌಲಾನಾರ ಜೀವನದಲ್ಲಿ ಸಂಭವಿಸಿದ ಘಟನೆಗಳು ಇತಿಹಾಸದ ಪುಟಗಳನ್ನು ಸೇರಿಕೊಂಡವು. ಕಾಲ ಕ್ರಮೇಣವಾಗಿ ಮೌಲಾನಾರ ಸ್ಥಾನ–ಮಾನಗಳೆಲ್ಲಾ ನೀಗತೊಡಗಿತು. ಯಾವ ಸಮುದಾಯದ ಬೆಂಬಲದ ಗರ್ವದಿಂದ ಆ ಮೌಲವಿಯು ಇಮಾಂ ಮಹ್‌ದಿಯನ್ನು ಕಾಫಿರ್ ಎಂದು ಹೇಳಿದರೋ ಅದೇ ಸಮುದಾಯವು ಆ ಮೌಲವಿಯನ್ನು ಕಾಫಿರ್ ಎಂದು ಘೋಷಿಸಿತು. ಸನಾವುಲ್ಲಾ ಅಮೃತಸರೀ ಎಂಬ ವಾಚಾಳಿಯಾದ ಎಳೆಯ ಪ್ರಾಯದ ಮತ್ತೋರ್ವ ಮೌಲವಿಯಿದ್ದರು. ಮೌಲಾನಾರು ತನ್ನ 'ಆಧ್ಯಾತ್ಮಿಕ ಪುತ್ರ'ನೆಂಬ ಬಹುಮತಿ ನೀಡಿ ಗೌರವಿಸಿದ ಈ ಸನಾವುಲ್ಲಾರ ಬಾಯಿಯಿಂದಲೇ ಅತಿ ಕಠೋರವಾದ ಬೈಗಳನ್ನು ಮೌಲಾನಾರಿಗೆ ಬಹಿರಂಗವಾಗಿ ಸ್ವೀಕರಿಸಬೇಕಾಯಿತು. ಮೌಲಾನಾರ

ಸ್ವಂತಮಕ್ಕಳು ಕೂಡಾ ಅವರಿಗೆ ವಿರುದ್ಧವಾಗಿ ಸ್ವರ ವೆತ್ತಿದಾಗ ಅವರಲ್ಲಿ ಒಬ್ಬೊಬ್ಬರ ಹೆಸರನ್ನು ಹೇಳುತ್ತಾ ಅವರ್‍ಯಾರೂ ತನ್ನ ಮಕ್ಕಳಲ್ಲವೆಂದು ಹೇಳಬೇಕಾದ ಗತಿಗೇಡು ಮೌಲಾನರಿಗೆ ಉಂಟಾಯಿತು. ಕೊನೆಗೆ ತನ್ನ ಸ್ವಂತ ಪತ್ರಿಕೆಯಲ್ಲಿ ಸ್ವಂತ ಮಕ್ಕಳ ಕುರಿತು ಅವರು ಈ ರೀತಿ ಬರೆದರು:

"ನನ್ನ ಗಂಡು ಮಕ್ಕಳ ದುಷ್ಕೃತ್ಯಗಳು ದೇವ ನಿರ್ದೇಶಗಳನ್ನು ಸಂಪೂರ್ಣ ಉಲ್ಲಂಘಿಸಿಕೊಂಡು ಕುಫ್ರಿಯ್ಯತ್‌ನ ಸೀಮೆಯೊಳಗೆ ಪ್ರವೇಶಿಸಿದೆ. ನನ್ನ ಭಾವನೆ ಮಾತ್ರವೆಂದು ನಾನು ತಿಳಿದಿದ್ದ ವಿಚಾರಗಳು ನಿಜ ಸಂಗತಿಗಳೆಂದು ಈಗ ನನ್ನ ಅನುಭವಕ್ಕೆ ಬರತೊಡ ಗಿರುತ್ತವೆ. ಅದೇನೆಂದರೆ, 25 ಸಾವಿರ ರೂಪಾಯಿಗಳಿ ಗಿಂತಲೂ ಹೆಚ್ಚಿಗೆ ಬೆಲೆ ಬಾಳುವಂತಹ ನನ್ನ ಆಸ್ತಿ ಪಾಸ್ತಿಗಳನ್ನು ನಾನು ನನ್ನ ಸ್ವಾಧೀನದಲ್ಲೇ ಇರಿಸಿ ತೀರಿಹೋದರೆ, ಅದರ ಹಕ್ಕುದಾರರಾಗುವ, ಪರಸ್ತ್ರೀ ಸಹಗಮನದಲ್ಲೂ ಮದ್ಯ ಲಹರಿಯಲ್ಲೂ ಕಾಲಕಳೆಯು ತ್ತಿರುವ ನನ್ನ ಮಕ್ಕಳು ಕೇವಲ ಕೆಲವೇ ದಿವಸಗಳಲ್ಲಿ ಅದನ್ನೆಲ್ಲಾ ವೇಶ್ಯಾವಾಟಿಕೆಯಲ್ಲೂ ಮದ್ಯಪಾನದಲ್ಲೂ ಮುಗಿಸಿಬಿಡುವರು. ನನ್ನ ಈ ಮಕ್ಕಳೂ ಅವರ ಬಳಗ ದವರೂ ಶರೀಅತ್ ವಿಧಿಗಳನ್ನು ಉಲ್ಲಂಘಿಸುವವರಾಗಿ ದ್ದಾರೆ. ಧಾರ್ಮಿಕ ಶಿಕ್ಷಣದ ಆವಶ್ಯಕತೆಯನ್ನು ಅಲ್ಲಗಳೆ ಯುವವರಾಗಿದ್ದಾರೆ. ಮಕ್ಕಳಲ್ಲಿ ಒಬ್ಬನು ನನ್ನ ಮುಖ ನೋಡಿ "ನೀನು ನನ್ನ ತಂದೆಯಲ್ಲ" ಎಂದು ಹೇಳಿದ್ದಾನೆ! ಇತರರು ಮರೆಯಲ್ಲಿ ಅಡಗಿನಿಂತು ಕೇಳುತ್ತಾರೆ– 'ಈತನು ನಮ್ಮ ತಂದೆಯಾದುದು ಹೇಗೆ?' ಎಂದು"

(ಇಶಾಅತುಸ್ಸುನ್ನ 1909– ಸಂಪುಟ 22 ಸಂಚಿಕೆ 203)

90 ವರ್ಷಗಳ ಹಿಂದೆ ಇಮಾಂ ಮಹ್‌ದಿಯವರ ವಿರುದ್ಧ ಸಮರ ರಂಗಕ್ಕಿಳಿದ ಮೌಲವಿ ಅಬೂ ಸಯೀದ್ ಬಟಾಲವೀ, ಕೊನೆಗೆ ತನ್ನ ಸ್ವಂತ ಮಕ್ಕಳಿಂದಲೇ ಅಪಮಾನಿತನಾಗುವಂತಹ ಪತನಕ್ಕೆ ತಳ್ಳಲ್ಪಟ್ಟರು. ಹಝ್ರತ್ ಅಹ್ಮದ್ (ಅ) ಭವಿಷ್ಯನುಡಿದ ದೈವಿಕ ಶಿಕ್ಷೆಯು ಹರಿತವಾದ ಒಂದು ಖಡ್ಗದಂತೆ ಆ ಮೌಲವಿಯ ಕುತ್ತಿಗೆ ಮೇಲೆ ಬಿದ್ದುದೇ ಈ ರೀತಿ ಸಂಭವಿಸಲಿಕ್ಕೆ ಕಾರಣ. ಅದೊಂದು ಆಕಸ್ಮಿಕ ಸಂಭವವಲ್ಲ. ಮೇಲೆ ಹೇಳಿದ ದೈವಿಕ ಮುನ್ನೆಚ್ಚರಿಕೆಯು ಒಂದು ನಿತ್ಯನಿಯಮ ದಂತೆ ಮಹ್‌ದೀ ಮಸೀಹಾರ ಶತ್ರುಗಳ ವಿರುದ್ಧ ಅಂದಿನಿಂದ ಇಂದಿನವರೆಗೂ ನೆರವೇರುತ್ತಾ ಬಂದಿರು ವುದು ಇದಕ್ಕೆ ಸಾಕಾದ ಪುರಾವೆಯಾಗಿದೆ.

ಪತ್ರಿಕಾ ವರದಿಗಳ ಮೂಲಕ ನಮ್ಮ ಗಮನ ಸೆಳೆದ ಈ ಮೌಲಾನಾ ಅಬೂಲ್ ಆಲಾ ಮೌದೂದಿ ಇದೀಗ 90 ವರ್ಷಗಳ ಬಳಿಕ ಕೊನೆಯದಾಗಿ ಇಮಾಂ ಮಹ್‌ದಿಯವರ ವಿರುದ್ಧ ಗಟ್ಟಿಯಾಗಿ ಕೂಗಿದ ಅತಿ ಕಾಯರಾಗಿದ್ದಾರೆ. ಇವರು ಮತಭ್ರಷ್ಟತೆಯ ಖಡ್ಗ ವನ್ನು ಝಳಪಿಸುತ್ತಾ ಪಾಕಿಸ್ತಾನದಲ್ಲಿ ಅಹ್ಮದಿಯರನ್ನು ಬಹಳವಾಗಿ ಪೀಡಿಸುತ್ತಿದ್ದರು.

ಇಸ್ಲಾಮಿನ ಹೆಸರಿನಲ್ಲಿ ಆಡಳಿತಾಧಿಕಾರವನ್ನು ಕಿತ್ತುಕೊಳ್ಳಲು ಕೊನೆಯ ತನಕ ಪರಿಶ್ರಮಿಸಿದ ಈ ಮೌಲಾನಾ ತನ್ನ ಜೀವನದಲ್ಲಿ ಅದು ಸಫಲವಾಗಲಿಲ್ಲ ವೆಂಬ ನಿರಾಶೆಯೊಂದಿಗೆ ಕಾಲಗತರಾದರು. ಆದರೆ, ಅದಕ್ಕಿಂತಲೂ ದುಃಖದ ವಿಷಯವೇನೆಂದರೆ, ದಾರುಣ ವಾದ ಈ ನಿರಾಶೆಯೊಂದಿಗೇ ಅವರ ಆಧ್ಯಾತ್ಮಿಕ ನಾಯ ಕತ್ವವನ್ನು ಪ್ರಶ್ನಿಸುವ ರೀತಿಯಲ್ಲಿ ಸ್ವಂತ ಮಕ್ಕಳು ಅವರನ್ನು ಅಪಮಾನಿಸಿದ್ದಾಗಿದೆ.

ಹೀಗೆ ಮಹ್‌ದಿ ಮಸೀಹಾರ ವಿರುದ್ಧವಾಗಿ ಸ್ವರ ವೆತ್ತಿದ ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿಗೆ ತನ್ನ ಸ್ವಂತ ಮಕ್ಕಳು ಯಾವ ರೀತಿ ದೇವಶಾಪವಾಗಿ ಪರಿಣಮಿಸಿದರೋ ಅದೇ ರೀತಿ ಇಮಾಂ ಮಹ್‌ದಿ ಯವರ ಈ ಕಾಲದ ವಿರೋಧಿಯಾಗಿ ರಂಗಪ್ರವೇಶ ಮಾಡಿದ ಮೌಲವಿ ಮೌದೂದಿಯವರಿಗೂ ತನ್ನ ಸಂತಾನಗಳು ದೇವಶಾಪವಾಗಿ ಪರಿಣಮಿಸಿತೆಂದು ಅವರ ಪತ್ನಿ ಇದೀಗ ನಮ್ಮೆದುರು ಸಾಕ್ಷಿ ಹೇಳಿದ್ದಾರೆ.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಸಂತತಿಗಳ ಬಗ್ಗೆ ಹೇಳುವುದಾದರೆ, ಅವರ ಮಕ್ಕಳಲ್ಲಿ ಪ್ರತಿಯೊಬ್ಬರ ಕುರಿತೂ ದೇವರಿಂದ ಲಭಿಸಿದ ಶುಭ ವಾರ್ತೆಗಳ ಆಧಾರದಲ್ಲಿ ಅವರು ಭವಿಷ್ಯ ನುಡಿದಿದ್ದರು. ಭವಿಷ್ಯವಾಣಿಗಳ ಪ್ರಕಾರವೇ ಅವರಿಗೆ ಮಕ್ಕಳು ಜನಿಸಿ ದರು. ಇಂದು ಆ ಸಂತಾನ ಪರಂಪರೆಯು ನೂರಾರು ಸಂಖ್ಯೆಯಲ್ಲಿ ವರ್ಧಿಸಿದೆ. ಆಧ್ಯಾತ್ಮಿಕವಾಗಿಯೂ

# ಪಾಪಕ್ಕೊಂದು ನೆಪ

ಕಳೆದ ಸೆಪ್ಟಂಬರ್ ತಿಂಗಳು 4ನೇ ತಾರೀಕಿನಂದು ಪೂರ್ವಾಹ್ನ $11\frac{1}{2}$ ಗಂಟೆಗೆ ರಾಜಸ್ಥಾನದ ದೇವರಾಲ ಎಂಬ ಗ್ರಾಮದಲ್ಲಿ 18 ವರ್ಷ ಪ್ರಾಯದ ಮೆಟ್ರಿಕ್ ಪಾಸಾದ ನವವಿವಾಹಿತಳಾದ ರೂಪ್ ಕನ್ವರ್ ಎಂಬ ತರುಣಿಯನ್ನು ಆಕೆಯ ಪತಿ ರಾಜಪೂತ ಜಾತಿಯ ಮಾನಸಿಂಗ್ ಶೆಖಾವತನ ಶವದೊಂದಿಗೆ ಸುಟ್ಟುಹಾಕಿದ ಹೃದಯವಿದ್ರಾವಕ ಘಟನೆಯು ಸಂಭವಿಸಿತು. ಈ ಸಂಭವ ನಡೆದು ಹದಿಮೂರನೇ ದಿವಸ ತಾ. 16ರಂದು ತಥಾಕಥಿತ "ಸತಿಸ್ಥಳದ"ಲ್ಲಿ ಚುನರಿ ಸಮಾರಂಭದ ಏರ್ಪಾಡಾಯಿತು. ಇವೆಲ್ಲಾ ಸಂಗತಿಗಳು ಹಲವಾರು ದಿನಗಳಿಂದ ಪತ್ರಿಕೆಗಳಲ್ಲಿ ಚರ್ಚಾವಿಷಯಗಳಾಗಿವೆ. ಅನಾಗರಿಕ ಕಾಲದ ನೆನಪನ್ನು ಹೊಸದಾಗಿ ಉಂಟುಮಾಡಬಹುದಾದ ಈ ಅತ್ಯಂತ ಕಠೋರ ಮತ್ತು ಭಯಂಕರ ಅಪರಾಧದ ಕುರಿತು ತಿಳಿದು ಬಂದಿರುವ ವಾಸ್ತವಿಕಾಂಶಗಳು ಈ ರೀತಿ ಇವೆ:

* ರೂಪ್‌ಕನ್ವರಳ ಮಾವ ಮತ್ತು ಮೈದುನ ಸಹಿತ 52 ಜನರನ್ನು ಭಾರತೀಯ ದಂಡ ಸಂಹಿತೆಯ 302 ಮತ್ತು 306ರ ಕಲಮು ಪ್ರಕಾರ ದಸ್ತಗಿರಿ ಮಾಡಲಾಗಿದೆ. ಅವರ ಹೇಳಿಕೆ ಪ್ರಕಾರ ರೂಪ್‌ಕನ್ವರ್ ಸ್ವಂತ ಇಷ್ಟಪ್ರಕಾರ ಸತಿಯಾದಳು. ಆದರೆ ಹಲವಾರು ಪತ್ರಿಕಾ ವರದಿಗಾರರ ಅನ್ವೇಷಕ ವರದಿಗಳ ಪ್ರಕಾರ ರೂಪ್ ಕನ್ವರಳನ್ನು "ಸತಿಮಾತಾ" ಮತ್ತು "ಸತಿಸಾವಿತ್ರಿ" ಮಾಡುವ ಮುಖ್ಯ ಉದ್ದೇಶ ಆಕೆಯನ್ನು ಆಕೆಯ ಪತಿಯ ಆಸ್ತಿಯ ಹಕ್ಕಿನಿಂದ ವಂಚಿತಳನ್ನಾಗಿ ಮಾಡುವುದಾಗಿತ್ತು.

* ಚರಿತ್ರೆ ತಿಳಿಸಿಕೊಡುವುದೇನೆಂದರೆ, ವಿಧವೆಯ

---

ಭೌತಿಕವಾಗಿಯೂ ಉನ್ನತ ಸ್ಥಾನಮಾನಗಳನ್ನು ಹೊಂದಿರುತ್ತಾರೆ. ತನ್ನ ಬೀಜದಿಂದ ಜನಿಸಲಿರುವ ಒಬ್ಬ ಮಗ ಆಕೃತಿಯಲ್ಲೂ ಪ್ರಕೃತಿಯಲ್ಲೂ ತನ್ನನ್ನು ಹೋಲುವನೆಂದೂ ತನಗೆ ಸದೃಶನಾಗಿ ಜನಿಸುವ ಆ ಪುತ್ರನು ಅಪಾರವಾದ ಧರ್ಮಸೇವೆಯನ್ನು ಮಾಡುವನೆಂದೂ ಆ ಮಹಾತ್ಮರು ಭವಿಷ್ಯ ನುಡಿದಿದ್ದರು. ಅದರಂತೆ, ಅವರ ಹಿರಿಯ ಮಗ ಬಶೀರುದ್ದೀನ್ ಮಹಮೂದ್ ಅಹ್ಮದ್ ಎಲ್ಲಾ ಲಕ್ಷಣಗಳೊಂದಿಗೆ ಬೆಳೆದು ಬಂದು 25ನೇ ವರ್ಷ ಪ್ರಾಯದಲ್ಲಿ ಅಹ್ಮದಿಯಾ ಜಮಾಅತಿನ ಖಲೀಫಾ ಆಗಿ ಚುನಾಯಿತರಾದರು. ಸಾರ್ವಲೌಕಿಕವಾದ ಇಸ್ಲಾಂ ಧರ್ಮ ಪ್ರಚಾರ ಅಭಿಯಾನ ಆರಂಭವಾದುದು ಅವರ ಕಾಲದಲ್ಲಾಗಿತ್ತು. ಅವರ ಅನುಗ್ರಹೀತ ಖಿಲಾಫತ್ ಕಾಲಾವಧಿಯು 52 ವರ್ಷಗಳಷ್ಟು ದೀರ್ಘ ಕಾಲ ಮುಂದುವರಿಯಿತು.

ಒಬ್ಬ ಕಪಟವಾದಿ ಅಥವಾ ಮಿಥ್ಯಾಪ್ರವಾದಿಗೆ ಈ ರೀತಿಯಾಗಿ ಅಲ್ಲಾಹನ ಆಕಾಶದಡಿಯಲ್ಲಿ ಒಂದು ನೂರು ವರ್ಷಗಳ ಕಾಲ ಅಭಿವೃದ್ಧಿ ಸಾಧಿಸಿ ವಿಜಯಗಳಿಸಲು ಸಾಧ್ಯವಿದೆಯೇ ? ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರಿಂದ ಸ್ಥಾಪಿಸಲ್ಪಟ್ಟ ಅಹ್ಮದಿಯಾ ಸಂಘಟನೆಯು ಎದುರಾಳಿಗಳ ಎಲ್ಲಾ ರೀತಿಯ ವಿರೋಧಗಳನ್ನೂ ಜಯಿಸಿಕೊಂಡು, ಅದಕ್ಕೆ ದುರಾಗಿ ತಲೆಯೆತ್ತುವ ಪಂಡಿತರನ್ನೂ ವಿದ್ವಾಂಸರನ್ನೂ ರಾಷ್ಟ್ರನಾಯಕರನ್ನೂ ರಾಜರನ್ನೂ ರಾಜ್ಯಾಡಳಿತಗಳನ್ನೂ ಶಕ್ತಿದುರ್ಗಗಳನ್ನೂ ನುಚ್ಚುನೂರು ಮಾಡುತ್ತಾ ದೈವಿಕ ವಾಗ್ದಾನಗಳ ಪ್ರಕಾರ ವಿಜಯದಿಂದ ವಿಜಯಕ್ಕೆ ಸಾಗುತ್ತಿರುವುದು ನಮಗೆ ಅನುಭವವೇದ್ಯವಾದ ಸತ್ಯವೆಂದಾದರೆ, ಪವಿತ್ರ ಖುರ್‌ಆನ್ ವಿವರಿಸುವ ಸಂಗತಿಗಳಲ್ಲಿ ನಂಬಿಕೆಯಿರುವ ಯಾರಿಗೂ ಕೂಡಾ ಹಝ್ರತ್ ಅಹ್ಮದ್ ಅವರನ್ನು ಅಷ್ಟೊಂದು ಲಘುವಾಗಿ ಪರಿಗಣಿಸಲು ಸಾಧ್ಯವಾಗಲಾರದು.

ಫಅ್‌ತಬಿರೂ ಯಾ ಊಲಿಲ್ ಅಲ್‌ಬಾಬ್.

---

ರನ್ನು ಸುಟ್ಟುಹಾಕುವ ಪ್ರಾಚೀಯ ಪದ್ಧತಿ ಹಿಂದುಗಳಲ್ಲಿ ಸರ್ವಸಾಮಾನ್ಯವಾಗಿದ್ದಿತು. ಸುಟ್ಟುಹಾಕಲಾಗುವ ಸ್ತ್ರೀಯರು ಮರಣ ಭೀತಿಯಿಂದ ಚಿತೆಯಿಂದ ಎದ್ದು ಓಡಿಹೋಗಲು ಯತ್ನಿಸುತ್ತಿದ್ದರು. ಆದರೆ ಪಾಷಾಣ ಹೃದಯರಾದ ಜನರು ಅವರನ್ನು ಚಿತೆಯೊಳಗೆಯೇ ಪುನಃ ನೂಕುತ್ತಿದ್ದರು. ಪ್ರತ್ಯಕ್ಷ ಸಾಕ್ಷಿಗಳ ವರದಿ ಪ್ರಕಾರ ರೂಪ್‌ಕನ್ವರ್ ಸಹ ಭಯಭೀತಳಾಗಿ ಗಾಬರಿಯಿಂದ ಚಿತೆಯಿಂದ ಎದ್ದುಓಡಲು ಎರಡು ಸಾರಿ ಪ್ರಯತ್ನ ಮಾಡಿದ್ದಳು. ಆದರೆ ಅವಳನ್ನು ಪುನಃ ಚಿತೆಗೆ ನೂಕಲಾಯಿತು; ಮತ್ತು ಕರುಳು ಕತ್ತರಿಸುವ ಆಕೆಯ ಚೀತ್ಕಾರಗಳು "ಸತಿಮಾತಾ ಕಿ ಜೈ", "ಸತಿಮಾತಾ ಅಮರ್ ರಹೇ" ಎಂಬ ಹುಚ್ಚು ಘೋಷಣೆಗಳ ಭಾರೀ ಗದ್ದಲದಲ್ಲಿ ಎಂದೆಂದಿಗೂ ದಬ್ಬಲ್ಪಟ್ಟವು.

* ಜನರ ಜೀವ, ಸಂಪತ್ತು ಮತ್ತು ಗೌರವದ ಸಂರಕ್ಷಕರಾದ ಪೋಲೀಸರು ಈ ದುರ್ಘಟನೆ ನಡೆದು 5 ಗಂಟೆಗಳ ನಂತರ ಘಟನೆಯ ಸ್ಥಳಕ್ಕೆ ತಲಪಿದರು. ಆದರೆ ಜನರ ಆವೇಶಾತಿರೇಕಗಳನ್ನು ನೋಡಿಕೊಂಡು ತೆಪ್ಪಗೆ ಹಿಂದಿರುಗಿ ಹೋದರು. 12 ದಿನಗಳ ತನಕ ಯಾವುದೇ ಕೇಸು ದಾಖಲಾಗಲಿಲ್ಲ ಮತ್ತು ಯಾವುದೇ ದಸ್ತಗಿರಿ ಸಹ ನಡೆಯಲಿಲ್ಲ.

* ಸತಿ ಪದ್ಧತಿ ಅಪರಾಧವೆಂದೂ ದಂಡನಾರ್ಹವೆಂದೂ ಎಷ್ಟೋ ವರ್ಷಗಳ ಮೊದಲು ಸರಕಾರದಿಂದ ಘೋಷಿಸಲಾಗಿದ್ದರೂ, ರಾಜ್ಯ ಸರಕಾರಕ್ಕಾಗಲೀ ಕೇಂದ್ರ ಸರಕಾರಕ್ಕಾಗಲೀ ರೂಪ್ ಕನ್ವರಳ ಜೀವವುಳಿಸಲು ಸಾಧ್ಯವಾಗಲಿಲ್ಲ. ಮತ್ತು ರಾಜಸ್ಥಾನ ಹೈಕೋರ್ಟಿನ ತಡೆಯಾಜ್ಞೆಯಿದ್ದರೂ ಚುನರೀ ಸಮಾರಂಭ ನಡೆಯುದೆಯೂ ಇರಲಿಲ್ಲ. ಆ ಸಂದರ್ಭದಲ್ಲಿ ಅಂಧ ವಿಶ್ವಾಸಿಗಳಾದ ಹಳ್ಳಿಗರೊಂದಿಗೆ ಜನರ ಹಿತಸಂರಕ್ಷಕರೆಂದು ಸ್ವಯಂಭಾವಿಸಿಕೊಳ್ಳುವ ರಾಜ್ಯ ವಿಧಾನಸಭೆಯ ಹಲವಾರು ಸದಸ್ಯರು ಮತ್ತು ಎಷ್ಟೋ ವಿದ್ವಾಂಸರು ಭಾಗವಹಿಸಿದರು. ಆ ಸಂದರ್ಭದಲ್ಲಿ ಸತಿ ಸ್ಥಳದಲ್ಲಿ ಮಂದಿರ ನಿರ್ಮಿಸಲು ಮತ್ತು ರೂಪ್‌ಕನ್ವರಳಿಗೆ ಅವಳ ಜನ್ಮಸ್ಥಳದಲ್ಲಿ ಸ್ಮಾರಕ ನಿರ್ಮಿಸಲು 30–40 ಲಕ್ಷ ರೂಪಾಯಿಗಳನ್ನು ಶೇಖರಿಸಲಾಯಿತು.

* ದೇವರಾಲ ಗ್ರಾಮದ ಕಳೆದ 150 ವರ್ಷಗಳ ಚರಿತ್ರೆಯಲ್ಲಿ ಇದು ನಾಲ್ಕನೆಯ ಸತಿಯಾಗಿತ್ತು ಎಂಬುದು ಬಹಳ ಖೇದಕರವಾಗಿದೆ. ಇದರ ಮೊದಲು ಕುಂದನ್ ಕನ್ವರ್, ಜೂಮಾ ರಾಣಿ, ಮಿಟ್ಟು ಕನ್ವರ್ ಎಂಬ ಮೂರು ರಾಜಪೂತ ಸ್ತ್ರೀಯರು ಸತಿಯಾಗಿದ್ದರು ಮತ್ತು ಅವರ ಸ್ಮಾರಕ ಇಂದಿಗೂ ಗ್ರಾಮದಲ್ಲಿದೆ. ವಾಸ್ತವಿಕ ಸಂಗತಿಯೇನೆಂದರೆ, ಈಗ ಭಾರತದಲ್ಲಿ ಸತಿ ಮಾತೆಯರ ಅಂದಾಜು 140 ಮಂದಿರಗಳಿವೆ. ಇವುಗಳಲ್ಲಿ 40 ರಾಜಸ್ಥಾನದಲ್ಲಿವೆ.

* ಭಾರತದಾದ್ಯಂತ ಈ ಭೀಕರ ಸಂಭವದ ಬಗ್ಗೆ ಜನರು ಪ್ರತಿಭಟನೆ ಸೂಚಿಸಿರುವುದರಿಂದ ಸರಕಾರ 52 ಜನರನ್ನು ಅಪರಾಧಿಗಳಾಗಿ ದಸ್ತಗಿರಿ ಮಾಡಿದಾಗ ಸಾಂಪ್ರದಾಯಕ ಮುಂಡಾಸುಧಾರಿಗಳಾದ ಒಂದು ಸಾವಿರ ಮಂದಿ ರಾಜಪೂತರು ಸರಕಾರದ ಈ ಶಾಸನದ ವಿರುದ್ಧ ತಮ್ಮ ದುಃಖ ಮತ್ತು ಕ್ರೋಧವನ್ನು ಸೂಚಿಸುವ ಪ್ರದರ್ಶನ ಮಾಡಿದರು. ಪುರಿಯ ಶಂಕರಾಚಾರ್ಯರಾದ ಸ್ವಾಮಿ ನಿರಂಜನ ದೇವ ತೀರ್ಥರು ಸತಿಯನ್ನು ಬೆಂಬಲಿಸಿ ಮಾತನಾಡುತ್ತ ರಾಜಸ್ಥಾನ್ ಸರಕಾರ ಜಾರಿಗೊಳಿಸಿದ ಅಧ್ಯಾದೇಶ ಹಿಂದುಗಳ ಧಾರ್ಮಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪವೆಂದೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಭಂಗಪಡಿಸಿದಂತೆಯೂ ಎಂದು ಘೋಷಿಸಿದರು. ಬಾಕಿಉಳಿದಿರುವ ಶಂಕರಾಚಾರ್ಯರುಗಳು ಇಷ್ಟರವರೆಗೆ ಯಾವುದೇ ಹೇಳಿಕೆ ನೀಡಲಿಲ್ಲ. ದೇವರಾಲದ ಸತಿ ಸ್ಥಳದಲ್ಲಿ ರಾಜಪೂತರ ಒರೆಯೂರಿದ ಖಡ್ಗಗಳು ಆ ಸ್ಥಳದ ಸಂರಕ್ಷಣೆ ಮಾಡುತ್ತಾ ಇವೆ.

* ಈ ಪ್ರಾಚೀಯ ಪದ್ಧತಿಯ ಚಾರಿತ್ರಿಕ ಹಿನ್ನೆಲೆಯನ್ನು ಪರಿಶೋಧಿಸಿದರೆ, ಹಿಂದುಗಳ ಪವಿತ್ರಗ್ರಂಥಗಳಾದ ಋಗ್ವೇದ, ವಿಷ್ಣುಪುರಾಣ, ಮನುಸ್ಮೃತಿ, ರಾಮಾಯಣ ಮತ್ತು ಶ್ರೀಮದ್‌ಭಾಗವತದಲ್ಲಿ ಇದರ ಸ್ಪಷ್ಟವಾದ ನಿರೂಪಣೆ ಕಾಣುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಭಾರತದಲ್ಲಿ ಈ ದೌರ್ಜನ್ಯಕರವಾದ ಪದ್ಧತಿಗೆ ಬಹಳ ಪುರಾತನ ಕಾಲದಿಂದಲೇ ಧಾರ್ಮಿಕ ಪ್ರಾಮುಖ್ಯ ದೊರೆದಿತ್ತು – ಎಂದು. ಬ್ರಾಹ್ಮಣ, ಕ್ಷತ್ರಿಯ, ಜಾಟ್ ಮತ್ತು ರಾಜ್‌ಪೂತ

ಮೊದಲಾದ ಮೇಲ್ವರ್ಗದ ಜಾತಿಗಳಲ್ಲಿ ಹೆಂಗಸರ ವೈಧವ್ಯ ಬಹಳ ಅಪಶಕುನಕರವೆಂದೂ ಅವರ ಪುನರ್ ವಿವಾಹ ಶಾಪದಾಯಕವೆಂದೂ ಗ್ರಹಿಸಲಾಗುತ್ತಿತ್ತು. ಆದುದರಿಂದ ವಿಧವೆಯರ ನಿರ್ಮೂಲನಕ್ಕಾಗಿ ಸತಿಯಂತಹ ಕ್ರೂರ ಪದ್ಧತಿಯನ್ನು ಕಂಡುಹಿಡಿಯಲಾಯಿತು. ಪಂಡಿತ್ ಲೇಖ್‌ರಾಮ್ ಹೀಗೆಂದು ಬರೆದಿದ್ದಾರೆ:

"ಸತಿ ಪದ್ಧತಿ ಮನುಷ್ಯರು ಅಸಹ್ಯಪಡುವ ಪರಿಸ್ಥಿತಿಗಳಲ್ಲಿ ಜನ್ಮತಾಳಿತು. ಸ್ವಾರ್ಥದಲ್ಲಿ ಅದು ಪೋಷಿಸಲ್ಪಟ್ಟಿತು. ಸುಳ್ಳಿನಿಂದ ಅದು ಬೆಳೆಯಿತು. ಮತ್ತು ನಿರ್ದಯತೆಯಿಂದ ಅದು ಪೂರ್ತಿಗೊಂಡಿತು. (ಕುಲ್ಲಿಯಾತೆ ಆರ್ಯಾ ಮುಸಾಫಿರ್ ಭಾಗ–1, ಪುಟ 152)

ಇಸ್ಲಾಮ್ ಧರ್ಮಕ್ಕೆ ಮಾತ್ರ ಈ ವಿಶಿಷ್ಟತೆಯಿದೆ – ಅದು ವಿಧವೆಯರನ್ನು ಗೌರವದಿಂದ ಸಮಾಜದಲ್ಲಿ ಬಾಳಲು ಹಕ್ಕನ್ನು ನೀಡಿತಲ್ಲದೆ "ನಿಮ್ಮ ಪೈಕಿ ಇರುವ ವಿಧವೆಯರನ್ನು ವಿವಾಹವಾಗಿರಿ" (24 : 33) ಎಂದು ಪವಿತ್ರ ಖುರ್‌ಆನ್ ಆಜ್ಞಾಪಿಸಿ ವಿಧವೆಯರಿಗೆ ಪುನರ್ ವಿವಾಹದ ಆವಶ್ಯಕತೆಯನ್ನು ಒತ್ತಿಹೇಳಿತು. ಭಾರತವನ್ನಾಳಿದ ಹಲವಾರು ಮುಸ್ಲಿಮ್ ದೊರೆಗಳು ಇಸ್ಲಾಮ್ ಧರ್ಮದ ಅಪ್ರತಿಮ ಉಪದೇಶಗಳಿಂದ ಪ್ರಭಾವಿತರಾಗಿ ತಂತಮ್ಮ ಕಾಲದಲ್ಲಿ ಅನೇಕ ಸಾಮಾಜಿಕ ಸುಧಾರಣೆಗಳನ್ನು ಕೈಗೊಳ್ಳುವುದರೊಂದಿಗೆ ಸತಿ ಪದ್ಧತಿಯನ್ನು ಕಾನೂನಿನ ಮೂಲಕ ನಿಷೇಧಿಸುವುದರಲ್ಲಿ ಸಹ ಮುಂದಾಗಿದ್ದರು. ಭಾರತದ ಪ್ರಸಿದ್ಧ ವಿದ್ವಾಂಸ ಶ್ರೀ ರಾಮಧನ್ ಶರ್ಮಾ ಶಾಸ್ತ್ರೀ ತಮ್ಮ "ಭಾರತೀಯ ಸಂಸ್ಕೃತೀ ಕಿ ರೂಪ್‌ರೇಖಾ" ಎಂಬ ಗ್ರಂಥದಲ್ಲಿ ಹೀಗೆ ಬರೆದಿರುತ್ತಾರೆ:

"ಹಿಂದೂ ಸಮಾಜದಲ್ಲಿ ಸತಿ ಪದ್ಧತಿ ಕಮ್ಮಿಯಾಗುವಂತೆ ಮಾಡುವುದರಲ್ಲಿ ಮುಸಲ್ಮಾನ ಬಾದಶಹರುಗಳು ಪ್ರಯತ್ನಿಸಿದ್ದಾರೆ. ಎಲ್ಲರಿಗಿಂತಲೂ ಪ್ರಥಮವಾಗಿ ಮುಹಮ್ಮದ್ ಬಿನ್ ತುಗ್ಲಲಕ್ ಈ ಪದ್ಧತಿಯ ವಿರುದ್ಧ ಧ್ವನಿಯೆತ್ತಿದ್ದರು. ಮತ್ತು ಆ ಪದ್ಧತಿಯನ್ನು ಕೊನೆಗೊಳಿಸಲು ಪ್ರಯತ್ನಿಸಿದ್ದರು. ಮೊಗಲ್ ಬಾದಶಹ ಅಕ್ಬರ್ ಸಹ ಈ ಪದ್ಧತಿಗೆ ಪ್ರೋತ್ಸಾಹ ದೊರೆಯದಂತೆ ಪ್ರಯತ್ನಿಸಿ ಯಾವುದೇ ವಿಧವೆಯನ್ನು ಆಕೆಯ ಇಚ್ಛೆಗೆ ವಿರುದ್ಧ ಸುಡಬಾರದೆಂದು ಆಜ್ಞಾಪಿಸಿದ್ದರು. ಔರಂಗಜೇಬ್ ಸಹ ಈ ಪದ್ಧತಿಯ ವಿರುದ್ಧ ಒಂದು ಆರ್ಡಿನೆನ್ಸ್ ಹೊರಡಿಸಿದ್ದರು." (ಭಾರತೀಯ ಸಂಸ್ಕೃತೀ ಕಿ ರೂಪ್‌ರೇಖಾ – ಪುಟ 214)

ಮೊಗಲ್ ಸಾಮ್ರಾಜ್ಯದ ಅವನತಿಯ ನಂತರ ಬಹುಕಾಲ ಕಳೆದ ಬಳಿಕ ಕ್ರಿ. ಶ. 1829ರಲ್ಲಿ ಬ್ರಿಟಿಷ್ ಗವರ್ನರ್ ಜನರಲರಾದ ಲಾರ್ಡ್ ವಿಲಿಯಮ್ ಬೆಂಟಿಂಕ್‌ರವರು ಸತಿ ಪದ್ಧತಿಯನ್ನು ನಿಶ್ಶರ್ತವಾಗಿ ಸಂಪೂರ್ಣ ರದ್ದುಪಡಿಸಿದರು. ಅನಂತರ ಯಾರಾದರೂ ಸತಿ ಪದ್ಧತಿ ಅನುಸರಿಸಿದರೆ ಅಪರಾಧಕರವೂ ಶಿಕ್ಷಾರ್ಹವೂ ಆಗಿದೆಯೆಂದು ಘೋಷಿಸಲಾಯಿತು. ಹಲವಾರು ಕಡೆಗಳಿಂದ ಇದರ ವಿರುದ್ಧ ಬಹಳ ಪ್ರತಿಭಟನೆಗಳು ಸಹ ಉಂಟಾದುವು. ಪಂಜಾಬಿನ ಜಾಲಂಧರ ಪ್ರದೇಶದ ಬ್ರಿಟಿಷ್ ಕಮಿಷನರ್ ಜಾನ್ ಲಾರೆನ್ಸರ ಬಳಿಗೆ ವಿಧವೆಯರನ್ನು ಸುಟ್ಟುಹಾಕಿದ ಬಗ್ಗೆ ಮತ್ತು ಕುಷ್ಠರೋಗಿಗಳನ್ನು ಜೀವಂತ ಹೂತು ಹಾಕಿದ ಬಗ್ಗೆ ಅನೇಕ ವರದಿಗಳು ಬಂದದ್ದುವು. ಆಗ ಭೂಮಿಯ ರೈತ್ವಾರಿ ಗುತ್ತಿಗೆಯನ್ನು ನವೀಕರಿಸುವ ಸಮಯ ಸಿಖ್ಖ್ ಮತಾನುಯಾಯಿಗಳೊಡನೆ ಗುರುಗ್ರಂಥ ಸಾಹಿಬ್ ಮೇಲೆ ಕೈಯಿಟ್ಟು ಹೀಗೆ ಪ್ರಮಾಣ ಮಾಡಲು ಹೇಳಲಾಗುತ್ತಿತ್ತು: "ನಾನು ವಿಧವೆಯರನ್ನು ಸುಟ್ಟುಹಾಕಲಾರೆ; ಹೆಣ್ಣುಮಕ್ಕಳನ್ನು ಕೊಲ್ಲಲಾರೆ; ಕುಷ್ಠರೋಗಿಗಳನ್ನು ಜೀವಂತವಾಗಿ ಹುಗಿಯಲಾರೆ." ಇದರ ವಿರುದ್ಧ ಬೇಡಿ ಕುಟುಂಬದ ನೇತೃತ್ವದಲ್ಲಿ ಸಿಖ್ಖರ ಒಂದು ಸಮಿತಿ ಜಾನ್ ಲಾರೆನ್ಸ್‌ರೊಂದಿಗೆ ಭೇಟಿಯಾಗಿ ಹೀಗೆ ಹೇಳಿತು: "ವಿಧವೆಯರನ್ನು ಸುಡುವುದು ನಮ್ಮ ಸಂಪ್ರದಾಯವಾಗಿದೆ. ಅದರಲ್ಲಿ ನೀವು ಕೈಹಾಕಬೇಡಿರಿ" ಆಗ ಜಾನ್ ಲಾರೆನ್ಸ್ ಹೀಗೆ ಮಾರ್ಮಿಕ ಉತ್ತರ ನೀಡಿದ್ದರು: "ವಿಧವೆಯರನ್ನು ಸುಡುವವರನ್ನು ನೇಣಿಗೇರಿಸುವುದು ನಮ್ಮ ಸಂಪ್ರದಾಯವಾಗಿದೆ. ನೀವು ನಿಮ್ಮ ಸಂಪ್ರದಾಯ ಪಾಲಿಸುವಿರಾದರೆ ನಾವು ನಮ್ಮ ಸಂಪ್ರದಾಯ ಪಾಲಿಸುವೆವು."

## ಪ್ರತಿಕ್ರಿಯೆ

# ಗೋರ್ಬಚೋವ್ ಪ್ರಾರ್ಥನೆ

ಅಣ್ವಸ್ತ್ರ ನಿರ್ಮೂಲನ ಒಪ್ಪಂದಕ್ಕೆ ಸಹಿಹಾಕಲು ಕಳೆದ ಡಿಸೆಂಬರ್ 8ರಂದು ವಾಷಿಂಗ್ಟನ್ ತಲುಪಿದ ರಶ್ಯಾದ ನೇತಾರ ಮಿಖಾಯಿಲ್ ಗೋರ್ಬಚೋವ್ ದೇವರ ನೆರವನ್ನು ಬಯಸಿದ ವಾರ್ತೆ ಹಲವರನ್ನು ಆಶ್ಚರ್ಯ ಚಕಿತ ಗೊಳಿಸಿತು. ಸೋವಿಯತ್ ಕಮ್ಯುನಿಸ್ಟ್ ಪಾರ್ಟಿ ಕೇಂದ್ರ ಸಮಿತಿ ಜನರಲ್ ಸೆಕ್ರೆಟರಿಯಾಗಿದ್ದಾರೆ ಗೋರ್ಬಚೋವ್. ಅವರು ಹುಟ್ಟುವ ಮೊದಲೇ ಸೋವಿಯತ್ ಯೂನಿಯನ್ ಕಮ್ಯೂನಿಸಮಿನ ನೆರಳಿನಲ್ಲಿ ಆಗಿ ಬಿಟ್ಟಿತ್ತು. ಕಮ್ಯೂನಿಸಮನ್ನು ಮಾತ್ರ ಕಂಡು ಕಮ್ಯೂನಿಸಮಿನ ಸೇವಕನಾಗಿ ಬೆಳೆದು ಆ ದೇಶದ ಅತಿದೊಡ್ಡ ಕಮ್ಯೂನಿಸ್ಟನೆಂಬ ಪದವಿಗೆ ಅವರು ಏರಿದ್ದಾರೆ. ಸೋವಿಯತ್ ಯೂನಿಯನಲ್ಲಿ ಗೋರ್ಬಚೋವ್‌ಗಿಂತ ದೊಡ್ಡ ಕಮ್ಯೂನಿಸ್ಟ್ ಈಗ ಇರಲು ಎಡೆಯಿಲ್ಲ. ಅಂತಹ ಓರ್ವ ನಾಯಕನಿಂದ ದೇವರ ಕುರಿತು ಕೇಳುವಾಗ ಯಾರೂ ಆಶ್ಚರ್ಯ ಪಡುವಂತಹದ್ದೇ. ವಾಷಿಂಗ್ಟನ್‌ನಲ್ಲಿ ದೇವರ ನೆರವನ್ನು ಕೋರಿದ ಗೋರ್ಬಚೋವ್ ಚರ್ಚಾ ವಿಷಯವಾದುದು ಅದರಿಂದಲೇ.

---

(43ನೇ ಪುಟದಿಂದ)

ಇವೆಲ್ಲಾ ಚಾರಿತ್ರಿಕವಾದ ಸತ್ಯಗಳಾಗಿವೆ. ಇವುಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಸತಿ ಪದ್ಧತಿ ಮುಸಲ್ಮಾನರ ಆಕ್ರಮಣದೊಂದಿಗೆ ಭಾರತವನ್ನು ಪ್ರವೇಶಿಸಿತೆಂದು ಕೆಲವು ದುಷ್ಟಶಕ್ತಿಗಳು ಈಗಲೂ ಪ್ರಚಾರ ಮಾಡಲು ಹಿಂಜರಿಯುವುದಿಲ್ಲ. ಹೌದು, ಪಾಪಕ್ಕೊಂದು ನೆಪ ಹುಡುಕುವುದು ಅತ್ಯಂತ ದೊಡ್ಡ ಪಾಪವಾಗಿದೆ.

(ಅಹ್ಮದಿಯಾ ಸಂಘಟನೆಯ ಉರ್ದು ಮುಖವಾಣಿ "ಬದರ್" ವಾರಪತ್ರಿಕೆ ಸಂಪಾದಕೀಯ : 8–10–87)

ದೇವವಿಶ್ವಾಸ ಮತ್ತು ಧರ್ಮ ವಿಚಿಂತನೆ ಎಲ್ಲವೂ ಭೌತಿಕ ಪುರೋಗತಿಗೆ ತಡೆಯಾಗುತ್ತವೆಂದೂ ಧರ್ಮವು ಮನುಷ್ಯನನ್ನು ಮರುಳುಗೊಳಿಸುವ ಮಾದಕವೆಂದೂ ಕಮ್ಯೂನಿಸಂ ಕಲಿಸುತ್ತದೆ ಹಾಗೂ ಕಮ್ಯೂನಿಸ್ಟರು ಪ್ರಚಾರಗೊಳಿಸುತ್ತಾರಾದರೂ ಯಾವನೇ ಕಮ್ಯೂನಿಸ್ಟನೂ ದೇವರಲ್ಲಿ ಪ್ರತೀಕ್ಷೆಯನ್ನರ್ಪಿಸದೆ ಜೀವಿಸುವುದಿಲ್ಲ. ಕಮ್ಯೂನಿಸ್ಟನು ಮಾತ್ರವಲ್ಲ, ನಿರೀಶ್ವರತ್ವ ಪ್ರಚಾರವು ಪ್ರಧಾನ ಜೀವಿತ ಲಕ್ಷ್ಯವೆಂದು ವರ್ತಿಸುವವರು ಕೂಡ ದೇವರ ಅಭಯವನ್ನು ಯಾಚಿಸುತ್ತಾರೆಂದು ಹೇಳುವಾಗ, ಇದರ ಬಗ್ಗೆ ಸಾವಕಾಶವಾಗಿ ಚಿಂತನೆಮಾಡಿ ಪ್ರತಿಕ್ರಿಯಿಸುವರೆ ಸಹೃದಯಿಗಳೊಡನೆ ಅಪೇಕ್ಷಿಸುತ್ತೇನೆ.

ಮನುಷ್ಯನು ಭೂಖಂಡದಲ್ಲಿ ಎಲ್ಲಿ ಹುಟ್ಟಿದವನಾದರೂ ಚಿಂತನಾ ಶಕ್ತಿಯೂ ವಿವೇಚನಾ ಶಕ್ತಿಯೂ ಉಳ್ಳವನಾದರೆ ಅದೃಶ್ಯದೆಡೆಗೆ ಒಮ್ಮೊಮ್ಮೆ ಕೈಚಾಚಿ ಬಿಡುತ್ತಾನೆ. ದೇವರೆಂಬ ಸುಪರಿಚಿತವಾದ ಪದವನ್ನೇ ಅದಕ್ಕೆ ಅವನು ಪ್ರಯೋಗಿಸಬೇಕೆಂದಿಲ್ಲ. ನಿರೀಶ್ವರತ್ವವನ್ನೂ ಧರ್ಮರಾಹಿತ್ಯವನ್ನೂ ಪ್ರಚಾರಪಡಿಸುವವರು ಆ ಪದವನ್ನು ಸಂಪೂರ್ಣವಾಗಿ ಬಿಟ್ಟುಬಿಡುವರು. ನಂತರ, ದೇವರ ಸ್ಥಾನವನ್ನು ಶೂನ್ಯಮಾಡಿ ವಿಲಾಪಿಸುವರು. ರಕ್ಷೆಹೊಂದಿದರೆ, ಗುರಿಸಾಧಿಸಿದರೆ, ಆಶ್ವಾಸನೆ ಲಭಿಸಿದರೆ, ಎಂಬಿತ್ಯಾದಿ ರೀತಿಯಲ್ಲಾಗಿರಬಹುದು ದೇವದೂಷಣೆ ಮಾಡುವವರ ಪ್ರಾರ್ಥನಾ ಕ್ರಮ. ಈ ಆಶೆಗಳ ನೆರವೇರುವಿಕೆ ಧರ್ಮವಿಶ್ವಾಸಿಯ ಮಟ್ಟಿಗೆ ದೇವರ ಮೂಲಕವಾಗಿದೆ. ಆ ಇಚ್ಛೆ ದೇವರ ಮುಂದೆ ಸಮರ್ಪಿಸುವುದು ಪ್ರಾರ್ಥನೆಯ ಮೂಲಕವಾಗಿದೆ.

ಅದೃಶ್ಯವೂ ಅಜ್ಞಾತವೂ ಆದ ಒಂದು ಶಕ್ತಿಯ ಮೇಲೆ ಭಾರವನ್ನಿಟ್ಟುಕೊಂಡಾಗಿದೆ ಯಾವನೇ ನಿರೀಶ್ವರವಾದಿಯೂ ಕರ್ಮನಿರತನಾಗುವುದು. ಅದನ್ನು

ಸಾಕಷ್ಟು ಒತ್ತುಕೊಟ್ಟು ಪರಿಚಿಂತನೆ ಮಾಡದೆ ಬಿಟ್ಟು ಬಿಡುವುದರಿಂದ ಅವನಿಗೆ ಗಣನೀಯವಾಗಿ ತೋರುವು ದಿಲ್ಲವೆಂದು ಮಾತ್ರ. ಏನೆಂದು ಮನವರಿಕೆಯಾಗದೆ, ತಿಳಿಯದೆ ಹೊರಗೆ ಬರುವ ಅಭಯಾರ್ಥನೆಯು ಧರ್ಮ ನಿಷೇಧಿಗಳದ್ದಾದರೆ, ಅನ್ವೇಷಣೆ ಮತ್ತು ನಿರೀಕ್ಷಣೆ ಯಿಂದ ನಿರ್ದಿಷ್ಟ ಲಕ್ಷ್ಯಸ್ಥಾನದೆಡೆಗೆ ಆತ್ಮಾರ್ಥತೆಯಿಂದ ಕೂಡಿದ ಯಾಚನೆಯಾಗಿದೆ ಧರ್ಮಭಕ್ತರದ್ದು. ಮೊದಲಿ ನದು ಅಜ್ಞತೆಯಿಂದಲೋ ಅಹಂತೆಯಿಂದಲೊ ಇರುವ ವಿಲಾಪ. ಎರಡನೆಯದು ಕಳಂಕವಾಗಲಿ ಕಾಪಟ್ಯವಾಗಲಿ ಇಲ್ಲದ ಸತ್ಯಾನ್ವೇಷಣೆ.

ಇತಿಹಾಸದಲ್ಲಿ ಮಹಾ ಘಟನೆಯಾಗಿ ಮಾರ್ಪಡು ವಂತಹ ಒಂದು ಭೇಟಿಗೆ ಬಂದ ಗೋರ್ಬಚೋವ್ ಮಾನವ ರಾಶಿಯ ಉಳಿವಿಗಾಗಿ ಬಹಳ ಪ್ರಧಾನವಾಗಿ ಭಾವಿಸಲ್ಪಡುವ ಒಂದು ಸಮಾರಂಭದಲ್ಲಿ ಪಾಲುಗೊಳ್ಳು ವುದಕ್ಕೆ ಮೊದಲು ದೇವರು ನಮಗೆ ನೆರವಾಗಲಿ ಎಂದು ಪ್ರಾರ್ಥಿಸಿದ್ದು ನಿರ್ಣಾಯಕ ಘಟ್ಟದಲ್ಲಿ ಮನುಷ್ಯನಿಂದ ಹೊರಟು ಬರುವ ನಿಷ್ಕಳಂಕತೆಯಾಗಿ ನಾವು 'ಕಾಣು ತ್ತೇವೆ. ಕಾಪಟ್ಯವಿಲ್ಲದೆ ಹಾಗೆ ಹೇಳಲು ಸಾಧ್ಯವಾದ ಆ ನಾಯಕನನ್ನು ನಾವು ಅಭಿನಂದಿಸುತ್ತೇವೆ. ಆ ಪ್ರಾರ್ಥನೆ ಸ್ವೀಕರಿಸಲ್ಪಡುವಂತಾಗುವ ಚಟುವಟಿಕೆಗಳಲ್ಲಿ ಅವರು ಮುಂದುವರಿಯಲಿ ಎಂದು ಪ್ರಾರ್ಥಿಸುತ್ತೇವೆ.

—ಎ. ಆರ್. ಕೆ.

# ಕ್ರಿಕೆಟ್ - ಪಾಕಿಸ್ತಾನ - ಭಾರತೀಯ ಮುಸ್ಲಿಮರು

ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಕ್ರಿಕೆಟ್ ಪಂದ್ಯ ಏರ್ಪಟ್ಟರೆ ಭಾರತದ ಮುಸ್ಲಿಮರು ಯಾರನ್ನು ಬೆಂಬಲಿಸಬೇಕು ? ಖಂಡಿತವಾಗಿಯೂ ಭಾರತದ ಮುಸ್ಲಿಮರೆಂದಲ್ಲ, ಜಾತಿ ಮತ ಭೇದವಿಲ್ಲದೆ ಭಾರತದ ಎಲ್ಲಾ ಪ್ರಜೆಗಳೂ ಭಾರತ ತಂಡದ ವಿಜಯಕ್ಕಾಗಿ ಹಾರೈಸಬೇಕು. ಬುದ್ಧಿ ಸ್ಥಿರತೆಯಿರುವ ಹಾಗೂ ರಾಷ್ಟ್ರ ಪ್ರೇಮವಿರುವ ಯಾರೊಬ್ಬನಿಂದಲೂ ನಿರೀಕ್ಷಿಸುವ ಉತ್ತರವಿದು. ಆದರೆ, ಇತ್ತೀಚೆಗಿನ ಕಾಲಗಳಲ್ಲಿ ಹಾಗಾಗುತ್ತಿಲ್ಲವೆಂಬುದು ದುರದೃಷ್ಟಕರವಾದರೂ ಸತ್ಯವಾಗಿದೆ. ಅಂದರೆ, ಭಾರತ ಪಾಕಿಸ್ತಾನಗಳ ಮಧ್ಯೆ ಪಂದ್ಯವೇರ್ಪಟ್ಟರೆ ಪಾಕಿಸ್ತಾನದ ವಿಜಯದಲ್ಲಿ ಸಂತೃಪ್ತಿ ಹೊಂದುವುದು ಹಾಗೂ ಭಾರತ ತಂಡದ ಸೋಲಿಗಾಗಿ ಹಾತೊರೆಯುವುದು ಕೆಲವು ಮುಸ್ಲಿಮರಲ್ಲಿ ಕಂಡುಬರು ತ್ತಿರುವ ಅನಿಷ್ಟ ಲಕ್ಷಣವಾಗಿದೆ. ಇಸ್ಲಾಂ ಧರ್ಮವು ಬೋಧಿಸುವ ದೇಶನಿಷ್ಠೆಯ ಪ್ರಾಥಮಿಕ ಜ್ಞಾನ ಕೂಡಾ ಇಲ್ಲದ ಈ ಮಂದಿಗಳ ಮೂರ್ಖತನಕ್ಕೆ ಕಾರಣವೇನಿರ ಬಹುದು? ಇದಕ್ಕೆ ಹಲವು ಕಾರಣಗಳನ್ನು ನೀಡ ಬಹುದು. ಭಾರತದ ಬಹುಸಂಖ್ಯಾತ ಹಿಂದೂಗಳು ಮುಸ್ಲಿಮರನ್ನು ಮೊದಲೇ ದೇಶದ್ರೋಹಿಗಳೆಂದೂ ಪಾಕಿಸ್ತಾನದ ಪರರೆಂದೂ ಮುದ್ರೆಯೊತ್ತಿ ಭಾರತದ ಮುಸ್ಲಿಮರ ದೇಶಪ್ರೇಮವನ್ನು ಅನಗತ್ಯವಾಗಿ ಕೆಣಕಿ ಅವರಲ್ಲಿ ವಿರುದ್ಧಾಭಿಪ್ರಾಯ ಮೂಡುವಂತೆ ಮಾಡಿದ್ದು ಒಂದು ಕಾರಣವಾಗಿದ್ದರೆ, ಕೆಲವು ಮುಸ್ಲಿಂ ಮುಲ್ಲಾಗಳ ಧೋರಣೆಗಳೂ ಬೋಧನೆಗಳೂ ಕೂಡ ಮುಗ್ಧ ಮುಸ್ಲಿಂ ಜನಸಾಮಾನ್ಯರಲ್ಲಿ ಈ ರೀತಿಯ ಒಂದು ಅನಿಸ್ಲಾಮಿಕ ಹಾಗೂ ಅಪತ್ಕಾರಿ ಭಾವನೆಯು ಮೂಡಿ ಬರಲು ಕಾರಣವಾಗಿದೆ ಎಂದು ಹೇಳದೆ ನಿರ್ವಾಹವಿಲ್ಲ.

'ಜಮಾತೇ ಇಸ್ಲಾಮಿ' ಎಂಬ ಧರ್ಮಲೇಪಿತ ರಾಜಕೀಯ ಉಗ್ರವಾದಿ ಸಂಘಟನೆಯ ಸ್ಥಾಪಕ ನೇತಾರ ರಾಗಿದ್ದ ಸಯ್ಯಿದ್ ಅಬುಲ್ ಆಲಾ ಮೌದೂದಿಯವರು ಈ ರೀತಿಯ ದುಷ್ಟ ಮನೋವೃತ್ತಿಯನ್ನು ಪುರಸ್ಕರಿಸಿ ದವರಾಗಿದ್ದರು. ಅವರು ಪ್ರತಿಪಾದಿಸಿದ ಅನೇಕ ಅನಿ ಸ್ಲಾಮಿಕ ಧೋರಣೆಗಳ ಪೈಕಿ ಇದು ಕೂಡ ಒಂದು. 1953ರಲ್ಲಿ ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧ ಅಲ್ಲಿನ ಬಹುಸಂಖ್ಯಾತ ಮುಸ್ಲಿಮರನ್ನು ಎತ್ತಿಕಟ್ಟಿ ಈ ಮುಲ್ಲಾ ಮೌದೂದಿಯವರು ಭಯಂಕರವಾದ ಕಲಹ ವನ್ನು ಸೃಷ್ಟಿ ಮಾಡಿದ್ದರು. ಕಲಹವು ನಿಯಂತ್ರಣಾತೀತ ವಾದಾಗ ಪಾಕಿಸ್ತಾನದ ಆಡಳಿತವನ್ನು ಸೇನೆಯು ಕೈಗೆತ್ತಿ ಕೊಂಡು ದಂಗೆಯ ಮೂಲಪುರುಷರನ್ನೆಲ್ಲಾ ಬಂಧಿಸಿ

ವಿಚಾರಣೆಗೊಳಪಡಿಸಿತ್ತು. ಆ ಪೈಕಿ ದಂಗೆ ಮತ್ತು ಬುಡ ಮೇಲು ಕೃತ್ಯದ ಆರೋಪದಲ್ಲಿ ಬಂಧಿತರಾದ ಮೌಲಾನಾ ಮೌದೂದಿಯವರಿಗೆ ಮಿಲಿಟರಿ ನ್ಯಾಯಾಲಯವು ಮರಣದಂಡನೆಯನ್ನು ವಿಧಿಸಿತ್ತು. ನಂತರ ಅದನ್ನು 14 ವರ್ಷದ ಕಠಿಣ ಸಜೆಯಾಗಿ ಲಘೂಕರಿಸಲಾಯಿತು. 1953ರ ದಂಗೆಯ ಕುರಿತು ವಿಚಾರಣೆ ನಡೆಸಲು ಅಂದಿನ ಮಿಲಿಟರಿ ಸರಕಾರವು ಒಂದು ವಿಚಾರಣಾ ಆಯೋಗ ವನ್ನು (ಮುನೀರ್ ಆಯೋಗ) ನೇಮಿಸಿತ್ತು. ಈ ಆಯೋಗದ ಮುಖ್ಯ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಮುಹಮ್ಮದ್ ಮುನೀರ್ ಎಂಬವರು ಮೌಲಾನಾ ಮೌದೂದಿಯವರನ್ನು ವಿಚಾರಣೆಗೊಳಪಡಿಸಿದಾಗ ಕೇಳಲಾದ ಒಂದು ಪ್ರಶ್ನೆ ಮತ್ತು ಅದಕ್ಕೆ ಮೌದೂದಿ ಯವರು ನೀಡಿದ ಉತ್ತರವು ಈ ರೀತಿಯಿದೆ:

(ವಿಚಾರಣಾ ಆಯೋಗದ) ಪ್ರಶ್ನೆ: ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಯುದ್ಧವೇರ್ಪಟ್ಟರೆ ಭಾರತದ ಮುಸ್ಲಿಮರ ಕರ್ತವ್ಯವು ಏನಾಗಿರಬೇಕೆಂದು ತಿಳಿಸಬಹುದಾ ?

(ಅಬುಲ್ ಆಲಾ ಮೌದೂದಿಯವರ) ಉತ್ತರ: ಅವರ ಕರ್ತವ್ಯ ಸ್ಪಷ್ಟ. ಅಂದರೆ, ಅವರು ಪಾಕಿಸ್ತಾನದ ವಿರುದ್ಧ ಯುದ್ಧ ಮಾಡುವುದಾಗಲೀ ಪಾಕಿಸ್ತಾನದ ಅಸ್ತಿತ್ವಕ್ಕೂ ಭದ್ರತೆಗೂ ಹಾನಿಯುಂಟಾಗುವ ರೀತಿ ಯಲ್ಲಿ ಏನನ್ನಾದರೂ ಮಾಡುವುದಾಗಲೀ ಕೂಡದು.
(ಪಂಜಾಬ್ ದಂಗೆಯ ವಿಚಾರಣಾ ಆಯೋಗದ ವರದಿ- ಪುಟ 230)

ಭಾರತದ ಮುಸ್ಲಿಮರನ್ನು ಸಾರಾಸಗಟು ಅವ ಹೇಳನ ಮಾಡಿದ ಅತ್ಯಂತ ಜಿಗುಪ್ಸಾತ್ಮಕವೂ ನೀಚವೂ ಆದ ಹೇಳಿಕೆ ಓರ್ವ ಮುಸ್ಲಿಂ ಮುಲ್ಲಾರ ಬಾಯಿಯಿಂದ ಹೊರಟದ್ದು ನಿಜಕ್ಕೂ ದುರದೃಷ್ಟಕರ. ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಯುದ್ಧವೇರ್ಪಟ್ಟರೆ, ಭಾರತದ ಮುಸ್ಲಿಮರು ಪಾಕಿಸ್ತಾನದ ವಿರುದ್ಧ ಯುದ್ಧ ಮಾಡಬಾರದೆಂಬ ಅನಿಸ್ಲಾಮಿಕವೂ ಅಪ್ರಾಯೋಗಿಕವೂ ಆದ ಈ ಹೇಳಿಕೆಯನ್ನು ಪಾಕಿಸ್ತಾನದಲ್ಲಿ ಕೂತು ನೀಡಿದ ಅಬುಲ್ ಆಲಾ ಮೌದೂದಿಯವರಿಂದ ಸ್ಥಾಪಿಸಲ್ಪಟ್ಟ ಸಂಘಟನೆಯ ಧ್ಯೇಯ ಧೋರಣೆಗಳು ಅದೆಷ್ಟು ಅಪ ತ್ಕಾರಿಯಾಗಿರಬಹುದು! ಭಾರತದಲ್ಲಿ ಕೂಡ ಈ ಫಾಸಿಸ್ಟ್ ಸಂಘಟನೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ ಎಂಬುದು ಅದಕ್ಕಿಂತಲೂ ದುರದೃಷ್ಟಕರ. ಆದರೆ, ಇಸ್ಲಾಂ ಧರ್ಮದ ಹೆಸರಿನಲ್ಲಿ ಮುಗ್ಧ ಮುಸ್ಲಿಂ ಜನರನ್ನು ಕಬಳಿಸಿ ಆಡಳಿತಾಧಿಕಾರ ವನ್ನು ಕಿತ್ತುಕೊಳ್ಳಲು ಹವಣಿಸುವ ಈ ರಾಜಕೀಯ ಪಕ್ಷವು ತನ್ನ ಧೋರಣೆಯನ್ನು ಸಂದರ್ಭಾನುಸಾರ ಬದಲಾಯಿಸುತ್ತಿರುತ್ತದೆ. ರಾಜಕೀಯ ಪಕ್ಷಗಳು ತಮ್ಮ ಧ್ಯೇಯ ಧೋರಣೆಗಳನ್ನು ಆಗಾಗ ಬದಲಾಯಿಸುತ್ತಿರು ವಂತೆಯೇ ಜಮಾತೆ ಇಸ್ಲಾಮಿ ಎಂಬ ಪಕ್ಷವೂ ಕೂಡ ಅದರ ಧೋರಣೆಗಳನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಬದಲಾಯಿಸುತ್ತಾ ಇತರ ರಾಜಕೀಯ ಪಕ್ಷಕ್ಕಿಂತಲೂ ತಾವೇನೂ ಕಡಿಮೆಯಿಲ್ಲವೆಂಬುದನ್ನು ಸಾಬೀತುಪಡಿಸಿದ ಉದಾಹರಣೆಗಳು ಅನೇಕ ಇವೆ. ಅಥವಾ ಅದು ಹೇಳಿಕೊಳ್ಳುವಂತೆ ಅದೊಂದು ಶುದ್ಧ ಇಸ್ಲಾಮಿಕ ಸಂಘಟನೆಯಾಗಿದ್ದಲ್ಲಿ ಇಸ್ಲಾಂ ಧರ್ಮದ ತತ್ವಾದರ್ಶಗಳೂ ಧ್ಯೇಯ ಧೋರಣೆಗಳೂ ಈ ರೀತಿ ಕಾಲಕ್ಕೂ ದೇಶಕ್ಕೂ ತಕ್ಕಂತೆ ಮಾರ್ಪಾಟು ಹೊಂದು ವುದೇ ಎಂಬ ಪ್ರಶ್ನೆಗೆ ಅವರೇ ಉತ್ತರಿಸಬೇಕಾಗಿದೆ. ಧೋರಣೆ ಬದಲಾವಣೆಯ ಒಂದು ಜ್ವಲಂತ ಉದಾ ಹರಣೆ ಇಲ್ಲಿದೆ:

ಮೌದೂದಿ ಸಾಹೇಬರ ಮೇಲಿನ ಹೇಳಿಕೆಯಲ್ಲಿ ಅಡಕವಾಗಿರುವ ಆಶಯಕ್ಕೆ ಸಂಪೂರ್ಣ ವಿರುದ್ಧವಾಗಿ, ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಕ್ರಿಕೆಟ್ ಪಂದ್ಯ ನಡೆದಲ್ಲಿ ಪಾಕಿಸ್ತಾನವನ್ನು ಬೆಂಬಲಿಸುವ ಮುಸ್ಲಿಮರು ಭಾರತದಲ್ಲಿದ್ದರೆ ಅಂತಹವರನ್ನು ಮೂರ್ಖರು ಮತ್ತು ಅಲ್ಪರು ಎಂದು ಮೌದೂದಿ ಪತ್ರಿಕೆ ಸನ್ಮಾರ್ಗ ಹೇಳು ತ್ತದೆ. ಆ ಪತ್ರಿಕೆಯ 10ನೇ ಸಂಪುಟದ 32 ಮತ್ತು 33ನೇ ಸಂಚಿಕೆಗಳಲ್ಲಿ ಈ ಕುರಿತು ಬರೆಯಲಾಗಿದೆ. ಭಾರತ ದೇಶದ ಪ್ರತಿಷ್ಠೆ ಮತ್ತು ಸುಭದ್ರತೆಗೆ ಸಂಬಂಧ ಪಟ್ಟಂತೆ ಹೇಳುವುದಾದರೆ, ಪಾಕಿಸ್ತಾನದೊಂದಿಗೆ ಕ್ರಿಕೆಟ್ ಪಂದ್ಯ ನಡೆಯುವುದಕ್ಕಿಂತಲೂ ಯುದ್ಧ ನಡೆ ಯುವ ಸನ್ನಿವೇಶವು ಅತ್ಯಂತ ಪ್ರಾಮುಖ್ಯವೂ ನಿರ್ಣಾ ಯಕ ಸಂದರ್ಭವೂ ಆಗಿರುತ್ತದೆ. ಆ ರೀತಿ ಯುದ್ಧ ನಡೆಯುವ ಅತಿ ಉದ್ವಿಗ್ನ ವಿಷಮ ಪರಿಸ್ಥಿತಿಯ ನಿರ್ಣಾ ಯಕ ಘಟ್ಟದಲ್ಲಿ ಭಾರತದ ಮುಸ್ಲಿಮರು ಪಾಕಿಸ್ತಾನದ ವಿರುದ್ಧ ಯುದ್ಧ ಮಾಡದೆ ದೇಶದ್ರೋಹಿಗಳಾಗ

# *ಅಹ್ಮದಿಯಾ ವಾರ್ತೆಗಳು*

## ಬೆಂಗಳೂರಿನಲ್ಲಿ ಸರ್ವಧರ್ಮ ದಿನಾಚರಣೆ

ಸ್ಥಳೀಯ ಅಹ್ಮದಿಯಾ ಘಟಕದ ವತಿಯಿಂದ ಕಳೆದ ಜುಲಾಯಿ 26ರಂದು ಥಿಯೋಸೊಫಿಕಲ್ ಫೆಡರೇಶನ್ ಹಾಲ್‌ನಲ್ಲಿ ಸರ್ವಧರ್ಮ ದಿನಾಚರಣಾ ಸಭೆಯು ಜರಗಿತು.

ಮುಹಮ್ಮದ್ ಕರೀಮುಲ್ಲಾ ನೌಜವಾನ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಆರಂಭದಲ್ಲಿ ಇಸ್ಲಾಂ, ಹಿಂದೂ, ಕ್ರೈಸ್ತ, ಬೌದ್ಧ, ಜೈನ ಧರ್ಮಗಳ ಪ್ರಾರ್ಥನೆಗಳನ್ನು ಆಯಾ ಧರ್ಮದವರು ಪಠಿಸಿದರು. ಬೆಂಗಳೂರು ಅಹ್ಮದಿಯಾ ಘಟಕದ ಅಧ್ಯಕ್ಷರಾದ ಮುಹಮ್ಮದ್ ಶಫೀಯುಲ್ಲಾ ಸಾಹೇಬರು ಸ್ವಾಗತಿಸಿದರು.

ಲೋಕದಲ್ಲೆಲ್ಲೂ ಶಾಂತಿ, ಸೌಹಾರ್ದದ ವಾತಾವರಣವನ್ನು ಉಂಟುಮಾಡುವುದೇ ಇಸ್ಲಾಂ ಧರ್ಮದ ಉದ್ದೇಶವೆಂದೂ ವಿವಿಧ ಧರ್ಮೀಯರಲ್ಲಿ ಮೈತ್ರಿ ಬೆಸೆಯುವಂತಹ ಈ ಸಮ್ಮೇಳನ ಸಹ ಆ ಉದ್ದೇಶ ಸಾಧನೆಯ ಒಂದಂಶವೆಂದೂ ಸಭಾಧ್ಯಕ್ಷರು ನುಡಿದರು.

ಪ್ರೊಫೆಸರ್ ರಂಗನಾಥ ಶರ್ಮಾ (ಹಿಂದೂ ಧರ್ಮ), ಶ್ರೀ ಎಸ್. ರಂಗಸ್ವಾಮಿ (ಬೌದ್ಧ ಧರ್ಮ),

---

ಬೇಕೆಂದು ಬೋಧಿಸಿದ ಮೌದೂದಿಯ ಅನುಯಾಯಿಗಳು ಅಷ್ಟು ಗಂಭೀರವಲ್ಲದ ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನವನ್ನು ಬೆಂಬಲಿಸಬಾರದೆಂದು ಹೊಸ ನಿಲುವು ತಳೆದದ್ದು ಆಶ್ಚರ್ಯದ ಸಂಗತಿ. ಭಾರತದ ಮೌದೂದಿಗಳು ಈ ರೀತಿ ದೇಶಪ್ರೇಮವನ್ನು ಪ್ರದರ್ಶಿಸುವಾಗ ಅವರ ಸಂಘಟನೆಯ ಸ್ಥಾಪಕರಾದ ಅಬುಲ್ ಆಲಾ ಮೌದೂದಿಯವರ ಧೋರಣೆಯನ್ನು ಮರೆತುಬಿಟ್ಟರೇ? ಅಥವಾ ಧೋರಣೆ ಬದಲಾವಣೆ ಉಂಟಾಯಿತೇ? ಅದೂ ಅಲ್ಲವಾದರೆ, ಭಾರತದ ಮುಸ್ಲಿಮರ ಕರ್ತವ್ಯದ ಬಗ್ಗೆ ಪಾಕಿಸ್ತಾನದ ಪ್ರಜೆಯಾಗಿದ್ದ ಮೌದೂದಿಯವರು ಅನಗತ್ಯ ತಲೆಕೆಡಿಸಿಕೊಂಡು ನೀಡಿದ ವಿಪರ್ಯಾಸದ ಅಧಿಕಪ್ರಸಂಗಿ ಹೇಳಿಕೆಯನ್ನು ಕೂಡ ಇವರು ಒಬ್ಬ ಮೂರ್ಖನ ಅಲ್ಪತನವೆಂದೂ ಅದು ಖಂಡನಾರ್ಹವೆಂದೂ ಒಪ್ಪುವರೇ?

—ಇಬ್ನು ಅಬ್ದುಲ್ಲಾ

## ಜಿಬ್ರೀಲ್ (ಅ.) ನಿವೃತ್ತಿ?

ಮೌದೂದಿ ಪತ್ರಿಕೆ 'ಸನ್ಮಾರ್ಗ'ದ ಡಿ. 13–19ರ ಸಂಚಿಕೆಯಲ್ಲಿ ಪ್ರಕಟವಾದ ಒಂದು ಪ್ರಶ್ನೆ ಮತ್ತು ಅದರ ಉತ್ತರ ಈ ರೀತಿಯಿದೆ:

ಪ್ರಶ್ನೆ: ಪ್ರವಾದಿ ಮುಹಮ್ಮದ್ (ಸ) ರ ಅನಂತರ ಪ್ರವಾದಿಗಳು ಬರಲಿಕ್ಕಿಲ್ಲವಲ್ಲಾ? ಹಾಗಿರುವಾಗ ಪ್ರವಾದಿಗಳಿಗೆಲ್ಲಾ ಅಲ್ಲಾಹನ ಸಂದೇಶ ತಲಪಿಸುತ್ತಾ ಇದ್ದ ಜಿಬ್ರೀಲ್ (ಅ) ಈಗ ಏನು ಮಾಡುತ್ತಿರಬಹುದು?

ಉತ್ತರ: ನಿಮ್ಮಂತಹವರು ಅನಗತ್ಯವಾಗಿ ಅವರ ಕುರಿತು ಚಿಂತಿಸುತ್ತಾ ಇರುವುದು ಗೊತ್ತಾದರೆ ಆಶ್ಚರ್ಯ ಪಡುತ್ತಾ ಇರಬಹುದು.

ನಿರುತ್ತರನಾದಾಗ ಗೇಲಿ ಮಾಡಿದ ಎಂಬ ಅರ್ಥ ಬರುವ ಒಂದು ನಾಣ್ಣುಡಿಯು ಮಲೆಯಾಳಂ ಭಾಷೆಯಲ್ಲಿದೆ. ಪ್ರಶ್ನೆಗೆ ಸರಿಯಾದ ಉತ್ತರವನ್ನು ನೀಡಲು ಸಾಧ್ಯವಿಲ್ಲದೆ ಬಂದಾಗ ಸನ್ಮಾರ್ಗ ಪತ್ರಿಕೆಯು ಪ್ರಶ್ನೆಕಾರನನ್ನು ಗೇಲಿ ಮಾಡಿ ಸ್ವಯಂ ತೃಪ್ತಿಹೊಂದಿದೆ.

ಅಲ್ಲಾಹನು ತನ್ನ ವಚನಗಳನ್ನು ಭೂಮಿಯಲ್ಲಿರುವ ಭಕ್ತದಾಸರಿಗೆ ದೇವದೂತರ ಮೂಲಕ (ಜಿಬ್ರೀಲ್) ತಲಪಿಸುವ ಕಾರ್ಯವನ್ನು ಅಂತ್ಯದಿನದ ವರೆಗೂ ಮುಂದುವರಿಸುವನೆಂಬುದಾಗಿ ಪವಿತ್ರ ಖುರ್‌ಆನ್ ಹಲವಾರು ಕಡೆ ಸ್ಪಷ್ಟವಾಗಿ ಹೇಳಿರುವಾಗ ಜಿಬ್ರೀಲ್ (ಅ) ಬರೇ ಆಶ್ಚರ್ಯಪಟ್ಟು ಕೂತಿದ್ದಾರೆಂದರೆ ಹೇಗೆ? ಮುಜೀಬರ ಈ ಉತ್ತರದಿಂದ ಎಲ್ಲರೂ ಆಶ್ಚರ್ಯಪಡುವಂತಾಗಿದೆ.

—ಎ. ಎಂ.

ಮೌಲವಿ ಮುಹಮ್ಮದ್ ಉಮರ್ ಸಾಹೇಬ್ (ಇಸ್ಲಾಂ ಧರ್ಮ), ಮಿ। ಜೆ. ಎ. ಡಿ. ಸ್ಟೀವನ್ (ಕ್ರೈಸ್ತಧರ್ಮ), ಶ್ರೀ ಅಬಿನಾಶ್ ಸಿಂಘ್ (ಸಿಖ್ಖ್ ಧರ್ಮ), ಶ್ರೀ ಸಿ. ಎನ್. ನಾಗರಾಜ್ (ಥಿಯೋಸಫಿಸಂ) ಹಾಗೂ ಎಂ. ಪಿ. ಇಬ್ರಾಹಿಂ ಸಾಹೇಬ್ (ಅಹ್ಮದಿಯತ್) ಭಾಷಣ ಮಾಡಿದರು. ಆಕಾಶವಾಣಿ ಬೆಂಗಳೂರು ಮರುದಿನದ ರಾತ್ರಿ ಕಾರ್ಯಕ್ರಮದಲ್ಲಿ ಈ ಸಮ್ಮೇಳನದ ವಾರ್ತೆ ಹಾಗೂ ವಿವಿಧ ಭಾಷಣಗಳ ಆಯ್ದ ಭಾಗ ಗಳನ್ನು ಬಿತ್ತರಿಸಿತು.

## ಉದೇಪುರದಲ್ಲಿ ಪ್ರಾಥಮಿಕ ಶಾಲೆ

ಉತ್ತರ ಪ್ರದೇಶದ ಶಾಹ್‌ಜಹಾನ್‌ಪುರಕ್ಕೆ ಸಮೀಪ ಉದೇಪುರ ಎಂಬಲ್ಲಿ ಕಳೆದ ಆಗಸ್ಟ್ 12ರಂದು ಅಹ್ಮದಿಯಾ ಸಂಘಟನೆಯ ವತಿಯಿಂದ ಸ್ಥಾಪಿಸಲಾದ ಪ್ರಾಥಮಿಕ ಶಾಲೆಯೊಂದು ಉದ್ಘಾಟಿಸಲ್ಪಟ್ಟಿತು.

ವಿದ್ಯಾಧಿಕಾರಿ ಶ್ರೀ ಶರ್ಮಾರವರು ಶಾಲೆಯನ್ನು ಉದ್ಘಾಟನೆ ಮಾಡುತ್ತಾ, ಜನಾಬ್ ರಿಝ್‌ವಾನ್ ಸಾಹೇಬರು ಉಚಿತವಾಗಿತ್ತ ಪುಸ್ತಕಗಳನ್ನು ಅರ್ಹ ವಿದ್ಯಾರ್ಥಿಗಳಿಗೆ ನೀಡಿದರು. ಸಂಘಟನೆಯ ಅಧ್ಯಕ್ಷರಾದ ಜನಾಬ್ ಅಬ್ದುಲ್ ಕದೀರ್ ಖಾನ್ ಸಾಹೇಬ್ ಮತ್ತು ಸಯ್ಯದ್ ನೂರ್ ಸಾಹೇಬ್ ಅವರು ಶಾಲೆಯ ಆವಶ್ಯ ಕತೆಗಾಗಿ ಜಮೀನನ್ನು ಕೊಡಲು ವಾಗ್ದಾನ ಮಾಡಿದರು. ಡಾ। ಮುಹಮ್ಮದ್ ಆಬಿದ್ ಸಾಹೇಬ್ ಕುರೈಶಿ ಅವರು ಪಾರ್ಕಿನ ಏರ್ಪಾಡು ಮಾಡುವ ಜವಾಬ್ದಾರಿಕೆ ಯನ್ನು ವಹಿಸಿಕೊಂಡರು.

## ಕಟಕ್‌ನಲ್ಲಿ ಸರ್ವಧರ್ಮ ಸಮ್ಮೇಳನ ಅಹ್ಮದಿ ಪ್ರತಿನಿಧಿಯ ಭಾಷಣ

ಹಿಂದೂ ಧರ್ಮದ ಒಂದು ಸಂಸ್ಥೆಯಾದ "ಸೂರತಿ ವೇದಿಯ ಮಂದಿರ"ದ ಆಶ್ರಯದಲ್ಲಿ ಕಳೆದ ಮೇ 28ರಿಂದ ಒಂದು ವಾರದ ವರೆಗೆ ಸರ್ವಧರ್ಮ ಸಮ್ಮೇಳನವು ಜರಗಿತ್ತು. ಜೂನ್ 2ರಂದು ಅಹ್ಮದಿ ಪ್ರತಿನಿಧಿಯಾದ ಜನಾಬ್ ಶಮ್ಸುಲ್ ಹಕ್ ಖಾನ್ ಸಾಹೇಬರು ಮುಹಮ್ಮದ್ ಪೈಗಂಬರರ ಜೀವನದ ಕುರಿತು ಭಾಷಣ ಮಾಡಿದರು.

## ಖಾದಿಯಾನಿನಲ್ಲಿ 96ನೇ ವಾರ್ಷಿಕ ಮಹಾ ಸಮ್ಮೇಳನ

ಅಹ್ಮದಿಯಾ ಕೇಂದ್ರಸ್ಥಾನವಾದ ಖಾದಿಯಾನಿ ನಲ್ಲಿ 96ನೇ ವಾರ್ಷಿಕ ಮಹಾ ಸಮ್ಮೇಳನವು ಕಳೆದ ಡಿಸೆಂಬರ್ 18, 19 ಮತ್ತು 20ರಂದು ಜರಗಿತು.

ಪಂಜಾಬಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದ್ದರೂ ದೇಶದ ಎಲ್ಲಾ ಕಡೆಗಳಿಂದಲೂ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಜನರು ಆಗಮಿಸಿದ್ದರು.

ಪ್ರಥಮ ದಿನದ ಅಧ್ಯಕ್ಷತೆ ವಹಿಸಿದ್ದ ಮಿರ್ಝಾ ವಸೀಂ ಅಹ್ಮದ್ ಸಾಹೇಬರು, ಇಸ್ಲಾಮಿನ ಸೇವೆಗಾಗಿ ಎಲ್ಲಾ ಅಹ್ಮದಿಯರು ಕಂಕಣಬದ್ಧರಾಗಬೇಕೆಂದೂ ತ್ಯಾಗಗಳನ್ನು ಮಾಡಲು ಸಿದ್ಧರಿರಬೇಕೆಂದೂ ತಮ್ಮ ಸಂತಾನಗಳಿಗೆ ಯೋಗ್ಯ ತರಬೇತಿಯನ್ನು ನೀಡಲು ಮುತುವರ್ಜಿ ವಹಿಸಬೇಕೆಂದೂ ಕರೆನೀಡಿದರು.

ಮೂರು ದಿನಗಳಲ್ಲೂ ವಿವಿಧ ವಿಷಯಗಳ ಬಗ್ಗೆ ಅಹ್ಮದಿ ವಿದ್ವಾಂಸರು ಭಾಷಣ ಮಾಡಿದರು.

## ಪಂಜಾಬ್ ಗವರ್ನರ್‌ಗೆ ಖುರ್‌ಆನ್ ಪಾರಿತೋಷಕ

ಕಳೆದ ಒಕ್ಟೋಬರ್ 10ರಂದು ಖಾದಿಯಾನಿನ ಶೇಖ್ ಅಬ್ದುಲ್ ಹಮೀದ್ ಸಾಹೇಬ್ ಆಜಿಝ್ ಅವರ ನೇತೃತ್ವದ ನಿಯೋಗವೊಂದು ಪಂಜಾಬ್ ರಾಜ್ಯಪಾಲ ಸಿದ್ಧಾರ್ಥ ಶಂಕರ್ ರೇ ಅವರನ್ನು ಭೇಟಿ ಯಾಗಿ ಸುಮಾರು 15 ನಿಮಿಷ ಕಾಲ ಮಾತುಕತೆ ನಡೆಸಿತು.

ರಾಜ್ಯಪಾಲರಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಹಾಗೂ ಇನ್ನಿತರ ಅಹ್ಮದಿಯಾ ಸಾಹಿತ್ಯ ಗಳನ್ನು ಉಡುಗೊರೆಯಾಗಿ ನೀಡಲಾಯಿತು.

## ಹೈದರಾಬಾದ್ ಮಿಷನ್ ಹೌಸಿಗೆ ಕ್ರಿಕೆಟ್ ಕ್ರೀಡಾಪಟು ಮುಹಮ್ಮದ್ ಅಝುರುದ್ದೀನ್ ಭೇಟಿ

ಸ್ಥಳೀಯ ಅಹ್ಮದಿಯಾ ಘಟಕದ ಆಮಂತ್ರಣದ ಮೇರೆಗೆ ವಿಶ್ವವಿಖ್ಯಾತ ಕ್ರಿಕೆಟ್ ಕ್ರೀಡಾಪಟು ಮುಹಮ್ಮದ್ ಅಝುರುದ್ದೀನ್ ಅವರು ಕಳೆದ ಮೇ 26ರಂದು ಹೈದರಾಬಾದಿನ ಅಹ್ಮದಿಯಾ ಪ್ರಚಾರ ಕೇಂದ್ರಕ್ಕೆ ಭೇಟಿಯಿತ್ತಿದ್ದರು.

ಅಹ್ಮದಿಯಾ ಜಮಾಅತಿನ ಧ್ಯೇಯ ಧೋರಣೆ, ಜಗತ್ತಿನ ಎಲ್ಲೆಲ್ಲೂ ನಡೆಸುತ್ತಿರುವ ಅದರ ಚಟುವಟಿಕೆಗಳು, ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ನೀಡಲಾಗುತ್ತಿರುವ ಪೀಡನೆ ಇತ್ಯಾದಿಗಳ ಬಗ್ಗೆ ಅವರಿಗೆ ಸಂಕ್ಷಿಪ್ತವಾಗಿ ವಿವರಿಸಿಕೊಡಲಾಯಿತು.

ಅವರಿಗೆ ಪಾರಿತೋಷಕವಾಗಿ ನೀಡಲಾದ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಹಾಗೂ ಇನ್ನಿತರ ಸಾಹಿತ್ಯಗಳನ್ನು ಬಹಳ ಸಂತೋಷದಿಂದ ಸ್ವೀಕರಿಸಿದರು. "ಅಲೈಸಲ್ಲಾಹು ಬಿಕಾಫಿನ್ ಅಬ್ದಹು" ಎಂದು ಕೆತ್ತಲಾದ ಉಂಗುರವನ್ನು ಸಹ ಅವರಿಗೆ ಕೊಡುಗೆ ಈಯಲಾಯಿತು. ಅದನ್ನು ಅವರು ಆದರದಿಂದ ಸ್ವೀಕರಿಸಿದರು.

## ತಲ್‌ಲೀಮುಲ್ ಇಸ್ಲಾಂ ಇನ್‌ಸ್ಟಿಟ್ಯೂಟ್‌ಗೆ ಶಿಲಾನ್ಯಾಸ

ಕಾಶ್ಮೀರದ ನಾಸಿರಾಬಾದ್‌ನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಕಳೆದ ಡಿಸೆಂಬರ್ 6ರಂದು ತಲ್‌ಲೀಮುಲ್ ಇಸ್ಲಾಂ ಇನ್‌ಸ್ಟಿಟ್ಯೂಟ್‌ಗೆ ಶಂಕುಸ್ಥಾಪನೆ ಮಾಡಲಾಯಿತು. ಈ ಸಂದರ್ಭದಲ್ಲಿ ಜನಾಬ್ ಅಬ್ದುಲ್ ಹಮೀದ್ ಸಾಹೇಬ್ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು.

## ಶ್ರವಣಬೆಳಗೊಳದಲ್ಲಿ ವ್ಯಾಸಂಗಗೋಷ್ಠಿ ಅಹ್ಮದಿ ಪ್ರತಿನಿಧಿಯ ಭಾಷಣ

ಕಳೆದ ಸಪ್ಟೆಂಬರ್ 4, 5 ಮತ್ತು 6ರಂದು ಥಿಯೋಸೊಫಿಕಲ್ ಸೊಸೈಟಿಯ ಆಶ್ರಯದಲ್ಲಿ ಶ್ರವಣಬೆಳಗೊಳದಲ್ಲಿ "ಬ್ರಹ್ಮ ವಿದ್ಯಾ ವಿಚಾರಗೋಷ್ಠಿ" ನಡೆಯಿತು. "ಇಸ್ಲಾಂ ಧರ್ಮ ಹಾಗೂ ಅಹಿಂಸೆ" ಎಂಬ ವಿಷಯದ ಬಗ್ಗೆ ಮಂಗಳೂರಿನ ಅಹ್ಮದಿಯಾ ಪ್ರಚಾರ ಕಾರ್ಯದರ್ಶಿಯಾದ ಎಂ. ಪಿ. ಇಬ್ರಾಹಿಂ ಸಾಹೇಬರು ತಾರೀಕು 6ರಂದು ಭಾಷಣ ಮಾಡಿದರು. ಸಭಿಕರ ಪ್ರಶ್ನೆಗಳಿಗೆ ಯಥೋಚಿತ ಉತ್ತರಗಳನ್ನು ನೀಡಿದರು.

## ಖುರ್‌ಆನ್ ಕಂಠಪಾಠದಲ್ಲಿ ವಿಕ್ರಮ

ಹದಿನೈದು ವರ್ಷ ಪ್ರಾಯದ ಬಾಲಕ ಗುಲಾಮ್ ಅಹ್ಮದ್ ಸಾಂದಿ ಸಮಗ್ರ ಖುರ್‌ಆನ್ ಕಂಠಪಾಠ ಕಲಿತ ಪ್ರಥಮ ಸಿರ್‍ರಾಲಿಯೋನ್ ಪ್ರಜೆ. ನಾಲ್ಕು ವರ್ಷಗಳ ಮೊದಲು ಇಲ್ಲಿಂದ ಪಾಕಿಸ್ತಾನಕ್ಕೆ ತೆರಳಿದ ಗುಲಾಮ್ ಅಹ್ಮದ್ ಅಹ್ಮದಿಯಾ ಅಂತಾರಾಷ್ಟ್ರೀಯ ಕೇಂದ್ರವಾದ ರಬ್‌ವಾದಲ್ಲಿ ಕಲಿತು ತಾಯ್ನಾಡಿಗೆ ಮರಳಿದ್ದಾರೆ. ಸಿರ್‍ರಾಲಿಯೋನಿನ ಜನಸಂಖ್ಯೆಯಲ್ಲಿ ಶೇಕಡ 87 ಮುಸ್ಲಿಮರಿದ್ದಾರೆ. —AFP

(ಇಂಡಿಯನ್ ಎಕ್ಸ್‌ಪ್ರೆಸ್, ಬೆಂಗಳೂರು: 25–7–1987)

## ಬಸವಾ ಪಟ್ಟಣದ ಭಾರತೀಯ ಧರ್ಮ ಸಮ್ಮೇಳನದಲ್ಲಿ ಅಹ್ಮದಿ ಪ್ರತಿನಿಧಿಯ ಭಾಷಣ

ಶ್ರೀ ರಾಘವೇಂದ್ರ ಕೃಪಾಶ್ರಮದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಬಸವಾಪಟ್ಟಣದ ಪುಣ್ಯಸ್ಥಳ ಎಂಬಲ್ಲಿ ಜನವರಿ 24ರಂದು ಭಾರತೀಯ ಧರ್ಮ ಸಮ್ಮೇಳನದ ಹನ್ನೆರಡನೆಯ ಅಧಿವೇಶನವು ಜರಗಿತು. ಆ ಸಂದರ್ಭದಲ್ಲಿ ಅಹ್ಮದಿ ಪ್ರತಿನಿಧಿಯಾದ ಎಂ. ಪಿ. ಇಬ್ರಾಹಿಂ ಸಾಹೇಬರು ಇಸ್ಲಾಂ ಮತ್ತು ಧರ್ಮ ಸಮನ್ವಯ ಎಂಬ ವಿಷಯದಲ್ಲಿ ಭಾಷಣ ಮಾಡಿದರು.

ಶಿವಮೊಗ್ಗ ಅಹ್ಮದಿಯಾ ಘಟಕದ ವತಿಯಿಂದ ಸಮ್ಮೇಳನ ಸ್ಥಳದಲ್ಲಿ ಒಂದು ಬುಕ್‌ಸ್ಟಾಲನ್ನು ಸಹ ಸ್ಥಾಪಿಸಲಾಗಿತ್ತು. ಸಾವಿರಾರು ಕಿರುಹೊತ್ತಗೆಗಳನ್ನು ಉಚಿತವಾಗಿ ಹಂಚಲಾಯಿತು.

## ಕೇರಳ ರಾಜ್ಯ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಫೆಬ್ರವರಿ 27 ಮತ್ತು 28ರಂದು

ಕೇರಳ ರಾಜ್ಯ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಫೆಬ್ರವರಿ 27 ಮತ್ತು 28ರಂದು ಮಲಪ್ಪುರಂ ಜಿಲ್ಲೆಯ ವಾಣಿಯಂಬಲದಲ್ಲಿ ಜರಗಲಿದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರ ಮೊಮ್ಮಗ ಹಾಗೂ ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿಯವರಾದ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾಟಿಸಲಿರುವರು.

ವಾಣಿಯಂಬಲದಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾದ ಮಸೀದಿ ಸಹ 27ರಂದು ಉದ್ಘಾಟಿಸಲ್ಪಡುವುದು.

---

### ನಿಧನ ವಾರ್ತೆಗಳು

# ಮೌಲಾನಾ ಮುಹಮ್ಮದ್ ಹಫೀಝ್ ಸಾಹೇಬ್ ಬಕಾಪುರಿ

ಅಹ್ಮದಿಯಾ ಜಮಾಅತಿನ ಉರ್ದು ಮುಖವಾಣಿ "ಬದರ್" ವಾರ ಪತ್ರಿಕೆಯ ಮಾಜಿ ಸಂಪಾದಕರೂ ಮದ್ರಸ ಅಹ್ಮದಿಯಾದ ಮಾಜಿ ಮುಖ್ಯೋಪಾಧ್ಯಾಯರೂ ಆಗಿದ್ದ ಮೌಲಾನಾ ಮುಹಮ್ಮದ್ ಹಫೀಝ್ ಸಾಹೇಬ್ ಬಕಾಪುರಿ ಅವರು ನವೆಂಬರ್ 5ರಂದು ರಾತ್ರೆ ಖಾದಿಯಾನಿನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಅವರಿಗೆ 57 ವರ್ಷ ಪ್ರಾಯವಾಗಿತ್ತು.

ಮೌಲಾನಾ ಸಾಹೇಬರು ಉತ್ತಮ ಪಂಡಿತರಾಗಿದ್ದು ಜಮಾಅತಿನ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಪತ್ನಿ, ಈರ್ವರು ಪುತ್ರರು, ಐವರು ಪುತ್ರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್‌ಫಿರತನ್ನೂ ಜನ್ನತ್‌ನಲ್ಲಿ ಉನ್ನತ ದರ್ಜೆಯನ್ನೂ ದಯಪಾಲಿಸಲಿ. ಸಂತಪ್ತ ಕುಟುಂಬದವರಿಗೆ ಸಹನೆಯನ್ನು ನೀಡಲಿ. ಆಮೀನ್.

# ಮಹ್‌ಮೂದ ಬೇಗಂ

ದೇವದುರ್ಗ ಅಹ್ಮದಿಯಾ ಘಟಕದ ಜನಾಬ್ ಅಬ್ದುಲ್ ಗಫೂರ್ ಸಾಹೇಬರ ಪತ್ನಿ ಮಹ್‌ಮೂದ ಬೇಗಂ ಅಲ್ಪ ಕಾಲದ ಅಸ್ವಸ್ಥತೆಯಿಂದ ಡಿಸೆಂಬರ್ 22ರಂದು ಮಣಿಪಾಲದಲ್ಲಿ ಮೃತರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಅವರಿಗೆ 25 ವರ್ಷ ಪ್ರಾಯವಾಗಿತ್ತು.

ಗಂಜಿಮಠದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ ಸುಮಾರು ಎರಡು ವರ್ಷಗಳಿಂದ ಅವರು ಉರ್ದು ಅಧ್ಯಾಪಿಕೆಯಾಗಿ ಸೇವೆಸಲ್ಲಿಸುತ್ತಿದ್ದರು. ಉತ್ತಮ ಗುಣನಡತೆಯ ಆದರ್ಶ ಅಧ್ಯಾಪಿಕೆಯಾಗಿದ್ದ ಅವರು ಶಾಲೆಯಲ್ಲಿ ಆದರಕ್ಕೆ ಪಾತ್ರರಾಗಿದ್ದರು.


ದಿವಂಗತರು ಪತಿ, ಇಬ್ಬರು ಪುತ್ರಿಯರು, ತಾಯಿ, ಇಬ್ಬರು ಸಹೋದರರು, ನಾಲ್ವರು ಸಹೋದರಿಯರು ಹಾಗೂ ಅನೇಕ ಬಂಧುಗಳನ್ನು ಅಗಲಿದ್ದಾರೆ. ಅಲ್ಲಾಹನು ದಿವಂಗತರಿಗೆ ಮಗ್‌ಫಿರತನ್ನೂ ಶೋಕತಪ್ತ ಬಂಧುಗಳಿಗೆ ತಾಳ್ಮೆಯನ್ನೂ ಕರುಣಿಸಲಿ. ಆಮೀನ್.

## AHAMDIYYA ENGLISH LITERTURE

| | | |
|---|---|---|
| 1. | Introduction to the Study of the Holy Quran<br>By Hazrath Mirza Bashiruddin Mahmud Ahmad | 16-00 |
| 2. | The Philosophy of the Teachings of Islam<br>By Hazrath Mirza Ghulam Ahmad | 6-00 |
| 3. | Characteristics of the Quranic Teachings<br>By Hazrath Mirza Bashiruddin Mahmud Ahmad | 2-00 |
| 4. | The Holy Prophet Muhammad<br>By Hazrath Mirza Bashiruddin Mahmud Ahmad | 2-00 |
| 5. | Ahmadiyya Movement<br>By Hazrath Mirza Bashiruddin Mahmud Ahmad | 2-25 |
| 6. | What is Ahmadiyyat?<br>By Hazrat Mirza Bashiruddin Mahmud Ahmad | 1-50 |
| 7. | The Economic Structure of Islamic Society<br>By Hazrat Mirza Bashiruddin Mahmud Ahmad | 2-50 |
| 8. | The New World Order of Islam<br>By Hazrat Mirza Bashiruddin Mahmud Ahmad | 2-25 |
| 9. | Truth About Khatme Nabuwath<br>By Hazrath Mirza Bashir Ahmad, M. A. | 2-50 |
| 10. | Islam and Slavery By Hazrat Mirza Bashir Ahmad, M. A. | 1-25 |
| 11. | Forty Gems of Beauty By Hazrat Mirza Bashir Ahmad, M. A. | 2-50 |
| 12. | Our Teachings By Hazrat Mirza Ghulam Ahmad | 1-00 |
| 13. | An Interpretation of Islam By Laura Veccia Vaglieri | 3-00 |
| 14. | Muhammad the Most Successful Prophet<br>By Moulana Sharif Ahmad Amini | 1-00 |
| 15. | The Goal of Man and the Way to Reach it<br>By Muhammad Karimullah Naujawan & Dr. Hafiz<br>Saleh Muhammad Allahdin, Ph. D. | 0-50 |
| 6. | Jesus in India By Hazrath Mirza Ghulam Ahmad | 2-25 |
| 7. | A Review of Christianity By Hazrat Mirza Ghulam Ahmad | 1-00 |
| 18. | Four Questions by a Christian and their Answers<br>By Hazrat Mirza Ghulam Ahmad | 1-25 |
| 19. | How to get rid of the Bondage of Sin<br>By Hazrat Mirza Ghulam Ahmad | 1-25 |
| 20. | Where Did Jesus Die? By J. D. Shams | 5-00 |
| 21. | Did Jesus Redeem Mankind? By Mirza B. M. Ahmad | 2-50 |
| 22. | The Tomb of Jesus By Sufi Mutiur Rahman Bengalee, M.A. | 1-00 |
| 23. | The Christian Doctrine of Atonement<br>By Dr. M. M. Sadiq, D. D., L. L. D., S. S. P. (London) | 1-00 |
| 24. | Why did early Christians accept Islam? By J. D. Shams | 1-00 |
| 25. | Latest Findings about Jesus Christ | 0-50 |

Write to : **Secretary for Mission Work**
Sadr Anjuman Ahmadiyya, Qadian - 143516 (Punjab)

Regd. with the Registrar of Newspapers for India Regd. No. R. N. 27354/75
**YUGARASHMI Kannada Quarterly, February 1988 / Tabligh 1367**




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಸ್ಟ್ಯಾಂಡರ್ಡ್ ಟೈಲರಿ
ಕಡೂರು, ಚಿಕ್ಕಮಗಳೂರು ಜಿಲ್ಲೆ
ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು, ಮೊದಲಾದ ಎಲ್ಲಾ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

**STANDARD TILERY**
KADUR
CHICKMAGALUR DIST.

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.